UNIVERSAL
LIBRARY
OU_198146
UNIVERSAL
LIBRARY

TIGHT BINDING BOOK



K 83·1
M91H
196146

# ಹಿಂದೂಸ್ಥಾನದ ಕಥೆ

ಮುಲ್ಕ್ ರಾಜ್ ಆನಂದ್

| | | |
|---|---|---|
| ಕ್ರಿ. ಪೂ. | | |
| ೩೦೦೦ ಮತ್ತು ಅದಕ್ಕೂ ಮೊದಲು | ಪೂರ್ವ ದ್ರಾವಿಡರು ಮತ್ತು ದ್ರಾವಿಡರು | ಮಹೇಂಜೊದಾರೊ ಮತ್ತು ಹರಪ್ಪ. |
| ೨೦೦೦ | ಆರ್ಯರು | **ವೇದಗಳು, ಉಪನಿಷತ್ತುಗಳು.** ಜಾತಿಪದ್ಧತಿಯ ಆರಂಭ. **ರಾಮಾಯಣ, ಮಹಾಭಾರತ.** |
| ೫೬೩-೪೮೩ | ಬುದ್ಧ | ಹೊಸ ದರ್ಶನಗಳು. |
| ೫೪೦-೪೬೮ | ಮಹಾವೀರ ಜಿನ | |
| ೫೦೦-೨೦೦ | | ತರುವಾಯದ **ಉಪನಿಷತ್ತುಗಳು.** ನಳಂದಾ ಮತ್ತು ತಕ್ಷಶಿಲಾ ವಿಶ್ವವಿದ್ಯಾನಿಲಯಗಳು. ವೈಷ್ಣವ, ಶೈವ ಧರ್ಮಗಳ ಆದಿ. |
| ೩೨೬ | ಅಲೆಕ್ಸಾಂಡರನ ದಂಡಯಾತ್ರೆ | |
| ೩೨೨-೧೮೪ | ಮೌರ್ಯ ಸಾಮ್ರಾಜ್ಯ | |
| | ಚಂದ್ರಗುಪ್ತ | ಚಾಣಕ್ಯನ **ಅರ್ಥಶಾಸ್ತ್ರ** |
| | ಅಶೋಕ | ಸ್ತಂಭ ಶಾಸನಗಳು. ಸಾಂಚಿ ಸ್ತೂಪ. ಗುಹಾಂತರ್-ದೇವಾಲಯಗಳು. ಸಿಲೋನಿನಲ್ಲಿ ಬೌದ್ಧಧರ್ಮ. |
| ಕ್ರಿ. ಪೂ. ೨೨೦- ಕ್ರಿ. ಶ. ೨೩೬ | ಆಂಧ್ರ ಸಾಮ್ರಾಜ್ಯ (ದಕ್ಷಿಣದಲ್ಲಿ) | ಅಜಂತಾ ಚಿತ್ರಕಲೆ. ಅಮರಾವತಿ ಸ್ತೂಪ. |

| ಕ್ರಿ. ಶ. | | |
|---|---|---|
| ೬೫-೨೨೫ | ಕುಷಾನ್ ಸಾಮ್ರಾಜ್ಯ (ಉತ್ತರದಲ್ಲಿ) | ಮಥುರಾ ಮತ್ತು ಗಾಂಧಾರ ಶಿಲ್ಪ. ಚೀಣ, ಟಿಬೆಟ್ಟುಗಳಲ್ಲಿ ಬೌದ್ಧ ಧರ್ಮ. |
| ೩೨೦-೬೫೦ | ಗುಪ್ತ ಸಾಮ್ರಾಜ್ಯ | ಸಾಹಿತ್ಯದ ಸ್ವರ್ಣಯುಗ, ಕಲೆಗಳ ಸ್ವರ್ಣಯುಗ. ಅಜಂತಾ. |
| | ವಿಕ್ರಮಾದಿತ್ಯ | ಫ಼ಾಹಿಯಾನನ ಆಗಮನ, ಕಾಳಿದಾಸ. |
| ೬೦೬-೬೪೭ | ಹರ್ಷ | ಹುಯುಾತ್ಸಾಂಗನ ಆಗಮನ. |
| ೫೭೦-೬೩೨ | ಪೈಗಂಬರ್ ಮಹಮದ್ | |
| ೫೦೦-೧೩೦೦ | ದಕ್ಷಿಣ ಸಾಮ್ರಾಜ್ಯಗಳು | |
| | ಚಾಲುಕ್ಯ ವಂಶ | ಬಾದಾಮಿಯ ಗುಹಾಂತರ್ದೇವಾಲಯಗಳು. |
| | ಪಲ್ಲವ ವಂಶ | ಕಂಜೀವರದ ದೇವಾಲಯ. |
| | ಪಾಂಡ್ಯ ವಂಶ | ಮಧುರೆ ದೇವಾಲಯ. |
| | ಚೋಳ ವಂಶ | ತಂಜಾವೂರು ದೇವಾಲಯ. ಕಂಚಿನ ವಿಗ್ರಹ ಮತ್ತುಶಿಲ್ಪ. ಎಲ್ಲೋರಾ ಮತ್ತುಎಲಿಫ಼್ಯಾಂಟಾ. |
| ೭೮೦ | ಶ್ರೀ ಶಂಕರಾಚಾರ್ಯ | ಬೌದ್ಧ ಧರ್ಮದ ಅವನತಿ. |
| ೯೯೮-೧೦೩೦ | ಘಜ್ನಿ ಮಹಮದ್ | ಮುಸ್ಲಿಮರ ಮೊದಲನೆಯ ಧಾಳಿ. |
| ೧೧೮೨ | ಪೃಥ್ವಿರಾಜ | |

# ಹಿಂದೂಸ್ಥಾನದ ಕಥೆ

# 'ಹಿಂದೂಸ್ಥಾನದ ಕಥೆ'

ಮೂಲ ಲೇಖಕರು:

ಮುಲ್ಕ್ ರಾಜ್ ಆನಂದ್

ಅನುವಾದಕರು:

ಅ. ನ. ಕೃಷ್ಣರಾಯರು

ಚಿತ್ರಕಾರರು:

ಜಾರ್ಜ್ ಕೀಟ್

ಕುತುಬ್

[ಎಲ್ಲ ಹಕ್ಕುಗಳನ್ನೂ ಕಾದಿಡಲಾಗಿದೆ]

ಮೊದಲನೆಯ ಮುದ್ರಣ:
ಜೂನ್ ೧೯೪೯

ಬೆಲೆ:
ಒಂದು ರೂಪಾಯಿ ಹನ್ನೆರಡಾಣೆ

ಬೆಂಗಳೂರಿನ ಅರಳೇಪೇಟೆಯಲ್ಲಿರುವ ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ ಯು. ನರಸಿಂಹ ಮಲ್ಯರಿಂದ ಮುದ್ರಿತವಾಯಿತು.
ಕುತುಬ್ ಪಬ್ಲಿಷರ್ಸ್ ಲಿಮಿಟೆಡ್, ರೀಗಲ್ ಬಿಲ್ಡಿಂಗ್ಸ್, ಅಪೊಲೊ ಬಂದರ್, ಬೊಂಬಾಯಿ ೧, ಇವರಿಗಾಗಿ
ಫಿರೋಜ್ ಕೆ. ಮಿಸ್ತ್ರಿ ಅವರಿಂದ ಪ್ರಕಟಿತವಾಯಿತು.

# ಮುನ್ನುಡಿ

ಸರ್ ವಾಲ್ಟರ್ ರ್‍ಯಾಲೀಯನ್ನು ಲಂಡನ್ನಿನ ಟವರಿನಲ್ಲಿ ಸೆರೆಹಾಕಿದಾಗ ಅವನು ಜಗತ್ತಿನ ಇತಿಹಾಸ ಬರೆಯಲಾರಂಭಿಸಿದನಂತೆ. ಒಂದು ದಿನ ಅವನಿಗೆ ತನ್ನ ಸಣ್ಣ ಕೋಣೆಯ ಕಿಟಕಿಯ ಕೆಳಗಾಗುತ್ತಿದ್ದ ಜಗಳ ಕೇಳಿಸಿತು. ಒಬ್ಬನ್ನೊಬ್ಬ ಕೊಲ್ಲುತ್ತಿದ್ದುದನ್ನೂ ನೋಡಿದ. ಕಾರಣವೇನೆಂದು ಪದೇ ಪದೇ ತನ್ನ ಜೈಲು ಅಧಿಕಾರಿಗಳನ್ನು ಕೇಳಿದ. ಕಾರಣ ತಿಳಿದುಬರಲಿಲ್ಲ. ಇದೇ ಕಾರಣವಾಗಿ ಅವನು ಇತಿಹಾಸ ಬರೆಯುವುದನ್ನು ಬಿಟ್ಟುಬಿಟ್ಟನಂತೆ. ಅವನ ವಾದವಿಷ್ಟೇ, ನನ್ನ ಕಿಟಕಿಯ ಕೆಳಗಾದ ಘಟನೆಯ ಸತ್ಯಾಂಶವೇ ನನಗೆ ತಿಳಿಯದಿದ್ದಮೇಲೆ ಎಂದೋ ಇತಿಹಾಸದಲ್ಲಿ ಆಗಿಹೋದ ಘಟನೆಗಳ ಸತ್ಯಾಂಶ ತಿಳಿಯುವುದೆಂತು?

ಹಿಂದೂಸ್ಥಾನದ ಈ ಸಣ್ಣ ಇತಿಹಾಸ ಬರೆಯುವಾಗ ರ್‍ಯಾಲೀನ ಕಥೆ ನನ್ನ ಸ್ಮೃತಿಪಥದಲ್ಲಿತ್ತು. ಹಿಂದೂಸ್ಥಾನದ ಸಾವಿರಾರು ವರ್ಷಗಳ ದೀರ್ಘ ಇತಿಹಾಸದಲ್ಲಿ ನಡೆದುದೆಲ್ಲವನ್ನೂ ತಿಳಿಯುವುದೆಂತು? ಆದ್ದರಿಂದ ನಾನು ಈ ಪುಸ್ತಕವನ್ನು ಅತ್ಯಂತ ಭಯಭಕ್ತಿಯಿಂದ, ಇದು ನಮ್ಮ ದೇಶದ ಇತಿಹಾಸದ ನಡವಳಿಕೆ ಭಾವನೆಗಳ ಕೇವಲ ವಿಹಂಗಮ ನೋಟವೆಂದು ತಿಳಿಸುತ್ತ ಅರ್ಪಿಸುತ್ತಿದ್ದೇನೆ. ಅದು ಇರುವಂತೆ ಅಂದರೆ—ಮಕ್ಕಳಿಗೆ (೯ರಿಂದ ೧೯) ಬರೆಯಲ್ಪಟ್ಟ ಸಣ್ಣ ಪ್ರಾಥಮಿಕ ಇತಿಹಾಸವೆಂದು

ಸ್ವೀಕೃತವಾಗಲೆಂದು ಹಾರೈಸುತ್ತೇನೆ. ಇದರಿಂದ ಅವರ ಉತ್ಸಾಹ ಕೆರಳಿ, ಹೆಚ್ಚು ಓದುವುದಕ್ಕೆ ಪ್ರೇರಣೆಯುಂಟಾದರೆ ಸಾಕು.

ಈ ಇತಿಹಾಸ ಬರೆಯುವಾಗ ನಾನು ಏನಾದರೂ ಪಾಠ ಕಲಿತಿದ್ದರೆ ಅದು ಇದು: ನಮ್ಮ ಇತಿಹಾಸದ ಸ್ವರ್ಣಯುಗಗಳಲ್ಲಿ, ಅಶೋಕ, ಚಂದ್ರಗುಪ್ತ, ಅಕಬರರ ಕಾಲಗಳಲ್ಲಿ ನಮ್ಮ ಜನ ಸಂಘಟನೆ, ಸಹನೆಗಳನ್ನು ಸಾಧಿಸಿದರು. ನಮ್ಮ ಭಾವನಾತರಂಗದ ಎಲ್ಲ ಓಟಗಳಿಗೂ ಇದು ನೆರವಾಯಿತು. ನಮ್ಮ ದೇಶದ ಕಾವ್ಯ, ಚಿತ್ರಕಲೆ, ಶಿಲ್ಪ, ಕುಶಲ ಕಲೆಗಳು ಒಂದು ವಿಚಿತ್ರಬಗೆಯ ಪ್ರತಿಭೆಯ ಫಲ. ಅದರಲ್ಲಿ ಸಹನಾಪೂರಿತ ದುಡಿಮೆಯೂ ತುಂಬಿದೆ. ಈ ಬಗೆಯ ಪ್ರಯತ್ನ ಚೀಣ, ಗ್ರೀಸ್ ಮತ್ತು ನವೋದಿತ ಯುರೋಪ್‌ಗಳಲ್ಲಿ ಮಾತ್ರ ಕಂಡುಬಂದಿದೆ. ಹೊಸ ಜಗತ್ತನ್ನು ಸೃಷ್ಟಿಸಲು ಬೇಕಾದ ಸಾಮಗ್ರಿ ವಿಜ್ಞಾನದಲ್ಲಿ ದೊರೆತಿದೆ. ಸದ್ಯಕ್ಕೆ ಬೇಕಾದದ್ದು ಜನತೆಯಲ್ಲಿ ಆತ್ಮಶ್ರದ್ಧೆ. ಸಮೃದ್ಧಿಯಿಂದ ಕೂಡಿದ ಲೋಕವನ್ನು ನಿರ್ಮಾಣಮಾಡಿ, ಅದರಿಂದ ಬಂದ ಜನ ಮಾನವತೆಯ ಪೂರ್ಣ ರೂಪವನ್ನರಿಯಲು ಅವಕಾಶಮಾಡಿಕೊಟ್ಟು, ಹೊಸ ವೈಭವವನ್ನು ಸೃಷ್ಟಿಸಲು ನಮ್ಮಿಂದ ಸಾಧ್ಯವೇ ಎಂದು ವಿಚಾರ ಮಾಡುತ್ತಿದ್ದೇನೆ.

ಮುಂಬಯಿ
೨೦ ಜುಲೈ ೧೯೪೮

ಮುಲ್ಕ್ ರಾಜ್ ಆನಂದ್

# ಪ್ರಸ್ತಾವನೆ

ಭಾರತದಲ್ಲಿ ಹುಟ್ಟಿ ಬೆಳೆದು, ಭಾರತದಿಂದ ಕೆಲಕಾಲ ಹೊರಗಿದ್ದು ವಿದೇಶಗಳಲ್ಲಿ ಕೀರ್ತಿಗಳಿಸಿ ಭಾರತದ ಹಿರಿಮೆಯನ್ನು ಹೆಚ್ಚಿಸಿದ ಸಾಹಿತಿಗಳಲ್ಲಿ ಡಾ. ಮುಲ್ಕ್ ರಾಜ್ ಆನಂದರೊಬ್ಬರು. ಇವರ ಕೂಲಿ, ಅಸ್ಪೃಶ್ಯ ಕಾದಂಬರಿಗಳು ಜಗತ್ತಿನ ಹಲವು ಭಾಷೆಗಳಿಗೆ ಅನುವಾದಗೊಂಡು ಭಾರತದ ಬಗ್ಗೆ ಸತ್ಯಾಂಶಗಳನ್ನು ಕೆಲಮಟ್ಟಿಗಾದರೂ ತಿಳಿಸಿವೆ.

ಡಾ. ಆನಂದರ 'ಹಿಂದೂಸ್ಥಾನದ ಕಥೆ' ನಮ್ಮ ನಾಡಿನ ಅಮರ ಇತಿಹಾಸ. ಹಿಂದೂಸ್ಥಾನ ಎಂದಿನ ವರೆಗೆ ಒಗ್ಗಟ್ಟಾಗಿ ತನ್ನತನವನ್ನು ಕಾಪಾಡಿಕೊಂಡು ಬಂತು ಅಂದಿನವರೆಗೆ ಮಹೋನ್ನತ ಕೆಲಸಗಳನ್ನು ಮಾಡಿದುದನ್ನು ನಾವು ಇದರಲ್ಲಿ ಕಾಣಬಹುದು. ಹಿಂದೂಸ್ಥಾನದ ಕಥೆ, ಕೊಲೆ, ರಕ್ತಪಾತ, ದಿಗ್ವಿಜಯ, ಅರಸುಮನೆತನದವರ ಹೋರಾಟದ ಕಥೆಯಲ್ಲ. ಅದು ಧರ್ಮ, ಸಂಸ್ಕೃತಿ, ಕಲೆ, ಜಾನಪದ ಜೀವನದ ಅಮರ ಚರಿತ್ರೆ. ಇತಿಹಾಸಕ್ಕೆ ಹೊಸ ಮುಖವನ್ನು ಕಲ್ಪಿಸಿ ನಮ್ಮ ನಾಡವರು ಅಭಿಮಾನಪಡುವ ರೀತಿ ಯಲ್ಲಿ ನಮ್ಮ ನಾಡಿನ ಕಥೆ ಹೇಳಿದ್ದಾರೆ ಡಾ. ಆನಂದರು. ಈ ಗ್ರಂಥ ನಮ್ಮ ದೇಶದ ಪ್ರತಿಯೊಂದು

ಮಗುವಿನ ಕೈಯಲ್ಲಿಯೂ ಇರಬೇಕು. ಹಿರಿಯರೂ ಈ ಗ್ರಂಥ ಓದಿ ಹಲವು ವಿಷಯಗಳನ್ನರಿಯಬಹುದು.

ಅನುವಾದ ಕಾರ್ಯವನ್ನು ನನಗೊಪ್ಪಿಸಿದ ಕುತುಬ್ ಸಂಸ್ಥೆಯ ಶ್ರೀ ಪಿ. ಕೆ. ಮಿಸ್ತ್ರಿಯವರಿಗೆ ನನ್ನ ಕೃತಜ್ಞತೆ ಸಲ್ಲಬೇಕಾಗಿದೆ.

'ಅನ್ನಪೂರ್ಣ'
ವಿಶ್ವೇಶ್ವರಪುರ, ಬೆಂಗಳೂರು ನಗರ
೩೦ ಜೂನ್ ೧೯೪೯

ಅ. ನ. ಕೃಷ್ಣರಾಯ

# ಹಿಂದೂಸ್ಥಾನದ ಕಥೆ

ಸಾವಿರಾರು ವರ್ಷಗಳ ಹಿಂದೆ, ಪ್ರಪಂಚ ಬಹಳ ಎಳೆಯದಾಗಿದ್ದಾಗ, ನಮ್ಮ ದೇಶ ಈಗಿರುವಂತಿರಲಿಲ್ಲ.

ಇದು ಬಹಳ ವರ್ಷಗಳ ಹಿಂದಿನ ಮಾತು. ಈ ವರ್ಷಗಳನ್ನೆಣಿಸುವುದೆಂದರೆ ಆಲದ ಮರದ ಎಲೆಗಳನ್ನೆಣಿಸಿದಷ್ಟೇ ಕಷ್ಟಸಾಧ್ಯ.

ಭೂಮಿ ಬೇರೆ ರೀತಿಯಲ್ಲಿತ್ತು. ಈಗ ನೆಲವಿರುವೆಡೆಯಲ್ಲಿ ಪ್ರಾಯಶಃ ಸಮುದ್ರವಿತ್ತು. ಆಗ ಅನೇಕ ಪ್ರವಾಹಗಳು, ಬಿರುಗಾಳಿ, ಭೂಕಂಪಗಳು ಪದೇ ಪದೇ ತಲೆದೋರುತ್ತಿದ್ದವು.

ನಿಮಗೆ ಗೊತ್ತಿರುವಂತೆ, ಹಿಂದೂಸ್ಥಾನ ಒಂದು ವಿಶಾಲ ತ್ರಿಕೋಣದಂತಿದೆ. ಜಗತ್ತಿನಲ್ಲಿಯೇ ಅತಿ ಎತ್ತರ ಪರ್ವತವೆನಿಸಿಕೊಂಡು ಮುಗಿಲು ಮುಟ್ಟುತ್ತಿರುವ ಹಿಮಾಲಯಾ ಎತ್ತರದಲ್ಲಿದೆ. ಅದರ ಕೆಳಗೆ ಗಂಗಾ, ಸಿಂಧು, ಬ್ರಹ್ಮಪುತ್ರಾ ನದಿಗಳಿಂದ ನೀರು ಹಾಯಿಸಿಕೊಳ್ಳುವ ವಿಶಾಲ ಬಯಲು

ಪ್ರದೇಶ. ಅದಕ್ಕೂ ಕೆಳಗೆ ವಿಂಧ್ಯಾಪರ್ವತರಾಶಿ, ಅದರ ಕೆಳಗೆ ನರ್ಮದಾ, ತಪತಿ, ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳಿಂದ ನೀರು ಹಾಯಿಸಿಕೊಳ್ಳುವ ಸಾನುಪ್ರದೇಶ. ಪೂರ್ವ ಪಶ್ಚಿಮ ಘಟ್ಟಗಳು ತ್ರಿಕೋಣದ ಅಕ್ಕಪಕ್ಕದಲ್ಲಿ ನಿಂತಿವೆ. ತ್ರಿಕೋಣದ ಕೊನೆಯಲ್ಲಿ ಕನ್ಯಾ ಕುಮಾರಿಯಿದೆ. ಹಿಂದೂಸಾಗರದ ಮಧ್ಯೆಯಿರುವ ಲಂಕಾದ್ವೀಪ ಪ್ರಾಯಶಃ ಒಂದು ಕಾಲಕ್ಕೆ ಭಾರತಭೂವಲಯಕ್ಕೆ ಕೂಡಿಕೊಂಡಿತ್ತೆಂದು ಕಾಣುತ್ತದೆ.

ಹಿಂದೂಸ್ಥಾನ ಪರ್ವತ, ಬಯಲು, ಅರಣ್ಯ, ನದಿಗಳಿಂದ ತುಂಬಿದ ಭವ್ಯದೇಶ. ಮಳೆಗಾಲದ ಮಳೆಗಳಿಂದ ಮತ್ತು ನದಿಗಳಿಂದ ಭೂಮಿ ಹಸನಾಗುತ್ತದೆ.

ಕ್ರಿಸ್ತಪೂರ್ವ ಐದು ಸಾವಿರ ವರ್ಷಗಳ ಹಿಂದೆ, ನಮ್ಮ ಪೂರ್ವಜರ ಅನೇಕ ಜನಾಂಗಗಳು, ಇಲ್ಲಿ ವರ್ಧಿಸಿದವು. ಕ್ರಿಸ್ತನು ಹುಟ್ಟುವುದರ ಮೊದಲಿನ ಕಾಲವನ್ನು ಕ್ರಿಸ್ತಪೂರ್ವವೆಂದೂ, ಕ್ರಿಸ್ತನ ಮರಣಾನಂತರದ ಕಾಲವನ್ನು ಕ್ರಿಸ್ತಾನಂತರವೆಂದೂ, ಕರೆಯುವ ವಾಡಿಕೆ.

ಭೂಮಿಯಲ್ಲಿ ಹುದುಗಿರುವ ಪ್ರಾಚೀನ ನಗರಗಳಲ್ಲಿ ದೊರೆತಿರುವ ತಲೆಬುರುಡೆಗಳ ಆಧಾರ ದಿಂದಲೂ ಇತಿಹಾಸದ ಆಧಾರದಿಂದಲೂ ನಮ್ಮ ಪೂರ್ವಜರ ಮೂರು ನಾಲ್ಕು ಕುಲಗಳಿದ್ದವೆಂದೂ, ಅವುಗಳು ಪರಸ್ಪರ ಬೆರೆಯುತ್ತಿದ್ದವೆಂದೂ ತಿಳಿಯಲು ಸಾಧ್ಯವಾಗಿದೆ. ಅವು ಯಾವುವೆಂದರೆ:

ದ್ರಾವಿಡರು—ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಪರ್ಷಿಯಾ, ಅರೇಬಿಯಾ, ಈಜಿಪ್ಟ್ ದೇಶ ಗಳಲ್ಲಿ ವಾಸವಾಗಿದ್ದ ಮೊದಲನೆಯ ಜನಾಂಗ.

ಮೆಡಿಟರೇನಿಯರು—ಗಂಗಾನದಿಯಿಂದ, ನೀಲ ಮೆಡಿಟರೇನಿಯನ್ ಸಮುದ್ರದವರೆಗೆ, ಆಗ ಪರಿಚಿತವಾಗಿದ್ದ ಲೋಕದಲ್ಲಿ ವಾಸವಾಗಿದ್ದವರು ಮತ್ತು ಸ್ಪೇನಿನ ತಾಮ್ರವರ್ಣದ ಪರ್ವತ ಪ್ರದೇಶದಲ್ಲಿ ವಾಸವಾಗಿದ್ದವರು.

ಆರ್ಯರು—ಮಧ್ಯ ಏಷ್ಯಾದ ಬಯಲು ಪ್ರದೇಶದಿಂದ ಹಿಂದೂಸ್ಥಾನಕ್ಕೆ ವಾಯುವ್ಯ ಮಾರ್ಗದಿಂದ ಬಂದವರು.

ಮೊಂಗೋಲರು—ಹಲವು ಸಲ ಧಾಳಿಮಾಡಿಕೊಂಡು ಬಂದವರು. ಅವರು ತಮ್ಮ ದನಕರುಗಳಿಗಾಗಿ ಹುಲ್ಲುಗಾವಲನ್ನು ಹುಡುಕಿಕೊಂಡು ಅಲೆದಾಡುತ್ತಿದ್ದ ಜನಾಂಗದವರು.

ಇವರಲ್ಲದೆ ಹೂಣರು, ಸಿಥಿಯನ್ನರು, ಅರಾಬರು, ಪಠಾಣರು, ಪರ್ಶಿಯಾ ದೇಶೀಯರೂ ನಮ್ಮ ದೇಶಕ್ಕೆ ಬಂದರು.



ನಮ್ಮ ದೇಶದಲ್ಲಿ ವಾಸಮಾಡಿದ ಹಲವು ಕುಲ ಜಾತಿಯವರಲ್ಲಿ ಪ್ರಾಚೀನ ಇತಿಹಾಸದ ಮೇಲೆ ಪ್ರಭಾವ ಬೀರಿದವರು ಮೂಲ ದ್ರಾವಿಡರು ಮತ್ತು ತರುವಾಯದ ಮುತ್ತಿಗೆಗಾರರಾದ ಆರ್ಯರು.




## ಮಹೇಂಜೊದಾರೊ

ಸಿಂಧವ ಕಣಿವೆಯು ಕೆಳಗೆ ಈಚೆಗೆ ದೊರೆತಿರುವ ಎರಡು ನಗರಗಳು ಇತಿಹಾಸಕಾಲದ ಪೂರ್ವವೃತ್ತಾಂತಜ್ಞಾನವನ್ನು ನಮಗೆ ಹೆಚ್ಚಿಸಲು ನೆರವಾಗಿವೆ. ಒಂದು ಸಿಂಧವಲ್ಲಿರುವ ಮಹೇಂಜೊದಾರೊ, ಇನ್ನೊಂದು ಪಂಜಾಬಿನ ಲೈಲಾಪುರದ ಬಳಿಯಿರುವ ಹರಪ್ಪ.


ಐದು ಸಾವಿರ ವರ್ಷಗಳ ಕೆಳಗೆ ಅಥವಾ ಅದಕ್ಕೂ ಪೂರ್ವದಲ್ಲಿ ಒಂದು ಹಿರಿಯ ಜನಾಂಗ ಜೀವಿಸಿದ್ದುದು ಅವುಗಳಿಂದ ತಿಳಿಯಬರುತ್ತದೆ. ಅವರೇ ಪೂರ್ವ ದ್ರಾವಿಡರು. ಈಗ ತಿಳಿದುಬಂದಿರುವಂತೆ ಅವರ ನಾಗರಿಕತೆಯೇ ಜಗತ್ತಿನಲ್ಲಿ ಅತ್ಯಂತ ಹಳೆಯದು. ಅವರಿಗೆ ಎಲ್ಲ ಗೊತ್ತಿದ್ದ ಹಾಗೆ ಕಾಣುತ್ತದೆ. ಅವರು ಹೊಲ ಊಳುತ್ತಿದ್ದರು. ಉತ್ತಮ ರಸ್ತೆ ಚರಂಡಿಗಳಿಂದ ನಗರಗಳನ್ನು

ನಿರ್ಮಾಣಮಾಡುತ್ತಿದ್ದರು. ಚಕ್ರಗಳ ಮೇಲೆ ಓಡುವ ಗಾಡಿಯನ್ನು ಮಾಡಿದವರಲ್ಲಿ ಅವರೇ ಮೊದಲಿಗರು. ಸುಂದರ ಸ್ನಾನಗೃಹಗಳನ್ನೊಳಗೊಂಡ ಮನೆಗಳನ್ನು ಕಟ್ಟುತ್ತಿದ್ದರು. ತಮ್ಮ ಹೆಂಗಸರಿಗಾಗಿ ಸೊಗಸಾದ ಆಭರಣಗಳನ್ನು ಮಾಡುತ್ತಿದ್ದರು. ಹತ್ತಿಯನ್ನು ನೂತು ಒಳ್ಳೆಯ ಬಟ್ಟೆಗಳನ್ನು ನೇಯುತ್ತಿದ್ದರು. ಬಟ್ಟೆಗಳ ಮೇಲೆ ಕಸೂತಿ ಕೆಲಸ ಮಾಡುತ್ತಿದ್ದರು. ಮಡಕೆಗಳನ್ನು ಮಾಡುತ್ತಿದ್ದರು. ವಿಗ್ರಹಗಳನ್ನು ಕಡೆಯುತ್ತಿದ್ದರು. ಮುದ್ರೆಗಳ ಮೇಲೆ ಪ್ರಾಣಿ ಚಿತ್ರಗಳನ್ನು ಕೆತ್ತುತ್ತಿದ್ದರು. ನರ್ತನ, ಸಂಗೀತ ಅವರಿಗೆ ಬರುತ್ತಿತ್ತು. ಈಗ ರೂಢಿಯಲ್ಲಿಲ್ಲದಿರುವ ಒಂದು ಭಾಷೆಯಲ್ಲಿ ಕಾಗದಪತ್ರ ಬರೆಯುತ್ತಿದ್ದರು.

ಇಂದಿನ ತಾಯಿತಂದೆಗಳು ತಮ್ಮ ಮಕ್ಕಳನ್ನು ಪ್ರೀತಿಸುವಂತೆ ಅವರೂ ತಮ್ಮ ಮಕ್ಕಳನ್ನು ಪ್ರೀತಿಸುತ್ತಿದ್ದರು. ಸುಟ್ಟ ಜೇಡಿಮಣ್ಣಿನಿಂದಲೂ ಕಲ್ಲಿನಿಂದಲೂ ಮಕ್ಕಳಿಗಾಗಿ ಬೊಂಬೆಗಳನ್ನು ಮಾಡುತ್ತಿದ್ದರು. ಇಂದಿನ ಮಕ್ಕಳು ಆಟಕ್ಕೆ ಉಪಯೋಗಿಸುವಂತಹ ಬೊಂಬೆಗಳು, ಕುರಿ, ಗಾಡಿ, ಎತ್ತು, ಕೊಕ್ಕು ಆಡಿಸುವ ಹಕ್ಕಿ, ಕಲ್ಲಿನ ಮತ್ತು ಸ್ಫಟಿಕದ ಗೋಲಿಗಳನ್ನು ಮಾಡುತ್ತಿದ್ದರು.



ಆ ಕಾಲದಲ್ಲಿ ತಾಯಿಗೆ ವಿಶೇಷ ಗೌರವ. ಆಕೆ ಮಕ್ಕಳಿಗೆ ಜನನವಿತ್ತು, ಅವರ ಯೋಗಕ್ಷೇಮ ವನ್ನು ನೋಡಿಕೊಳ್ಳುತ್ತಿದ್ದುದೇ ಕಾರಣವಾಗಿರಬಹುದು. ಹರಪ್ಪ–ಮಹೇಂಜೊದಾರೊಗಳಲ್ಲಿ ತಾಯಿ ಯನ್ನು ತಾಯಿ-ದೇವಿಯೆಂದು ಪೂಜಿಸುತ್ತಿದ್ದರು. ಕ್ರೀಟನಲ್ಲಿಯೂ ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲ ಪ್ರದೇಶಗಳಲ್ಲಿಯೂ ಶೀತಲ ನಾರ್ವೆಯಲ್ಲಿಯೂ, ಪಾಶ್ಚಾತ್ಯ ಯೂರೋಪಿನ ಉತ್ತರ ಭಾಗದಲ್ಲಿಯೂ ಅದೇ ಬಗೆಯ ಪೂಜೆ ಸಲ್ಲುತ್ತಿದ್ದುದು ಆಶ್ಚರ್ಯವೆನಿಸಬಹುದು. ಆ ಕಾಲದಲ್ಲಿ ಒಂದು ಭಾಗದ ಜನರ ಬಳಕೆ ಇನ್ನೊಂದು ಭಾಗದವರಿಗೆ ಇದ್ದಿರಬಹುದೆಂದು ತೋರುತ್ತದೆ.



ಮರಗಳು, ಹಕ್ಕಿಗಳು, ಪ್ರಾಣಿಗಳೂ ಪೂಜಾವಸ್ತುಗಳಾ ಗಿದ್ದವು. ಸಮೃದ್ಧಿಯಾಗಿ ಬೆಳಸನ್ನು ಕೊಡುತ್ತಿದ್ದ ಭೂಮಿ ಯನ್ನು ಮಾನವ ವಿಶೇಷವಾಗಿ ಪ್ರೀತಿಸುತ್ತಿದ್ದ.

## ದ್ರಾವಿಡರು


ಮಹೇಂಜೊದಾರೊ, ಹರಪ್ಪ ನಗರಗಳು ವರ್ಧಿಸುತ್ತಿದ್ದ ಆ ಕಾಲದಲ್ಲಿ ಹಿಂದೂಸ್ಥಾನದಲ್ಲಿ ಭವ್ಯವೂ ಸುಂದರವೂ ಆದ ದ್ರಾವಿಡ ನಾಗರಿಕತೆ ಬೆಳೆಯುತ್ತಿತ್ತು.

ನೆಲ ಊಳುವುದಕ್ಕೆ ಇಂದು ನಾವು ಉಪಯೋಗಿಸುವಂಥ ನೇಗಿಲುಗಳನ್ನು ದ್ರಾವಿಡರು ಮಾಡುತ್ತಿದ್ದರು. ಕಾಳು ಬಿಡಿಸುವುದಕ್ಕೆ ಮರದ, ಕಬ್ಬಿಣದ ಆಯುಧಗಳನ್ನು ಮಾಡುತ್ತಿದ್ದರು. ಕಾಳನ್ನು ಹಿಟ್ಟು ಮಾಡುವುದಕ್ಕೆ ಬೀಸುವಕಲ್ಲು ಮಾಡುತ್ತಿದ್ದರು. ಊಟಕ್ಕೆ ಉಪಯೋಗಿಸಲು ತಾಮ್ರದ, ಮಣ್ಣಿನ ಪಾತ್ರೆಗಳನ್ನು ಮಾಡುತ್ತಿದ್ದರು.

ಸುಗ್ಗಿಯ ಕಾಲದಲ್ಲಿ ಕುಣಿಯುವುದಕ್ಕೆ ಚರ್ಮದಿಂದ ಮಾಡಿದ ಡೋಲುಗಳನ್ನು ಉಪಯೋಗಿಸುತ್ತಿದ್ದರು. ಈ ಕುಣಿತಗಳಿಂದಲೇ ತಾಳದ ಬಗ್ಗೆ ಮತ್ತು ಕವಿತೆಯ ಬಗ್ಗೆ ನಮಗಿರುವ ಅಭಿರುಚಿ ಬೆಳೆದು ಬಂದಿರುವುದು.

ಅವರ ಮನಸ್ಸು ಕಲ್ಲು, ನದಿ, ಮತ್ತು ಪ್ರತಿಯೊಂದು ಜೀವಿತಪದಾರ್ಥದ ಸುತ್ತ ವಿಚಿತ್ರಭಾವನೆಗಳನ್ನು ಬೆಳಸಿತು. ಪ್ರತಿಯೊಂದು ಭೌತಿಕ ಶಕ್ತಿಯಲ್ಲಿಯೂ ದೈವಶಕ್ತಿಯನ್ನು ಅವರು ಕಾಣತೊಡಗಿದರು. ಯಕ್ಷರು, ಮರದೇವತೆಗಳು,





ನಾಗಿಣಿಗಳು, ಸರ್ಪದೇವರು, ಹಂಸಗಳು, ದಿವ್ಯದೇವತೆಗಳು, ಜಲದೇವತೆಗಳು ಇವರ ಅನೇಕ ಸುಂದರ ಕೆತ್ತನೆಯ ಕೃತಿಗಳ ವಸ್ತುಗಳಾಗಿವೆ. ದ್ರಾವಿಡರು ಜೀವನವನ್ನು ಫಲವತ್ತಾದ ಭೂಮಿಯನ್ನು ಎಷ್ಟು ಪ್ರೀತಿಸುತ್ತಿದ್ದರೆನ್ನುವುದಕ್ಕೆ ಇವು ನಿದರ್ಶನವಾಗಿವೆ. ಇವರಿಗೆ ಪ್ರಕೃತಿಯನ್ನು ಕಂಡರೆ ಭಯವೂ ಇತ್ತು. ಅದನ್ನು ಮಂತ್ರ, ಮಾಟ, ಯಂತ್ರಗಳಿಂದ ವಶ ಪಡಿಸಿಕೊಳ್ಳಲೆತ್ನಿಸುತ್ತಿದ್ದರು. ಇಂದು ನಾವು ಪ್ರಕೃತಿಯನ್ನು ವಿಜ್ಞಾನದ ಸಹಾಯದಿಂದ ಗೆಲ್ಲಲು ಪ್ರಯತ್ನಿಸುತ್ತಿದ್ದೇವೆ.

ಈ ದ್ರಾವಿಡರ ಖ್ಯಾತಿ ಬಹಳ ದೂರ ಹಬ್ಬಿತು. ಅವರು ವಾಸಿಸುತ್ತಿದ್ದ ಸಮೃದ್ಧಭೂಮಿಯ ಕೀರ್ತಿ ಹಲವರ ಕಣ್ಣು ಸೆಳೆಯಿತು. ಇಲ್ಲಿಂದ ಮುತ್ತಿಗೆಗಳು ತರಂಗ ತರಂಗವಾಗಿ ಆರಂಭವಾದವು.

## ಆರ್ಯರು

ಮುತ್ತಿಗೆ ಹಾಕಿದವರಲ್ಲಿ ಮೊದಲನೆಯವರು ಆರ್ಯರು. ಅವರು ಆಹಾರವನ್ನೂ ತಮ್ಮ ದನಕರುಗಳಿಗೆ ಹುಲ್ಲುಗಾವಲನ್ನೂ ಹುಡುಕುತ್ತಿದ್ದ ಗೋವಳರಾಗಿದ್ದರು. ಮಧ್ಯ ಏಷ್ಯಾಕಡೆಯಿಂದ ಅವರು ಬೇರೆ

ಬೇರೆ ಮಾರ್ಗಗಳಲ್ಲಿ ಬಂದಹಾಗೆ ತಿಳಿಯಬರುತ್ತದೆ. ಅವರ ಒಂದು ಮುಖ್ಯವಾದ ತಂಡ ಪಶ್ಚಿಮದ ಕಡೆ ತೆರಳಿ ಯೂರೋಪನ್ನು ಆಕ್ರಮಿಸಿತು. ಇನ್ನೊಂದು ತಂಡ ಇರಾಣ ಮತ್ತು ಆಫ್ಘಾನಿಸ್ಥಾನದ ಕಡೆ ತೆರಳಿ ಅಲ್ಲಿಂದ ಗಂಗಾ, ಸಿಂಧು ನದಿಗಳ ಕಣಿವೆಗಳಿಂದ ಹಿಂದೂಸ್ಥಾನಕ್ಕೆ ಬಂದಿತು.

ಅದಕ್ಕೇ ಹಿಂದೂದೇಶದ ಮತ್ತು ಯೂರೋಪಿನ ಜನತೆಯನ್ನು "ಆರ್ಯ ಸೋದರರು" ಎಂದು ಕರೆಯುವುದು ವಾಡಿಕೆ. ಅವರು ಒಂದೇ ಬುಡಕಟ್ಟಿನಿಂದ ಬಂದ ಕಾರಣವೊಂದು, ಅವರ ಭಾಷೆಗಳಿಗೆ ಒಂದೇ ಆಧಾರವಿರುವ ಕಾರಣವೊಂದು—ಎರಡೂ ಸೇರಿ ಈ ಹೆಸರು ಬರಲು ಅವಕಾಶವಾಯಿತು.

ಪೂರ್ವ, ಪಶ್ಚಿಮಗಳ ಕಡೆಗಾದ ಆರ್ಯ ದಿಗ್ವಿಜಯ ಬಹುಮಟ್ಟಿಗೆ ಒಂದೇ ತೆರನಾಗಿದೆ. ಈ ಬಿಳಿಯ ಬಣ್ಣದ ರೂಕ್ಷ ವಿಜೇತರು ಯೂರೋಪಿನ ದಕ್ಷಿಣ, ಪಶ್ಚಿಮ ಭಾಗದ ಜನರ ಮೇಲೆ ಬಿದ್ದು ಅವರನ್ನು ಬಡಿದು ನುಲಿದರು.

ಅದೇ ರೀತಿ ಹದ್ದುಗಳಹಾಗೆ ಇಳಿದು ಬಂದು ಶ್ರೀಮಂತ ದ್ರಾವಿಡರಮೇಲೆ ಬಿದ್ದು ಅವರನ್ನು ಜಯಿಸಿದರು.

ಪಶ್ಚಿಮದೇಶದಲ್ಲಿಯಾದಂತೆ, ಇಲ್ಲಿಯೂ ಗೆದ್ದವರು ಸೋತರು, ಸೋತವರು ಗೆದ್ದರು. ಏಕೆಂದರೆ ವಿಜೇತರು ಜಿತರಿಂದ ಅನೇಕ ವಿಷಯಗಳನ್ನು ಕಲಿತರು. ಸುಂದರವಾಗಿ ಬಾಳುವುದನ್ನೂ, ಸುಂದರವಾದ ವಸ್ತುಗಳನ್ನು ನಿರ್ಮಾಣಮಾಡುವುದನ್ನೂ ತಿಳಿದುಕೊಂಡರು.

ದ್ರಾವಿಡರೊಂದಿಗೆ ಅನೇಕ ಯುದ್ಧಗಳಾದ ಮೇಲೆ ಆರ್ಯರು ಉದಾತ್ತ ನಾಗರಿಕತೆಯನ್ನು ಕಟ್ಟಿದರು. ಹೀಗೆ ಹಿಂದೂಸ್ಥಾನದಲ್ಲಿ ಭವ್ಯವಾದ ವೇದಯುಗವಾರಂಭವಾಯಿತು. ಪಾಶ್ಚಾತ್ಯ ಜಗತ್ತಿನಲ್ಲಿ ಅನೇಕ ವರ್ಷಗಳಾನಂತರ ಪ್ರಾಚೀನ ಗ್ರೀಕನಾಗರಿಕತೆ ಆರಂಭವಾಯಿತು.

ಆರ್ಯರು ಕಟ್ಟಾಳುಗಳಾದ ಯೋಧರು. ಅವರು ತಮ್ಮೊಂದಿಗೆ ಬಿಲ್ಲು, ಬಾಣ, ಭರ್ಜಿ, ಚಕ್ರ ಮೊದಲಾದ ಉತ್ತಮ ಆಯುಧಗಳನ್ನು ತಂದುದರಿಂದ ಹಿಂದೂಸ್ಥಾನವನ್ನು ಗೆಲ್ಲಲು ಸಾಧ್ಯವಾಯಿತು. ದ್ರಾವಿಡರಲ್ಲಿ ಅಂಥ ಆಯುಧ ಸಾಮಗ್ರಿಯಿರಲಿಲ್ಲ, ಅವರು ಗೋವಳರು.

ಕೆಲವು ವರ್ಷಗಳ ಹಿಂದೆ ಹಿಂದೂಸ್ಥಾನದ ಸಂಸ್ಕೃತಿ ಆರ್ಯರ ಆಗಮನದಿಂದ ಆರಂಭವಾಯಿತೆಂಬ ಕಲ್ಪನೆಯಿತ್ತು. ನಮ್ಮ ಸಂಸ್ಕೃತಿಯ ಬಹುಭಾಗ ದ್ರಾವಿಡರಿಗೂ ಸೇರಿತ್ತೆಂದು ಈಗ ನಮಗೆ ಗೊತ್ತಾಗಿದೆ.

ಉತ್ತರದ ಮಹೋನ್ನತ ಶಾಂತ ಪರ್ವತಗಳನ್ನು ಕಂಡು ಆರ್ಯರು ಹೆದರಿದರು. ಮಳೆ ಧೂಳುಗಳ ಹೊಡೆತ, ಗುಡುಗು ಸಿಡಿಲುಗಳ ಆರ್ಭಟಕ್ಕೆ ಅವರು ಬೆಕ್ಕಸ ಬೆರಗಾದರು. ತುಂಬಿದ ನದಿಗಳು ಅವರ ಭೂಸಂಗ್ರಹಣವನ್ನು ತಡೆಗಟ್ಟಿದವು. ದ್ರಾವಿಡರೊಂದಿಗೆ ಅವರು ಅನೇಕ ಯುದ್ಧಗಳನ್ನು ಮಾಡ ಬೇಕಾಗಿ ಬಂತು.

ಪ್ರಕೃತಿಯ ಮಹಾಶಕ್ತಿಯನ್ನು ಸಂತವಿಸಲು ಆರ್ಯರು ಅನೇಕ ಮಂತ್ರ, ಗೀತೆಗಳನ್ನು ಹಾಡಿದರು. ಮೊದಲು ಅವು ಗೋವಳರು ಹಾಡುವ ಸಾಧಾರಣ ಹಾಡುಗಳಾಗಿದ್ದವು. ಬರಬರುತ್ತ

ತಮಗೆ ಅರ್ಥವಾಗದಿದ್ದುದನ್ನೆಲ್ಲಾ ದೇವರೆಂದು ಅವರು ಕರೆಯತೊಡಗಿದರು. ಚಂಡಮಾರುತ ಭಯಂಕರ ರುದ್ರ ಅಥವಾ ಶಿವನಾಯಿತು; ಗುಡುಗು ಸಿಡಿಲು ಇಂದ್ರನಾಯಿತು. ದ್ರಾವಿಡರ ದೇವರುಗಳಾದ ತಾಯಿದೇವಿ ಅದಿತಿ ಮತ್ತು ಅನೇಕ ದೇವತೆಗಳನ್ನು ಅವರು ಅಂಗೀಕರಿಸಿಕೊಂಡರು. ದ್ವೀಪದ ಸಮೀಪವಿರುವ ಒಳಪ್ರದೇಶಕ್ಕೆ ಅವರು ಕಾಲಿಟ್ಟಂತೆಲ್ಲಾ ಅವರ ಕಾವ್ಯ ಹೆಚ್ಚು ಗಂಭೀರವಾಗುತ್ತ ಬಂತು. ಇಲ್ಲಿ ಅವರ ಕೆಲವು ಸುಂದರ ಕಾವ್ಯಭಾಗಗಳನ್ನು, ಪ್ರಾಯಶಃ ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನವಾದ ಕಾವ್ಯವನ್ನು ಕೊಡಲಾಗಿದೆ.

ಸೂರ್ಯನನ್ನುದ್ದೇಶಿಸಿದ ಈ ಬಗೆಯ ಗೀತಗಳಿವೆ:

"ಓ ಸೂರ್ಯಾ, ಬೆಳಕು ಮಾಡುವವನೇ
ವೇಗಶಾಲಿಯೂ ಸುಂದರನೂ ನೀನಾಗಿರುವೆ
ಪ್ರಭಾಮಯ ಜಗತ್ತನ್ನು ಬೆಳಗುತ್ತಿರುವೆ"

ಸೂರ್ಯಾಸ್ತವನ್ನು ಕುರಿತು:

"ಈ ಬೆಳಕು ಬಂದಿದೆ, ಎಲ್ಲ ಬೆಳಕುಗಳಿಗಿಂತ ಸುಂದರ.
ದೂರ ತನ್ನ ಪ್ರಭೆ ಚಾಚುವ ದಿವ್ಯ ಬೆಳಕು.
ಇರುಳು ಬೆಳಗಿಗೆ ಜನನಸ್ಥಾನವನ್ನು ತೆರವು ಮಾಡಿಕೊಟ್ಟಿದೆ."

ಸೃಷ್ಟಿಯನ್ನುದ್ದೇಶಿಸಿದ ಈ ಗೀತೆ ಬಹಳ ಭಾವನಾಪ್ರದವಾಗಿ ಸುಂದರವಾಗಿದೆ:

"ಭೂಮಿ, ಆಕಾಶ, ವಾಯು ಅದರಾಚೆ ಇರಲಿಲ್ಲ.
ಇತ್ತೇನು ಎಲ್ಲಿ? ಅದಕ್ಕೆ ಆಶ್ರಯ ಕೊಟ್ಟುದು ಯಾವದು?
ಆಳವರಿಯದ ನೀರು ಅಲ್ಲಿತ್ತೇ?"

ಈ ಗೀತೆಗಳನ್ನು ಕೆಲ ಕಾಲಾನಂತರ ಪುಸ್ತಕಗಳಲ್ಲಿ ಸಂಗ್ರಹಿಸಿದರು. ಅವೇ ಜಗತ್ತಿನಲ್ಲಿ ಪ್ರಾಯಶಃ ಮೊದಲನೆಯ ಗ್ರಂಥಗಳು—ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ.

ಆರ್ಯರಿಂದ ಪರಾಜಯಗೊಂಡ ದ್ರಾವಿಡರಿಗೆ ವೇದಗಳು ತಮ್ಮ ಸೌಂದರ್ಯ, ಆಳ, ಭಾವನಾ ಪ್ರೌಢಿಮೆಗೆ ಋಣಿಯಾಗಿವೆ. ಎಲ್ಲ ವಿಜೇತರಂತೆ ಆರ್ಯರೂ ಸೋತವರನ್ನು ವಿಶ್ವಾಸದಿಂದ ಕಾಣುತ್ತಿರಲಿಲ್ಲ. ದ್ರಾವಿಡರನ್ನು ಅವರು ಮೊಂಡು ಮೂಗಿನ ದಸ್ಯುಗಳೆಂದು ಕರೆಯುತ್ತಿದ್ದರು. ತರುವಾಯದ ವೇದಗಳಲ್ಲಿ ಆರ್ಯರು ತಮ್ಮ ಕ್ಷತ್ರಿಯ ಕುಲವನ್ನು ಶ್ರೇಷ್ಠವಾದುದೆಂದು ಕರೆದುಕೊಂಡು, ದಸ್ಯುಗಳಿಗೆ ಸಮಾಜದಲ್ಲಿ ಕೀಳು ಸ್ಥಾನವನ್ನು ಕಲ್ಪಿಸಿದರು.

ಮೊದಲು ಈ ತಿರಸ್ಕಾರ ವರ್ಣವನ್ನು ಅವಲಂಬಿಸಿತ್ತು. ಅನಂತರ ಕೀಳು ಕೆಲಸಮಾಡುವ ಕಾರಣವೂ ಬಂದು ಸೇರಿಕೊಂಡಿತು.

ಹೀಗೆ ಜಾತಿ ಪದ್ಧತಿ ಹುಟ್ಟಿಕೊಂಡಿತು. ಈ ಪದ್ಧತಿಯಂತೆ ಜನರು ನಾಲ್ಕು ವಿಭಾಗವಾಗಿ ವಿಂಗಡಿಸಲ್ಪಟ್ಟರು:

ಬ್ರಾಹ್ಮಣರು, ಅತ್ಯುತ್ತಮ ಜಾತಿ. ಪುರೋಹಿತರು, ವಿದ್ಯಾವಂತರು.

ಕ್ಷತ್ರಿಯರು, ಅಥವಾ ಯೋಧರು. ಆಳರಸರು ಮತ್ತು ಉಳುಮೆ ಮಾಡುವವರು.

ವೈಶ್ಯರು ಅಥವಾ ವ್ಯಾಪಾರಿಗಳು.

ಶೂದ್ರರು, ನಾಲ್ಕನೆಯ ಮತ್ತು ಕೀಳು ವರ್ಣದವರು.

ಸೇವಕರು, ಹೀನ ವೃತ್ತಿಯನ್ನವಲಂಬಿಸುವವರು. ಇವರ ಕೆಳಗೆ ಸಮಾಜಬಾಹಿರರಾದ ಅಸ್ಪೃಶ್ಯರು.

ಈ ಕಾಲಕ್ಕೆ ಜಾತಿಪದ್ಧತಿ ಅಥವಾ ವರ್ಣಾಶ್ರಮ ಆರಂಭವಾಗಿತ್ತು. ಕೆಳಗಿನ ಜಾತಿಯವರು ಮೇಲು ಜಾತಿಯವರ ವೃತ್ತಿಯನ್ನು ಅವಲಂಬಿಸುವುದರ ಮೂಲಕ ಆ ಜಾತಿಗೆ ಹೋಗಬಹುದಾಗಿತ್ತು. ಕೆಳಗಣ ಜಾತಿಯವರ ವೃತ್ತಿಯನ್ನವಲಂಬಿಸಿ ಕೀಳು ಜಾತಿಗೂ ಇಳಿಯಬಹುದಾಗಿತ್ತು.



ಕೀಳುವರ್ಗದಲ್ಲಿದ್ದವರು ತಮ್ಮ ಸ್ಥಾನಮಾನಗಳನ್ನು ಕುರಿತು ಚರ್ಚೆಯಾರಂಭಿಸಿದರು. ಮೇಲಕ್ಕೇಳಬೇಕೆಂದೂ, ಉತ್ತಮ ವರ್ಗಗಳಿಗೆ ಸೇರಬೇಕೆಂದೂ ಅವರು ಪ್ರಯತ್ನಿಸತೊಡಗಿದರು.

ಈ ಕಾಲದ ವಿಚಾರಪರರಾದ ಋಷಿಗಳ ಪ್ರಯತ್ನದಿಂದ ನೂರಾರು ಉಪನಿಷತ್ತುಗಳು ಹುಟ್ಟಿಕೊಂಡವು. ಅವುಗಳನ್ನು ಅರಣ್ಯಗಳಲ್ಲಿ ವಾಸಿಸುತ್ತಿದ್ದ ಋಷಿಗಳು ಬರೆದುದರಿಂದ ಅವುಗಳಿಗೆ "ಆರಣ್ಯಕ"ಗಳೆಂಬ ಹೆಸರೂ ಇದೆ. ಅವುಗಳಲ್ಲಿ ಹದಿಮೂರು ಮುಖ್ಯವಾದವು.

ಇವುಗಳಲ್ಲಿ ಜಾಣರು ಜೀವನ, ಸಾವಿನ ಅರ್ಥ, ಸತ್ತಾನಂತರ ಆಗುವ ಅವಸ್ಥೆಗಳನ್ನು ವಿವೇಚಿಸಿದ್ದಾರೆ. ಎಲ್ಲ ವಿಷಯಗಳ ಮೇಲೂ ಕಥೆಗಳು, ಉಪಾಖ್ಯಾನಗಳು, ಗಾದೆಗಳು ತುಂಬಿವೆ. ಅವುಗಳಿಂದ ದಿವ್ಯವಾದ ದರ್ಶನ ದೊರಕುತ್ತದೆ.

ಉಪನಿಷತ್ತುಗಳ ಮತದಂತೆ ದೇವರೊಬ್ಬನೇ. ಅವನು ಜೀವನವನ್ನು ನಿರ್ಮಾಣಮಾಡಲು ಮನಸ್ಸು ಮಾಡಿದುದರಿಂದ ಜಗತ್ತು ಹುಟ್ಟಿಕೊಂಡಿತು. ದೇವರನ್ನು ಪ್ರೀತಿಸಿ ಅವನಲ್ಲಿ ಒಂದಾಗಬೇಕೆಂಬುದು ಮನುಷ್ಯನ ಆಕಾಂಕ್ಷೆ. ಅಲ್ಲಿಯವರೆಗೆ ಅವನು ಮಾನವನಾಗಿಯೋ ಪ್ರಾಣಿಯಾಗಿಯೋ ಹಲವು ಸಲ ಹುಟ್ಟಿ ಬರಬೇಕು. ಮಾನವ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದರೆ ಅವನಿಗೆ ಪುನರ್ಜನ್ಮವಿಲ್ಲ. ಆಗವನು ದೇವರೊಂದಿಗೆ ಸೇರಿಕೊಳ್ಳುತ್ತಾನೆ. ಆ ಕಾಲದ ಜಗತ್ತಿನಲ್ಲಿ ಇಂಥ ತಿಳಿಯಾದ ಜೀವನ ಜ್ಞಾನ ಪಡೆದಿದ್ದವರು ತೀರ ವಿರಳ. ತರುವಾಯ ಬಂದ ನಮ್ಮ ಪೂರ್ವಜರು ಈ ಜ್ಞಾನಕ್ಕೆ ಹೆಚ್ಚೇನೂ ಸೇರಿಸಲಾಗಲಿಲ್ಲ.

# ರಾಮಾಯಣ

ಆರ್ಯರು ವೇದೋಪನಿಷತ್ತುಗಳಲ್ಲಿ ತಮ್ಮ ಭಾವನೆ, ವಿಚಾರಗಳನ್ನು ವ್ಯಕ್ತಪಡಿಸಿದಂತೆ, ಅವರು ಹಿಂದೂಸ್ಥಾನವನ್ನು ಗೆದ್ದ ಕಥೆ ರಾಮಾಯಣ, ಮಹಾಭಾರತವೆಂಬ ಎರಡು ಮಹಾಕಾವ್ಯಗಳಲ್ಲಿ ಚಿತ್ರಿತವಾಯಿತು. ಈ ಮಹಾಕಾವ್ಯಗಳಲ್ಲಿ ನೈಜವಿಷಯಗಳೊಂದಿಗೆ ಕವಿಕಲ್ಪನೆಯ ಕಥೆಗಳೂ ಸೇರಿಕೊಂಡಿವೆ.

ರಾಮಾಯಣ, ನಲವತ್ತೆಂಟು ಸಾವಿರ ಪದ್ಯಗಳುಳ್ಳ ಮಹಾಕಾವ್ಯ. ಅದನ್ನು ಬರೆದವನು ಮಹರ್ಷಿ ವಾಲ್ಮೀಕಿ. ರಾಮಾಯಣದ ಕಥೆ ಹೀಗಿದೆ:

ಈಗಿನ ಔಧದಲ್ಲಿರುವ ಫೈಜಾಬಾದ್ ಹಿಂದೆ ಅಯೋಧ್ಯೆಯೆನಿಸಿಕೊಂಡಿತ್ತು. ಅಯೋಧ್ಯೆಯನ್ನು ರಾಜಧಾನಿಯಾಗಿ ಮಾಡಿಕೊಂಡು, ಒಂದಾನೊಂದು ಕಾಲದಲ್ಲಿ ದಶರಥರಾಜ ದೊಡ್ಡ ರಾಜ್ಯವನ್ನಾಳುತ್ತಿದ್ದ.

ಅವನ ಹಿರಿಯ ಹೆಂಡತಿ ಕೌಸಲ್ಯೆಯ ಮಗನೇ ರಾಮ. ಎರಡನೆಯ ಹೆಂಡತಿ ಕೈಕೇಯಿಯ ಮಗನೇ ಭರತ. ಮೂರನೆಯ ಹೆಂಡತಿ ಸುಮಿತ್ರೆಯ ಮಕ್ಕಳೇ ಲಕ್ಷ್ಮಣ, ಶತ್ರುಘ್ನರು.

ವಿದೇಹರಾಜನಾದ ಜನಕನ ಮಗಳಾದ ಸೀತೆಯನ್ನು ರಾಮ ಸ್ವಯಂವರದಲ್ಲಿ ವರಿಸಿದ. ಹೆಂಗಸರು ಗಂಡಂದಿರನ್ನು ಆಯ್ದುಕೊಳ್ಳುವ ಪದ್ಧತಿಯೇ ಸ್ವಯಂವರ. ಮಿಕ್ಕ ಯಾವ ರಾಜಕುಮಾರನೂ



ಬಗ್ಗಿಸಲಾರದಂಥ ದೊಡ್ಡ ಬಿಲ್ಲನ್ನು ರಾಮ ಮುರಿದ. ಮದುವೆಯಾದ ಮೇಲೆ ಅವನು ಅಯೋಧ್ಯೆಗೆ ಹಿಂದಿರುಗಿದ.

ಭರತನ ತಾಯಿಯಾದ ರಾಣಿ ಕೈಕೇಯಿ ಅಸೂಯಾಪರಳಾದಳು. ರಾಮನ ಬದಲು ತನ್ನ ಮಗ ಭರತನಿಗೆ ರಾಜ್ಯ ದೊರೆಯಬೇಕೆಂದು ಅವಳ ಆಕಾಂಕ್ಷೆಯಾಗಿತ್ತು. ಹಿಂದೆ ಒಂದು ಸಮಯದಲ್ಲಿ ಆಕೆ ತನ್ನ ಗಂಡ ದಶರಥನ ಪ್ರಾಣವನ್ನು ಕಾಪಾಡಿದ್ದಳು. ಯುದ್ಧದಲ್ಲಿ ಅವನಿಗೆ ವಿಶೇಷ ಗಾಯಗಳಾದಾಗ ಕೈಕೇಯಿ ಉಪಚರಿಸಿ ಅವನ ಪ್ರಾಣ ಕಾಪಾಡಿದ್ದಳು. ಆಗ ದಶರಥ ಕೈಕೇಯಿ ಕೇಳಿದ ವರವನ್ನು ಕೊಡುವುದಾಗಿ ವಾಗ್ದಾನಮಾಡಿದ್ದ. ವರ ಪಡೆದಾಗ ಸುಮ್ಮನಿದ್ದ ಕೈಕೇಯಿ ಈಗ ಭರತನಿಗೆ

ರಾಜ್ಯಾಭಿಷೇಕವಾಗಬೇಕೆಂದೂ, ರಾಮನಿಗೆ ಹದಿನಾಲ್ಕುವರ್ಷ ವನವಾಸ ಪ್ರಾಪ್ತವಾಗಬೇಕೆಂದೂ ಬಯಸಿದಳು. ಮೊದಲು ದಶರಥ ಮಹಾರಾಜ ಇದಕ್ಕೊಪ್ಪಲಿಲ್ಲ. ಕೈಕೇಯಿ ಹಟಹಿಡಿದಳು. ಕತ್ತಲೆ ಕೋಣೆ ಸೇರಿದಳು. ಕೊನೆಗೆ ದಶರಥ ಅವಳ ಮಾತಿಗೆ ಒಪ್ಪಬೇಕಾಗಿ ಬಂತು.




ರಾಮನನ್ನು ವನವಾಸಕ್ಕಟ್ಟಿದ್ದ ದುಃಖದಲ್ಲಿ ಮುದಿ ದೊರೆ ಮೃತಿಹೊಂದಿದ. ಆದರೆ ರಾಮನ ಬಗ್ಗೆ ತುಂಬ ಅಭಿಮಾನವಿಟ್ಟಿದ್ದ ಭರತ ರಾಜ್ಯಸೂತ್ರಗಳನ್ನು ವಹಿಸಲು ನಿರಾಕರಿಸಿದ. ರಾಮನ ಪಾದುಕೆಗಳನ್ನು ಸಿಂಹಾಸನದ ಮೇಲಿಟ್ಟು ಅವನ ಪ್ರತಿನಿಧಿಯಾಗಿ ರಾಜ್ಯವಾಳಿದ.

ರಾಮನೊಂದಿಗೆ ವನವಾಸಕ್ಕೆ ಸೀತಾಲಕ್ಷ್ಮಣರೂ ಹೊರಟರು. ಮೂವರೂ ವಿಂಧ್ಯಾಪರ್ವತದ ತಪ್ಪಲಿನಲ್ಲಿ ಸಂಚರಿಸಿದರು. ಒಂದು ದಿನ ಒಬ್ಬ ರಾಕ್ಷಸಿ ರಾಮನನ್ನು ಕಂಡು ಮೋಹಗೊಂಡು ಅವನನ್ನು ಒಲಿಸಿಕೊಳ್ಳಲೆತ್ನಿಸಿದಳು. ರಾಮ ಅದಕ್ಕೊಪ್ಪದಿರಲು ಸೀತೆಯನ್ನು ಕದ್ದೊಯ್ಯುವುದಕ್ಕೆ ತನ್ನ ಅಣ್ಣ ಹತ್ತು ತಲೆಯ ರಾವಣನನ್ನು ಕರೆತಂದಳು.

ರಾವಣ ತನ್ನ ಮಾಯೆಯಿಂದ ನಿರ್ಮಿಸಿದ ಒಂದು ಚಿನ್ನದ ಜಿಂಕೆಯನ್ನು ಸೀತೆಯ ಬಳಿಗೆ

ಕಳಿಸಿಕೊಟ್ಟ. ಸೀತೆ ಅದನ್ನು ಕಂಡು ಮನಸೋತು ತನಗೆ ಬೇಕೆಂದು ಬಯಸಿ ಅದನ್ನು ಹಿಡಿದು ತರಲು ರಾಮನನ್ನು ಕಳುಹಿಸಿಕೊಟ್ಟಳು. ಬಹಳ ಹೊತ್ತಾದರೂ ರಾಮ ಹಿಂದಿರುಗದಿರಲು ನೋಡಿಬಾರೆಂದು ಲಕ್ಷ್ಮಣನನ್ನೂ ಕಳುಹಿಸಿಕೊಟ್ಟಳು. ಸೀತೆಯೊಬ್ಬಳನ್ನೇ ಬಿಟ್ಟುಹೋಗಲು ಇಷ್ಟಪಡದ ಲಕ್ಷ್ಮಣ ಆಕೆಯ ಸುತ್ತಲೂ ಒಂದು ಮಾಯಾಚಕ್ರ ಬರೆದು ಅದರ ಒಳಗೇ ಇರಹೇಳಿ ಹೊರಟ. ಸೀತೆ ಆ ಚಕ್ರವನ್ನು ಬಿಟ್ಟು ಹೊರಗೆ ಬರಬಾರದೆಂದು ಲಕ್ಷ್ಮಣ ಖಂಡಿತವಾಗಿ ತಿಳಿಸಿದ್ದ.

ಸೀತೆ ಒಬ್ಬಳೇ ಇದ್ದುದನ್ನು ಕಂಡು ರಾವಣ ಸನ್ಯಾಸಿ ವೇಷ ಧರಿಸಿ ಭಿಕ್ಷೆ ಕೇಳಲು ಬಂದ. ಸೀತೆ ಚಕ್ರದ ಹೊರಗೆ ಬರಲು ಸಾಧ್ಯವಿಲ್ಲವೆಂದಳು. ರಾವಣ



ಕಾಯಿಲೆ ನಟಿಸಿ ಸ್ವಲ್ಪ ನೀರು ಬೇಕೆಂದು ಕೇಳಿದ. ಕನಿಕರದಿಂದ ಸೀತೆ ಚಕ್ರವನ್ನು ಬಿಟ್ಟು ಹೊರಗೆ ಬಂದಳು. ರಾವಣ ಆಕೆಯನ್ನು ಹಿಡಿದೆತ್ತಿಕೊಂಡು, ತನ್ನ ವಿಮಾನದಲ್ಲಿ ಲಂಕೆಗೆ ಹೊರಟುಬಿಟ್ಟ.

ತಾನು ಹೋದೆಡೆ ರಾಮನಿಗೆ ತಿಳಿಯಲೆಂದು ಸೀತೆ ದಾರಿಯುದ್ದಕ್ಕೂ ತನ್ನ ಆಭರಣಗಳನ್ನು ಚೆಲ್ಲುತ್ತಾ ಹೋದಳು. ಪಕ್ಷಿರಾಜ ಜಟಾಯುವಿನಿಂದ ರಾಮನಿಗೆ ಸೀತೆಯನ್ನು ರಾವಣ ಎತ್ತಿಕೊಂಡು ಹೋದ ವಿಷಯ ತಿಳಿಯಿತು. ರಾಮಲಕ್ಷ್ಮಣರು ಕಪಿರಾಜನಾದ ಹನುಮಂತನೊಂದಿಗೆ ಕಪಿಸೈನ್ಯ ಸಮೇತ ಲಂಕೆಗೆ ತೆರಳಿದರು.



ಭೂಮಿ ಕೊನೆಯಾಗುವಲ್ಲಿಗೆ ಹನುಮಂತನ ಕಪಿಸೇನೆ ಬಂದಿತು. ಅವರು ಸಮುದ್ರಕ್ಕೆ ದೊಡ್ಡ ದೊಡ್ಡ ಕಲ್ಲುಗಳನ್ನೆಸೆದು, ಒಂದು ಸೇತುವೆಕಟ್ಟಿ ಲಂಕೆಯನ್ನು ಪ್ರವೇಶಿಸಿದರು. ಲಂಕೆಯಲ್ಲಿ ಹನುಮಂತ, ರಾವಣ ಹೊತ್ತಿಸಿದ ಬಾಲದ ಬೆಂಕಿಯಿಂದ ರಾಜಧಾನಿಯನ್ನು ಸುಟ್ಟುಬಿಟ್ಟ. ರಾವಣನಿಗೂ ಅವನ ರಾಕ್ಷಸ ಸೈನ್ಯಕ್ಕೂ ಸೋಲಾಯಿತು. ರಾಮ ರಾವಣನನ್ನು ಬಾಣದಿಂದ ಹೊಡೆದು ಕೊಂದುಬಿಟ್ಟ. ಹನುಮಂತ





ಸೀತೆಯನ್ನು ರಾಮನ ಬಳಿಗೆ ಕರೆದುಕೊಂಡು ಬಂದ. ಈ ವೇಳೆಗೆ ವನವಾಸದ ಅವಧಿಯೂ ಪೂರೈಸಿತ್ತು. ಅವರೆಲ್ಲಾ ರಾವಣನ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಹಿಂದಿರುಗಿದರು. ಭರತ ರಾಮನನ್ನು ಪ್ರೀತಿಯಿಂದ ಸ್ವಾಗತಿಸಿ ರಾಜ್ಯವನ್ನು ಅವನಿಗೆ ಒಪ್ಪಿಸಿಕೊಟ್ಟ.

ಅಯೋಧ್ಯೆಯ ಜನ ಸೀತೆಯಬಗ್ಗೆ ಕೆಟ್ಟಮಾತುಗಳನ್ನಾಡತೊಡಗಿದರು. ರಾವಣನ ಸೆರೆಯಲ್ಲಿ ಸೀತೆ ಬಹಳ ವರ್ಷಗಳಿದ್ದುದರಿಂದ ಆಕೆ ನೀತಿಯನ್ನು ಕಳೆದುಕೊಂಡಿದ್ದಾಳೆಂದು ಜನ ಕೂಗಿತು. ತನ್ನ ಪರಿಶುದ್ಧತೆಯನ್ನು ತೋರಿಸಲು ಸೀತೆ ಬೆಂಕಿಯ ಮೇಲೆ ನಡೆಯಬೇಕಾಯಿತು. ಆದರೂ ಜನ ದೂರುವುದು ತಪ್ಪಲಿಲ್ಲ. ರಾವಣನ ವಿಚಾರ ತನ್ನ ಗೆಳತಿಯರಿಗೆ ಹೇಳುವುದಕ್ಕೆ ಸೀತೆ ಅವನ ಚಿತ್ರವನ್ನು ರಚಿಸಿದ್ದಳು. ರಾಮ ಆ ಚಿತ್ರವನ್ನು ನೋಡಿ ಅಸೂಯೆಗೊಂಡು ಸೀತೆಯನ್ನು ಕಾಡಿಗೆ ಅಟ್ಟಿದ.

ಸೀತೆ ಕಾಡಿಗೆ ಹೋಗಿ ಋಷಿಕವಿ ವಾಲ್ಮೀಕಿಯ ಆಶ್ರಮದಲ್ಲಿ ವಾಸಿಸತೊಡಗಿದಳು. ಅಲ್ಲಿ ಆಕೆಗೆ ಲವಕುಶರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಋಷಿ ಅವರಿಗೆ ಧನುರ್ವಿದ್ಯೆಯನ್ನು ಕಲಿಸಿಕೊಟ್ಟ,

ವೇದಗಳನ್ನುಪದೇಶಿಸಿದ. ರಾಮಾಯಣವನ್ನು ಅವರಿಗೆ ಕಂಠಪಾಠ ಮಾಡಿಸಿದ.

ಒಂದು ದಿನ ಅವರ ಹಾಡಿಕೆ ರಾಮನ ಕಿವಿಗೆ ಬಿತ್ತು. ಲವಕುಶರು ಯಾರೆಂದು ಗ್ರಹಿಸಿದ ರಾಮ ಅವರನ್ನೂ ಸೀತೆಯನ್ನೂ ಪುನಃ ರಾಜಧಾನಿಗೆ ಬರಮಾಡಿಕೊಂಡ.

ಆದರೂ ಜನ ಆಡಿಕೊಳ್ಳುವುದು ನಿಲ್ಲಲಿಲ್ಲ. ಸೀತೆಗೆ ಅವರ ಕಟುಮಾತು ಸಹಿಸಲಸಾಧ್ಯವಾಯಿತು. ತನ್ನನ್ನು ಸ್ವೀಕರಿಸಬೇಕೆಂದು ಭೂಮಿತಾಯಿಯನ್ನು ಬೇಡಿಕೊಂಡಳು. ಭೂಮಿ ಎರಡು ಭಾಗವಾಗಿ ಒಡೆದು ಸೀತೆಯನ್ನು ಸ್ವೀಕರಿಸಿತು.

# ಮಹಾಭಾರತ

ರಾಜರು, ರಾಣಿಯರು, ರಾಜಕುಮಾರರು, ರಾಜಕುಮಾರಿಯರು ಮತ್ತು ಸಾಮಾನ್ಯ ಜನರು ಇವರ ವೀರ ಚರಿತ್ರೆಗಳನ್ನು ಚಿತ್ರಿಸುವ ಮಹಾಕಾವ್ಯವೇ ಮಹಾಭಾರತ. ವ್ಯಾಸಋಷಿ ಇವುಗಳನ್ನೆಲ್ಲಾ ಒಂದು ಪುಸ್ತಕರೂಪದಲ್ಲಿ ಸಂಗ್ರಹಿಸಿದ. ಅನೇಕರು ಈ ಪುಸ್ತಕಕ್ಕೆ ಕಥೆಗಳನ್ನು ಸೇರಿಸುತ್ತ ಹೋಗಿರಬಹುದು. ಆದರೆ ವ್ಯಾಸಋಷಿಯ ಹೆಸರಿನಲ್ಲಿ ಮಹಾಭಾರತ ಪ್ರಸಿದ್ಧವಾಗಿದೆ.

ನಳದಮಯಂತಿಯರ ಪ್ರೇಮಕಥೆ, ಸಾವಿತ್ರಿಯ ಭಕ್ತಿ, ಶ್ರೀಕೃಷ್ಣನ ಪ್ರಸಿದ್ಧ ಕಾರ್ಯಗಳು ಮತ್ತು ಹಿಂದುಗಳ ಪವಿತ್ರ ಗ್ರಂಥವಾದ ಭಗವದ್ಗೀತೆ ಇವೆಲ್ಲ ಮಹಾಭಾರತದಲ್ಲಿ ಅಡಕವಾಗಿರುವುದಲ್ಲದೆ ಮುಖ್ಯ ಕಥೆ ಕೌರವರು ಪಾಂಡವರನ್ನು ಕುರಿತದ್ದಾಗಿದೆ.

ಈಗಿನ ಡೆಲ್ಲಿಯಾಗಿರುವ ಹಸ್ತಿನಾಪುರದಲ್ಲಿ ಭರತನ ವಂಶಸ್ಥರಾದ ಇಬ್ಬರು ರಾಜಕುಮಾರರು ಸಿಂಹಾಸನ ತಮ್ಮದೆಂದು ವ್ಯಾಜ್ಯ ಹೂಡಿದರು. ಅವರಲ್ಲಿ ಕೌರವರ ಧೃತರಾಷ್ಟ್ರ ಕುರುಡನಾಗಿದ್ದುದರಿಂದ ಪಾಂಡವರ ಪಾಂಡು, ಸಿಂಹಾಸನವನ್ನೇರಿದ. ಸ್ವಲ್ಪ ಕಾಲಾನಂತರ ಪಾಂಡುವಿಗೆ ತೊನ್ನುರೋಗ ಪ್ರಾಪ್ತವಾಗಲು ಅವನು ಧೃತರಾಷ್ಟ್ರನಿಗೆ ರಾಜ್ಯ ಬಿಟ್ಟುಕೊಟ್ಟು ಹೊರಟುಹೋದ.

ಪಾಂಡುವಿನ ಮರಣಾನಂತರ ಅವನ ಹೆಂಡತಿ ಕುಂತಿ ಮತ್ತು ಐವರು ಮಕ್ಕಳು ಯುಧಿಷ್ಠಿರ, ಭೀಮ, ಅರ್ಜುನ, ನಕುಲ, ಸಹದೇವ ಹಸ್ತಿನಾಪುರಕ್ಕೆ ಬಂದರು. ಧೃತರಾಷ್ಟ್ರ ಅವರನ್ನು ಪ್ರೀತಿಯಿಂದ ಬರಮಾಡಿಕೊಂಡು ಯುದ್ಧ ಶಾಂತಿ ಕಲೆಗಳಲ್ಲಿ ಅವರಿಗೂ ದ್ರೋಣಾಚಾರ್ಯರಿಂದ ಶಿಕ್ಷಣ ಕೊಡಿಸುತ್ತಾನೆ.

ಧೃತರಾಷ್ಟ್ರ ದೊರೆಗೆ ನೂರುಮಂದಿ ಮಕ್ಕಳು. ಅವರಲ್ಲಿ ಹಿರಿಯವನೇ ದುರ್ಯೋಧನ. ತನ್ನ ತಂದೆ ಪಂಚಪಾಂಡವರನ್ನು ಪ್ರೀತಿಸುತ್ತಾನೆಂದು ದುರ್ಯೋಧನನಿಗೆ ಬೇಸರ, ಅವನಿಗಂತೂ ಪಾಂಡವರನ್ನು ಕಂಡರೆ ಆಗದು. ಅವರನ್ನು ಕೊಂದುಬಿಡಲು ಉದ್ದೇಶಿಸಿ ಒಂದು ಅರಮನೆಗೆ ಕಳುಹಿಸಿಕೊಡುವಂತೆ ತಂದೆಯನ್ನು ದುರ್ಯೋಧನ ಒಪ್ಪಿಸುತ್ತಾನೆ. ಪಾಂಡವರು ಈ ಗಂಡಾಂತರದಿಂದ ಪಾರಾಗಿ ಅರಣ್ಯಕ್ಕೆ ತಪ್ಪಿಸಿಕೊಂಡು ಹೋಗುತ್ತಾರೆ.

ಪಾಂಡವರ ವನವಾಸಕಾಲದಲ್ಲಿ ಅರ್ಜುನ ದ್ರೌಪದಿಯನ್ನು ಸ್ವಯಂವರದಲ್ಲಿ ದೊರಕಿಸುತ್ತಾನೆ. ಮನೆಗೆ ಬಂದೊಡನೆಯೇ ಉಳಿದ ಪಾಂಡವರು ತಾಯಿಗೆ 'ಅಮ್ಮ, ಅರ್ಜುನ ಇಂದು ಎಂಥ ಬಹುಮಾನ



ದೊರಕಿಸಿದ್ದಾನೆನ್ನುವೆ' ಎಂದು ಹೇಳಲು, ಅರ್ಜುನ ದೊರಕಿಸಿದ್ದ ಬಹುಮಾನ ಯಾವದೆಂದು ತಿಳಿಯದ ಕುಂತಿ 'ಮಕ್ಕಳಿರಾ, ಅದನ್ನು ಸಮವಾಗಿ ಹಂಚಿಕೊಳ್ಳಿ' ಎಂದು ಬಿಡುತ್ತಾಳೆ. ತಾಯಿಮಾತು ಉಳಿಸಲು ಪಂಚಪಾಂಡವರೂ ದ್ರೌಪದಿಯನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳುತ್ತಾರೆ. ವಿವಾಹಕಾಲದಲ್ಲಿ ಪಾಂಡವರಿಗೆ ಸಮೀಪಬಂಧುವಾದ, ದೇವಪುರುಷ ಶ್ರೀಕೃಷ್ಣನ ಪರಿಚಯವಾಗುತ್ತದೆ. ಪರಿಚಯ ನಿಕಟಸ್ನೇಹವಾಗಿ ಬೆಳೆದು ಕೃಷ್ಣ ಸದಾ ಪಾಂಡವರ ಹಿತೈಷಿ, ಗುರು, ಮಾರ್ಗದರ್ಶಕನಾಗಿ ಉಳಿಯುತ್ತಾನೆ.

ಸ್ವಯಂವರದಲ್ಲಿ ಪಾಂಡವರಿಗಾದ ವಿಜಯದ ಸುದ್ದಿ ಧೃತರಾಷ್ಟ್ರನಿಗೆ ಮುಟ್ಟುತ್ತದೆ. ಅವರನ್ನು ಹಸ್ತಿನಾಪುರಕ್ಕೆ ಕರಸಿಕೊಳ್ಳುತ್ತಾನೆ. ತನ್ನ ರಾಜ್ಯವನ್ನು ಎರಡು ಭಾಗಮಾಡಿ, ಒಂದು ಭಾಗವನ್ನು ತನ್ನ ನೂರು ಜನ ಮಕ್ಕಳಿಗೂ, ಇನ್ನೊಂದು ಭಾಗವನ್ನು ಪಂಚಪಾಂಡವರಿಗೂ ಹಂಚುತ್ತಾನೆ.

ಕೆಲವುಕಾಲ ದಾಯಾದಿಗಳು ಸುಖವಾಗಿರುತ್ತಾರೆ.

ಯುಧಿಷ್ಠಿರನಿಗೆ ದ್ಯೂತವಾಡುವ ಚಪಲ. ಒಂದು ದಿನ ಅವನು ದುರ್ಯೋಧನನೊಂದಿಗೆ ದ್ಯೂತವಾಡುತ್ತಿದ್ದಾಗ ತನ್ನ ಹಣ, ಒಡವೆಗಳನ್ನು ಸೋತುಬಿಟ್ಟ. ಮುಂದೆ ರಾಜ್ಯವನ್ನೇ ಪಣವಾಗಿಟ್ಟ. ಅದೂ ಹೋಯಿತು. ತನ್ನ ಸೋದರರನ್ನೂ ತನ್ನನ್ನೂ ಪಣವಾಗಿಟ್ಟ. ಆಗಲೂ





ಸೋಲೇ ಆಯಿತು. ಕೊನೆಗೆ ದ್ರೌಪದಿಯನ್ನು ಪಣವಾಗಿಟ್ಟು ಆಕೆಯನ್ನೂ ಸೋತುಬಿಟ್ಟ.

ದ್ರೌಪದಿಯನ್ನು ಕರೆದುತನ್ನಿರೆಂದು ದುರ್ಯೋಧನ ಆಜ್ಞಾಪಿಸಿದ. ದುಶ್ಶಾಸನ ಆಕೆಯ ಕೂದಲು ಹಿಡಿದೆಳೆದು ತಂದ.

ರಾಜಸಭೆಯಲ್ಲಿ ಸೇರಿದ್ದ ಮಹಾಜನರಿಗೆ ದ್ರೌಪದಿ ಕಂಬನಿಗರೆಯುತ್ತಾ ಮೊರೆಯಿಟ್ಟಳು. 'ಹಿರಿಯರೇ, ಮಾನ್ಯರೇ ನನ್ನನ್ನು ಕಾಪಾಡಿ. ನಿಮಗೂ ತಾಯಿ, ಹೆಂಡತಿ, ಮಕ್ಕಳು ಇಲ್ಲವೇ? ಪಾಪ ಮಾಡದಿರುವ ನಿರಪರಾಧಿ ಹೆಣ್ಣನ್ನು ನಿಮ್ಮಲ್ಲಿ ಯಾರೂ ರಕ್ಷಿಸುವುದಿಲ್ಲವೇ? ನಿಮ್ಮ ಕಣ್ಣುಮುಂದೆಯೇ ನಾಚಿಗೆಗೇಡು ಪ್ರಸಂಗ ನಡೆಯುತ್ತಿರುವಾಗ ಸುಮ್ಮನೇಕೆ ಕುಳಿತಿರುವಿರಿ?'

ಪಾಂಡವರೆಲ್ಲಾ ನಾಚಿ ತಲೆತಗ್ಗಿಸಿದರು.

ದುಶ್ಶಾಸನ ದ್ರೌಪದಿಯ ಸೀರೆ ಸೆಳೆಯಲೆತ್ನಿಸಿದ. ದ್ರೌಪದಿ ಕೃಷ್ಣನಿಗೆ ಮೊರೆಯಿಟ್ಟಳು. ಆವಳ ಸೀರೆ ಎಳೆದಷ್ಟೂ ಬೆಳೆಯುತ್ತ ಹೋಯಿತು.

ದ್ರೌಪದಿ ಮಾನಸಂರಕ್ಷಣೆಯಾದರೂ ಪಾಂಡವರಿಗೆ ವನವಾಸ ತಪ್ಪಲಿಲ್ಲ. ಅವರು ಎರಡನೆಯ ಸಾರಿ ದ್ರೌಪದಿಯೊಂದಿಗೆ ವನವಾಸಕ್ಕೆ ಹೊರಟರು.

ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸ ಕಳೆದು ಬಂದರೆ ರಾಜ್ಯವನ್ನು ಅವರಿಗೆ ಮರಳಿ ಕೊಡುವುದಾಗಿ ದುರ್ಯೋಧನ ಹೇಳಿದ.

ಕಾಡು ಮೇಡುಗಳಲ್ಲಿ ಪಾಂಡವರು ಹನ್ನೆರಡು ವರ್ಷ ಹಾಗೂ ಹೀಗೂ ಕಳೆದರು. ಹದಿಮೂರನೆಯ ವರ್ಷ ಅವರು ಮತ್ಸ್ಯದೇಶದ ದೊರೆ ವಿರಾಟನಲ್ಲಿ ವೇಷಮರಸಿಕೊಂಡು ಊಳಿಗಕ್ಕೆ ನಿಂತರು. ಆ ಒಂದು ವರ್ಷ ಅವರು ಕಳೆದಿದ್ದರೆ ರಾಜ್ಯ ಕೈಗೆ ಸಿಕ್ಕುತ್ತಿತ್ತು. ಆದರೆ ಒಂದು ವಿಚಿತ್ರ ಪ್ರಸಂಗ ನಡೆದುಬಿಟ್ಟಿತು.

ಮತ್ಸ್ಯದೇಶದ ರಾಣಿಯ ತಮ್ಮ ಕೀಚಕ ದ್ರೌಪದಿಯನ್ನು ಕಾಮಿಸಿದ. ಅದನ್ನರಿತ ಭೀಮ ಕೋಪದಿಂದ ಅವನನ್ನು ಕೊಂದುಬಿಟ್ಟ.

ದುಷ್ಟ ದುರ್ಯೋಧನನಿಗೆ ಈ ಸುದ್ದಿ ಮುಟ್ಟಿತು. ಮತ್ಸ್ಯರಾಜ್ಯದಲ್ಲಿ ಗಲಭೆಯೆದ್ದಿದ್ದಾಗಲೇ ಅದಕ್ಕೆ ಮುತ್ತಿಗೆ ಹಾಕಿ ಗೆದ್ದುಬಿಡಬಹುದೆಂದು ಅವನು ಮುತ್ತಿಗೆ ಹಾಕಿದ.

ಭೀಮನ ಕೋಪವಿನ್ನೂ ಇಳಿದಿರಲಿಲ್ಲ. ಆದರೂ ಪಾಂಡವರು ವಿರಾಟನ ಪಕ್ಷದಲ್ಲಿ ನಿಂತು ಅವನಿಗಾಗಿ ಕಾದರು.

ದೊಡ್ಡ ಯುದ್ಧವೇ ಆರಂಭವಾಗಿ ಅದು ಕೊನೆಗೆ ಕುರುಕ್ಷೇತ್ರವಾಗಿ ಪರಿಣಮಿಸಿತು. ಕೃಷ್ಣನ

ಸಹಾಯದಿಂದ ಪಾಂಡವರು ಕೌರವ ಸೇನೆಯನ್ನು ನಾಶಮಾಡಿ ಕೌರವರನ್ನೆಲ್ಲಾ ಕೊಂದುಬಿಟ್ಟರು. ಈ ಯುದ್ಧಕಾಲದಲ್ಲಿಯೇ ಶ್ರೀ ಕೃಷ್ಣ ಅರ್ಜುನನಿಗೆ ಹೇಳಿದ ಉಪದೇಶದ ಮಾತುಗಳು ಭಗವದ್ಗೀತೆ ಯೆನಿಸಿಕೊಂಡು ಪ್ರಸಿದ್ಧವಾಗಿವೆ.


ಧೃತರಾಷ್ಟ್ರ ರಾಜ್ಯವನ್ನು ಯುಧಿಷ್ಠಿರನಿಗೆ ಬಿಟ್ಟುಕೊಟ್ಟ. ಯುಧಿಷ್ಠಿರ ಕೆಲವು ಕಾಲ ರಾಜ್ಯವಾಳಿದ. ಅನಂತರ ಅವನೂ ಅವನ ತಮ್ಮಂದಿರೂ ಪ್ರಪಂಚಸುಖವನ್ನು ಬಿಟ್ಟುಕೊಟ್ಟರು. ತಮ್ಮ ಸಂತತಿಯವನನ್ನು ರಾಜಧಾನಿಯಲ್ಲಿಯೂ, ಕೌರವರ ಸಂತತಿಯಲ್ಲಿ ಒಬ್ಬನನ್ನು ಹಸ್ತಿನಾಪುರದಲ್ಲಿಯೂ ಬಿಟ್ಟು, ದ್ರೌಪದಿಯನ್ನೂ ಒಂದು ನಾಯಿಯನ್ನೂ ಜತೆಯಲ್ಲಿ ಕರೆದುಕೊಂಡು ಇಂದ್ರಲೋಕಕ್ಕೆ ಹೋಗಲು ಮೇರುಪರ್ವತದ ಕಡೆಗೆ ಸಾಗಿದರು.

ಸೋದರರು, ದ್ರೌಪದಿ ದಾರಿಯಲ್ಲಿಯೇ ಸತ್ತುಬಿದ್ದರು. ಯುಧಿಷ್ಠಿರ ಮಾತ್ರ ನಾಯಿಯೊಂದಿಗೆ ಸ್ವರ್ಗದ ಬಾಗಿಲು ಸೇರಿದ. ಒಳಗೆ ಬರಬೇಕಾದರೆ ನಾಯಿಯನ್ನು ಬಿಟ್ಟುಬಾರೆಂದು ದ್ವಾರಪಾಲಕರು ಹೇಳಿದರು. ನಾಯಿಯಿಲ್ಲದೆ ಒಳಗೆ ಬರಲಾರೆನೆಂದು ಯುಧಿಷ್ಠಿರ ತಿಳಿಸಿದ.

ನಾಯಿಯ ವಿಚಾರದಲ್ಲಿ ಯುಧಿಷ್ಠಿರ ತೋರಿಸಿದ ಕರುಣೆ ಇಂದ್ರದೇವನಿಗೆ ತುಂಬ ಪ್ರಿಯವಾಯಿತು. ನಾಯಿಯೊಂದಿಗೇ ಒಳಗೆ ಬರಲು ಅವನು ಅಪ್ಪಣೆ ಕೊಟ್ಟ.

ತನ್ನ ನಾಲ್ವರು ಸೋದರರು, ದ್ರೌಪದಿ ನರಕದಲ್ಲಿ ಬಿದ್ದು ತೊಳಲುತ್ತಿದ್ದಾರೆಂದು ಯುಧಿಷ್ಠಿರನಿಗೆ ಸ್ವರ್ಗದಲ್ಲಿ ತಿಳಿಯಬಂತು. ಅವನು ಸ್ವರ್ಗದಲ್ಲಿ ನಿಲ್ಲಲು ಒಪ್ಪಲಿಲ್ಲ. ಅವನ ಭಕ್ತಿಯನ್ನು ಪರೀಕ್ಷಿಸಲು ಒಡ್ಡಿದ್ದ ಉಪಾಯವಾಗಿತ್ತು ಇದು.

ದೇವತೆಗಳು ದ್ರೌಪದಿಯನ್ನೂ ಅವನ ಸೋದರರನ್ನೂ ಸ್ವರ್ಗಕ್ಕೆ ಕರೆತಂದರು. ಅನಂತರ ಅವರು ಸುಖವಾಗಿ ಬಾಳಿದರು.



# ಅವರ ಬದುಕು

ಈಯೆಲ್ಲ ಕಥೆ, ಕಾವ್ಯಗಳಿಂದ ನಮ್ಮ ಪುರಾತನರ ಇತಿಹಾಸ ನಮಗೆ ತಿಳಿಯಬರುತ್ತದೆ. ಆ ಕಾಲದಲ್ಲಿ ಇತಿಹಾಸಗಳನ್ನು ಬರೆಯುವ ಪದ್ಧತಿಯಿರಲಿಲ್ಲ.

ಇದರಿಂದ ಇನ್ನೊಂದು ಮುಖ್ಯವಿಷಯ ತಿಳಿಯಬರುತ್ತದೆ; ಪ್ರಾಚೀನ ಭಾರತದಲ್ಲಿ ದೊರೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಜನಸಾಮಾನ್ಯರು ಹಳ್ಳಿಗಳಲ್ಲಿಯೂ ವಾಸಿಸುತ್ತಿದ್ದರು.

ರೈತರಿಂದ ಒಂದು ಭಾಗ ಧಾನ್ಯ ಸಂಗ್ರಹಮಾಡಲು ದೊರೆ ತನ್ನ ಪ್ರತಿನಿಧಿಯನ್ನು ಕಳುಹಿಸುತ್ತಿದ್ದ. ಹಳ್ಳಿಗಳನ್ನು ಹೊರಗಿನ ಶತ್ರುಗಳಿಂದ ಕಾಪಾಡುವುದಕ್ಕೆ ಕೊಡಬೇಕಾಗಿದ್ದ ಕಾಣಿಕೆ ಇದು. ಹಳ್ಳಿಗಳಿಗೆ ಬೇಕಾಗುವ ರಸ್ತೆಗಳು, ನೀರಾವರಿ ಯೋಜನೆಗಳಿಗಾಗಿಯೂ ಈ ಧಾನ್ಯ ಸಂಗ್ರಹವಾಗುತ್ತಿತ್ತು. ರಾಜ ಪ್ರತಿನಿಧಿ ಬಂದು ಧಾನ್ಯ ಸಂಗ್ರಹಿಸಿಕೊಂಡು ಹೊರಟುಹೋಗುತ್ತಿದ್ದ.

ರೈತರು ಜತೆಯಲ್ಲಿ ಬಾಳಿ, ಬದುಕಿ, ದುಡಿಮೆಮಾಡುತ್ತಿದ್ದರು. ಒಬ್ಬನಿಗೊಬ್ಬ ಸಹಾಯ ಮಾಡುತ್ತಿದ್ದ. ಎಲ್ಲ ರೀತಿಯಿಂದಲೂ ಅವರು ಒಟ್ಟಿಗೆ ಬಾಳುವೆಮಾಡುತ್ತಿದ್ದರು. ರೈತ ಧಾನ್ಯ ಬೆಳೆಯುತ್ತಿದ್ದ, ನೇಕಾರ ಬಟ್ಟೆ ನೇದುಕೊಡುತ್ತಿದ್ದ, ಕುಂಬಾರ ತನ್ನ ಚಕ್ರದಿಂದ ಸೊಗಸಾದ ಮಡಕೆಗಳನ್ನು ಮಾಡಿಕೊಡುತ್ತಿದ್ದ, ಕಮ್ಮಾರ ಎತ್ತುಗಳ ಲಾಳ ಮಾಡಿಕೊಡುತ್ತಿದ್ದ, ಶಾಲಾ ಉಪಾಧ್ಯಾಯ ಹಳ್ಳಿಯ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ. ಇವರೆಲ್ಲರಿಗೂ ರೈತ ಹಣ ಕೊಡುತ್ತಿರಲಿಲ್ಲ, ಧಾನ್ಯ



ಕೊಡುತ್ತಿದ್ದ. ಅವನ ಬಳಿ ಹಣವಿರಲಿಲ್ಲ. ಅವನು ಬೇಸಾಯಮಾಡುತ್ತಿದ್ದ ಭೂಮಿಯೂ ಅವನದಾಗಿರಲಿಲ್ಲ. ಅದನ್ನು ಉಪಯೋಗಿಸಿಕೊಳ್ಳುವ ಅಧಿಕಾರ ಮಾತ್ರ ಅವನಿಗಿತ್ತು.

ಊರಿನ ಐದುಮಂದಿ ಹಿರಿಯರು—ಪಂಚಾಯತಿ—ರೈತನಿಗೆ ನ್ಯಾಯ ದೊರಕಲಿತ್ತಿಸುತ್ತಿದ್ದರು. ರೈತನ ಹಕ್ಕನ್ನು ಯಾರೂ ಅಳ್ಳಾಡಿಸುವಂತಿರಲಿಲ್ಲ—ದೊರೆಗೂ ಇದು ಸಾಧ್ಯವಿಲ್ಲ. ರೈತರಿಂದ ಸ್ವಲ್ಪ ಧಾನ್ಯವನ್ನು ಕಂದಾಯವಾಗಿ ತೆಗೆದುಕೊಳ್ಳುವ ಅಧಿಕಾರ ಮಾತ್ರ ದೊರೆಗಿತ್ತು.

ದೇಶಕ್ಕೆ ಬೇರೆ ದೊರೆ ಮುತ್ತಿಗೆ ಹಾಕಿದರೆ ರೈತರು ತಮ್ಮ ಧನ ಧಾನ್ಯ ಪ್ರಾಣಿ ಸಂಪತ್ತನ್ನು ತೆಗೆದುಕೊಂಡು ಬೇರೆಕಡೆಗೆ ಹೋಗುತ್ತಿದ್ದರು. ಅಲ್ಲಿ ಅವರಿಗೆ ಬೇರೆ ಭೂಮಿ ದೊರೆಯುತ್ತಿತ್ತು.

ಸಂಸಾರಕ್ಕೆ ಸಾಕಾಗುವಷ್ಟು ಭೂಮಿಯಿಲ್ಲದಿದ್ದರೆ ರೈತ ಪಂಚಾಯತಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದ. ಪಂಚಾಯತರು ಹೆಚ್ಚು ಭೂಮಿಯನ್ನು ಅವನ ಉಪಯೋಗಕ್ಕೆ ಕೊಡುತ್ತಿದ್ದರು. ಈ ನಮ್ಮ ವಿಶಾಲ ದೇಶದಲ್ಲಿ ಭೂಮಿಗೇನೂ ಕೊರತೆಯಿಲ್ಲ. ಇಂದು ನಾವು ಬಾಳಲು ಪ್ರಯತ್ನಿಸುತ್ತಿರುವ ಸೋದರ ರೀತಿಯಲ್ಲಿ ಅಂದು ಅವರು ಸುಖವಾಗಿ ಶಾಂತವಾಗಿ ಬಾಳುತ್ತಿದ್ದರು.

ಬ್ರಿಟನ್ನಿನ ಬಾಳುವೆಯ ಕ್ರಮ ಈ ಮಾರ್ಗದಂತಲ್ಲ, ಅವರ ರೀತಿ ಬೇರೆ. ಅಲ್ಲಿ ಭೂಮಿ ದೊರೆಗೆ ಸೇರಿತ್ತು. ಶ್ರೀಮಂತರಿಗೆ ದೊರೆ ದೊಡ್ಡ ದೊಡ್ಡ ಆಸ್ತಿಗಳನ್ನು ಕೊಡುತ್ತಿದ್ದ. ಈ ಆಸ್ತಿವಂತರು ಜನಗಳನ್ನು ದಾಸರಾಗಿ ನಿಯಮಿಸಿಕೊಳ್ಳುತ್ತಿದ್ದರು. ನೂರಾರು ವರ್ಷಗಳ ಹೋರಾಟವಾದ ಮೇಲೆ ಈ ದಾಸ್ಯಪದ್ಧತಿ ಅವರಲ್ಲಿ ನಿರ್ಮೂಲವಾಯಿತು.

# ಬುದ್ಧ (ಕ್ರಿ. ಪೂ. ೫೬೩-೪೮೩)

ಒಂದು ಜಾತಿ ಇನ್ನೊಂದು ಜಾತಿಯನ್ನು ಕೀಳೆಂದು ಕಾಣುತ್ತಿದ್ದುದರಿಂದ ವೇದಕಾಲದ ಕೊನೆಗೆ ಜನತೆಯಲ್ಲಿ ತುಂಬ ಅಸಂತೋಷ ಹುಟ್ಟಿತು. ಪೂಜಾರಿಗಳು ತುಂಬ ಪ್ರಬಲರಾದರು. ಅವರು ಕೆಳಗಣ ಜಾತಿಯವರನ್ನು ಕೆಟ್ಟದಾಗಿ ಕಾಣುವುದಕ್ಕಾರಂಭಿಸಿದ್ದರು.


ಎರಡನೆಯ ಜಾತಿಯವರಾದ ಕ್ಷತ್ರಿಯರು ಜಾತಿಬಾಹಿರರನ್ನು ವಿಶ್ವಾಸದಿಂದ ಕಾಣುತ್ತಿದ್ದರು. ಅವರ ನಿತ್ಯಬಾಳುವೆ ಇತರರೊಂದಿಗೆ ಹಾಸುಹೊಕ್ಕಾಗಿ ಹೊಂದಿಕೊಂಡಿದ್ದುದೇ ಕಾರಣವಾಗಿರಬಹುದು.

ಜನತೆಗೆ ಅವರ ಆತ್ಮಗೌರವವನ್ನು ನೆನಪಿಸಿಕೊಟ್ಟು ಪೂಜಾರಿಗಳ ಪ್ರಾಬಲ್ಯವನ್ನು ಮುರಿಯುವುದಕ್ಕೆ ಕ್ಷತ್ರಿಯ ರಾಜಕುಮಾರ ಸಿದ್ಧಾರ್ಥನ ಅವತಾರವಾಯಿತು. ನೇಪಾಳಿನ ಬಳಿಯಿರುವ ಕಪಿಲವಸ್ತುವಿನ ದೊರೆಯ ಮಗನೇ ಸಿದ್ಧಾರ್ಥ. ಅವನು ಏಳು ದಿನದ ಮಗುವಾಗಿದ್ದಾಗಲೇ ಅವನ ತಾಯಿ ತೀರಿಕೊಂಡಿದ್ದಳು.

ತಂದೆ ಶುದ್ಧೋಧನ ಮಹಾರಾಜ ಯುವರಾಜ ಕುಮಾರನನ್ನು ವಿಶೇಷ ವೈಭವದಲ್ಲಿ ಬೆಳಸಿ ಅವನಿಗೆ ಮೂರು ಅರಮನೆಗಳನ್ನು ಕಟ್ಟಿಕೊಟ್ಟ. ಒಂದು ಬೇಸಿಗೆಯ ಕಾಲಕ್ಕೆ, ಒಂದು ಮಳೆಗಾಲಕ್ಕೆ, ಒಂದು ಚಳಿಗಾಲಕ್ಕೆ. ರಾಜಕುಮಾರರು ಬಯಸಬಹುದಾದ ಎಲ್ಲ ಸೌಖ್ಯ, ಆಟಪಾಟಗಳನ್ನೂ ಒದಗಿಸಿದ.

ಅವನು ಜೀವನದ ದುಃಖವನ್ನು ನೋಡಬಾರದೆಂಬುದು ಮಹಾರಾಜನ ಇಚ್ಛೆಯಾಗಿತ್ತು. ಆದರೆ ಸಿದ್ಧಾರ್ಥ ಜ್ಞಾನಿ. ಇನ್ನೂ ಚಿಕ್ಕವನಿದ್ದಾಗಲೇ ಕಠಿಣ ಪ್ರಶ್ನೆಗಳನ್ನು ಕೇಳತೊಡಗಿದ್ದ. ಅವನ ಮನಸ್ಸು ತುಂಬಿರಲೆಂದು ಅವನಿಗೆ ಹತ್ತಿರ ಸಂಬಂಧದ ಸುಂದರ ಯಶೋಧರೆಯನ್ನು ಕೊಟ್ಟು ಲಗ್ನವನ್ನೂ ಮಾಡಿಸಿದ.






ಒಂದು ದಿನ ಸಿದ್ಧಾರ್ಥ ತನ್ನ ರಥದಲ್ಲಿ ಹೋಗುತ್ತಿದ್ದಾಗ ಸುಕ್ಕುಬಂದ ಒಬ್ಬ ಮುದುಕನನ್ನು ನೋಡಿದ. ಇನ್ನೊಂದು ದಿನ ಅವನು ಹೊರಹೊರಟಾಗ ಒಬ್ಬ ರೋಗಗ್ರಸ್ತನನ್ನು ಕಂಡ. ಮತ್ತೊಂದು ದಿನ ಒಂದು ಹೆಣವನ್ನು ಕಂಡ. ಅವನ ಹೃದಯ ಕನಿಕರದಿಂದ ತುಂಬಿ 'ಈ ಜೀವನಕ್ಕೆ ಧಿಕ್ಕಾರವಿರಲಿ' ಎಂದು ಕೂಗಿತು.

ಕೆಲವು ದಿನಗಳಾನಂತರ ತೇಜಃಪುಂಜನಾದ ಒಬ್ಬ ಸಾಧುವನ್ನು ಕಂಡ. ತಾನೂ ಸಾಧುವಾಗಿ ಬಿಡಬೇಕೆಂದು ಅಂದೇ ನಿಶ್ಚಯಿಸಿದ.

ತಂದೆಯ ಅನುಮತಿ ಪಡೆಯಬೇಕೆಂದಿರುವಷ್ಟರಲ್ಲಿ ಯಶೋಧರೆ ಗಂಡು ಮಗುವಿಗೆ ಜನನವಿತ್ತಿರುವ ಸುದ್ದಿ ಬಂದಿತು. ಸಿದ್ಧಾರ್ಥ ಮಗುವಿಗೆ 'ರಾಹುಲ'—ಎಂದರೆ ಅಡ್ಡಿ ಎಂದು ಹೆಸರಿಟ್ಟ. ಈ ಮಗು ತನ್ನ ಮುಂದಿನ ಮಾರ್ಗಕ್ಕೆ ಅಡ್ಡಿಯಾಗಿ ನಿತ್ಯಜೀವನಕ್ಕೆ ಕಟ್ಟಿಹಾಕುವುದೆಂದು ಅವನ ನಂಬಿಕೆಯಾಗಿತ್ತು. ತಾನು ಇದ್ದ ಶ್ರೀಮಂತ ಜೀವನ ಮತ್ತು ಆಶಿಸುತ್ತಿದ್ದ ಸಾಧು ಜೀವನದ ಮಧ್ಯೆ ಅವನ ಮನಸ್ಸು ತೂಗಾಡುತ್ತಿತ್ತು.

ಒಂದು ರಾತ್ರಿ ಅರಮನೆಯಲ್ಲಿ ಔತಣ ಸಮಾರಂಭ. ಗೆಳೆಯರು ತಿಂದು, ಕುಡಿದು, ಸಂತೋಷದಿಂದಿರುವುದನ್ನು ಸಿದ್ಧಾರ್ಥ ಕಂಡ. ಆದರೆ ಅವನ ಮನಸ್ಸು ಬೇರೆ ಕಡೆ ಲೀನವಾಗಿತ್ತು.

ಆ ರಾತ್ರಿ ಎಲ್ಲರೂ ಮಲಗಿ ನಿದ್ರಿಸಿದ ಮೇಲೆ ಎದ್ದು ತಾನು ಹೊರಟು ಹೋಗುವುದೆಂದು ನಿಶ್ಚಯಿಸಿದ. ಹೆಂಡತಿಯ ಕೋಣೆಗೆ ಹೋಗಿ ನೋಡುತ್ತಾನೆ. ಮಗುರಾಹುಲನನ್ನಪ್ಪಿಕೊಂಡು ಯಶೋಧರೆ ಸುಖವಾಗಿ ನಿದ್ರಿಸುತ್ತಿದಾಳೆ. ತಾಯಿ ಮಕ್ಕಳಿಬ್ಬರಿಗೂ ಪ್ರೀತಿಯಿಂದ ಸಿದ್ಧಾರ್ಥ ಮುದ್ದಿಟ್ಟ.



ಅವರನ್ನೇ ಬಹಳಹೊತ್ತು ನೋಡಿದರೆ ಮನಸ್ಸು ಬದಲಾಗುವುದೆಂದು ಮುಖವನ್ನತ್ತ ತಿರುಗಿಸಿದ.

ಸಿದ್ಧಾರ್ಥನ ಆಳು ಚೆನ್ನ ಜೀನುಹಾಕಿದ ಕುದುರೆಯೊಂದಿಗೆ ಸಿದ್ಧವಾಗಿ ನಿಂತಿದ್ದ. ಅವರಿಬ್ಬರೂ ಕಪಿಲವಸ್ತುವಿನಿಂದ ಬಹಳದೂರ ಅರಣ್ಯಕ್ಕೆ ಹೋದರು. ಅಲ್ಲಿ ಸಿದ್ಧಾರ್ಥ ತನ್ನ ಒಡವೆ ವಸ್ತ್ರಗಳನ್ನು ತೆಗೆದು, ತನ್ನ ನೀಳವಾದ ಸುಂದರ ತಲೆಗೂದಲನ್ನು ಕತ್ತರಿಸಿ ಹಾಕಿದ. ತನ್ನ ಕುದುರೆ, ಒಡವೆ ವಸ್ತ್ರಗಳನ್ನು ಚೆನ್ನನಿಗೆ ಕೊಟ್ಟುಬಿಟ್ಟ. ಚೆನ್ನ ತನ್ನ ಸ್ವಾಮಿಯನ್ನು ಬಿಟ್ಟು ಹೋಗಲಾರದೆ ಗೋಳೋ ಎಂದು ಅಳತೊಡಗಿದ. ಸಿದ್ಧಾರ್ಥ ಅವನನ್ನು ಸಮಾಧಾನಮಾಡಿ ಕಳುಹಿಸಿಕೊಟ್ಟ.

ಅಲ್ಲಿಂದ ಹೊರಟ ಸಿದ್ಧಾರ್ಥ ಹಿಮಾಲಯದ ತಪ್ಪಲಿನಲ್ಲಿ ಕೆಲಕಾಲ ಕಳೆದು, ಅಲ್ಲಿ ಅನೇಕ ಋಷಿಗಳ ದರ್ಶನ ತೆಗೆದುಕೊಂಡ. ಕೆಲವು ಸಲ ಮಾವಿನತೋಪಿನಲ್ಲಿ ಕುಳಿತು ಅವರು ಹೇಳಿದ್ದುದನ್ನು ವಿಚಾರ ಮಾಡುತ್ತಿದ್ದ. ಅವನಿಗೆ ಅವರ ಉಪದೇಶದಲ್ಲಿ ಶಾಂತಿ ಸಿಗಲಿಲ್ಲ.

ತಾನು ಮನಸ್ಸಿನಲ್ಲಿ ಶುದ್ಧನಾಗಿಲ್ಲದಿದ್ದುದರಿಂದ ಅವರು ಹೇಳಿದ ಉಪದೇಶಗಳು ಅರ್ಥವಾಗಲಿಲ್ಲವೆಂದು ಭಾವಿಸಿ ಅನೇಕ ದಿನಗಳನ್ನು ಉಪವಾಸದಲ್ಲಿ ಕಳೆದ. ಆಕಾಶದಲ್ಲಿ ಕಟ್ಟಿದ ಗಂಟೆಯ ನಿನಾದದಂತೆ ಅವನ ಸಾಧುತ್ವದ ಖ್ಯಾತಿ ಎಲ್ಲೆಲ್ಲಿಯೂ ಹಬ್ಬಿತು. ಅವನ ಉಪವಾಸ, ತ್ಯಾಗ ಗುರಿಯನ್ನು ಹತ್ತಿರ ಬರಮಾಡಿಕೊಡಲಿಲ್ಲ.

ಸಂತರು, ಸಾಧುಗಳು, ಪೂಜಾರಿಗಳೊಂದಿಗೆ ವಾದವಿವಾದ ಮಾಡುತ್ತಾ ಸಿದ್ಧಾರ್ಥ ಊರೂರು ತಿರುಗಿದ. ಜೀವನ ಮತ್ತು ಸಾವಿನ ರಹಸ್ಯ, ಪರಮಾತ್ಮನ ಅಮರತ್ವಗಳನ್ನು ಕುರಿತು ಅವರೊಂದಿಗೆ





ಬೇಕಾದಷ್ಟು ಚರ್ಚೆ ಮಾಡಿದ. ಆದರೆ ಎಲ್ಲಾ ಬರಿಮಾತಾಗಿ ಕಂಡುಬಂತು ಅವನಿಗೆ.

ಒಂದು ದಿನ ಬಿಹಾರಿನಲ್ಲಿರುವ ಗಯೆಯಲ್ಲಿ ಒಂದು ಅಶ್ವತ್ಥವೃಕ್ಷದ ಕೆಳಗೆ ಕುಳಿತಿದ್ದಾನೆ. ಆಳವಾದ ವಿಚಾರದಲ್ಲಿ ಮನಸ್ಸು ಲೀನವಾಗಿದೆ. ದುಷ್ಟ ಆಸೆಗಳನ್ನು ಹುಟ್ಟಿಸುವ ಮಾರಾ ಅವನ ಮುಂದೆ ಬಂದು ನಿಂತ. ಹಿಂದೊಮ್ಮೆ ಮಾರಾ ಅವನ ಗುರಿ ತಪ್ಪಿಸಲೆತ್ನಿಸಿದ್ದ. ಸಿದ್ಧಾರ್ಥನ ತಂದೆಯ ರಾಜ್ಯವನ್ನು ಜ್ಞಾತಿ ದೇವದತ್ತ ವಶಪಡಿಸಿಕೊಂಡಿದ್ದ. ಅವನ್ನು ಅವನಿಂದ ಕಿತ್ತುಕೊಂಡು ಸಿದ್ಧಾರ್ಥನಿಗೆ ಕೊಡುವುದಾಗಿ ಆಸೆಯಿಟ್ಟ.

ಗೌತಮನೆಂದು ಹೆಸರು ಪಡೆದಿದ್ದ ಸಿದ್ಧಾರ್ಥ ಅವನ್ನು ನಿರಾಕರಿಸಿದ. ಮಾರನೂ ಅವನ ಪಿಶಾಚಿವರ್ಗವೂ ಸಿದ್ಧಾರ್ಥನನ್ನು ಕೊಂದುಬಿಡಬೇಕೆಂದು ಬೆಂಕಿಯ ಮಳೆಗರೆದರು.

ಸಿದ್ಧಾರ್ಥ ಅಲುಗಾಡದಿರಲು ಅವನ ಮೇಲೆ ದೊಡ್ಡದೊಡ್ಡ ಬಂಡೆಗಳನ್ನುರುಳಿಸಿದರು. ಗೌತಮನಿಗೆ ಅವುಗಳೆಲ್ಲಾ ಹೂಗಳಂತೆ ಮೃದುವಾಗಿದ್ದವು.

ಭೂಮಿ ತನಗೆ ಸೇರಿದ್ದೆಂದೂ ಅದನ್ನು ಬಿಟ್ಟೇಳಬೇಕೆಂದೂ ಮಾರಾ ಗೌತಮನಿಗೆ ಆಜ್ಞಾಪಿಸಿದ. ತನ್ನ ಒಳ್ಳೆಯ ಕೆಲಸಗಳನ್ನೆಲ್ಲಾ ಭೂಮಿಗೆ ಗೌತಮ ಜ್ಞಾಪಿಸಿಕೊಟ್ಟ. ಅದು ಹೇಳಿತು 'ನಾನು ಗೌತಮನಿಗೆ ಸೇರಿದವನು' ಎಂದು.

ಮಾರಾ ತನ್ನ ಮೂವರು ಸುಂದರ ಕುಮಾರಿಯರು—ಅವಿವೇಕ, ಆಗ್ರಹ, ಆಸೆಗಳನ್ನು ಸಿದ್ಧಾರ್ಥನಲ್ಲಿ ಕಳುಹಿಸಿಕೊಟ್ಟ. ಅವರು ಬಂದು ಹಾಡಿ ಕುಣಿದು ತಮ್ಮ ಸೌಂದರ್ಯ ಮೆರಸಿದರು. ಅವರಿಗೆ ಸಿದ್ಧಾರ್ಥ ಸೋಲಲಿಲ್ಲ.

ಮಾರನಿಗೆ ಸೋಲಾಯಿತು. ಗೌತಮ ತನ್ನ ಧ್ಯಾನವನ್ನು ಮುಂದುವರಿಸಿದ. ಅವನಿಗಾಗ ಬೆಳಕು ಕಂಡುಬಂತು. ಸತ್ಯದ ಪ್ರಕಾಶ ಹೊಳೆಯಿತು. ಮನಸ್ಸಿಗೆ ಶಾಂತಿಯಾಯಿತು. ಆಗಲೇ ಅವನು ಜ್ಞಾನಿಯಾದ ಬುದ್ಧನಾದ.

ಒಬ್ಬ ದನಕಾಯುವವನ ಮಗಳು ಸುಜಟಾ ಹಾಲಿನಲ್ಲಿ ಬೆಂದ ಅನ್ನವನ್ನು ಬುದ್ಧನಿಗೆ ತಂದು ಒಪ್ಪಿಸಿದಳು. ಅದನ್ನು ಊಟಮಾಡಿ ಬುದ್ಧ ತನ್ನ ಉಪವಾಸವ್ರತವನ್ನು ಕೊನೆಮಾಡಿದ.

ಅಲ್ಲಿಂದ ತನ್ನ ಗೆಳೆಯರನ್ನು ಕಾಣಲು ಕಾಶಿಗೆ ಬುದ್ಧ ಪ್ರಯಾಣ ಬೆಳಸಿದ. ಕಾಶಿಯಲ್ಲಿ ಅವರಿಗೆ ತಾನು ಧ್ಯಾನದಿಂದ ಗಳಿಸಿದ್ದ ಜ್ಞಾನವನ್ನು ಬೋಧಿಸಿದ.

ಅವನು ಹೇಳಿದ್ದು—'ಎಲ್ಲ ವಸ್ತುಗಳೂ ಸಾವಿಗೀಡಾಗಲೇ ಬೇಕು. ಮನುಷ್ಯನಿಗೂ ಸಾವು ತಪ್ಪಿದ್ದಲ್ಲ. ತಪ್ಪು ಆಸೆಗಳನ್ನು ಬಿಟ್ಟು ಬಿಡುವತನಕ ಮನುಷ್ಯ ನರಳಲೇಬೇಕು. ಉಪವಾಸ, ತಪಸ್ಸುಗಳಿಂದ ಅವನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ.' ಶಾಂತಿಯನ್ನು ದೊರಕಿಸಿ ಕೊಂಡು ಸುಖವಾಗಿರಬೇಕಾದರೆ ಅವನು ಪವಿತ್ರವಾದ ಜ್ಞಾನದ ಎಂಟು ಮಾರ್ಗಗಳನ್ನು ಅನುಸರಿಸ ಬೇಕು. ಅವು ಯಾವುವೆಂದರೆ: ಸತ್ಯ ವಿಚಾರ, ಸತ್ಯ ಆಶಯ, ಸತ್ಯವಾದ ಮಾತು, ಸತ್ಯವಾದ ನಡತೆ, ಸತ್ಯ ಜೀವನ, ಸತ್ಯ ಪ್ರಯತ್ನ, ಸತ್ಯ ಮನಸ್ಸು ಮತ್ತು ಸತ್ಯ ಆನಂದ. ಸನ್ಯಾಸಿಗಳಿಗೆ ಇದೇ ಜೀವನ ಮಾರ್ಗ. ಸಾಮಾನ್ಯರಿಗೆ ಇದಕ್ಕೂ ಸುಲಭವಾದ ಐದು ಮಾರ್ಗಗಳಿವೆ: ಕಳಬೇಡ, ಕೊಲ್ಲಬೇಡ, ಹುಸಿಯ ನುಡಿಯಲು ಬೇಡ, ವ್ಯಭಿಚಾರಿಯಾಗಬೇಡ ಮತ್ತು ಮಾದಕ ದ್ರವ್ಯಗಳನ್ನೂ ಸೇವಿಸ ಬೇಡ. ಇಂತು ಬುದ್ಧ ಸಹನೆಯಿಂದ ಕೂಡಿದ, ಎಲ್ಲರೂ ಆಚರಿಸಬಹುದಾದ ತತ್ವವನ್ನು ಬೋಧಿಸಿದ. ಅದಕ್ಕೇ ಮಧ್ಯಮಮಾರ್ಗ ಎಂದು ಹೆಸರು.

ಎಲ್ಲ ಪಾಪಗಳಿಗಿಂತ ದೊಡ್ಡ ಪಾಪ ಅಜ್ಞಾನ. ಮನುಷ್ಯರಲ್ಲಿ ಮೇಲು ಕೀಳು ಎಂಬ ಭೇದವಿಲ್ಲ. ಮನುಷ್ಯನ ಯೋಗ್ಯತೆಯನ್ನು ಅವನ ಕೃತಿಗಳಿಂದಲೇ ನಿರ್ಧರಿಸಬೇಕು ಎಂದು ಬುದ್ಧ ಹೇಳಿದ.

ಕಾಶಿಯಲ್ಲಿ ಮೊದಲು ಐದು ಜನ ಶಿಷ್ಯರಿಗೆ ದೀಕ್ಷೆಕೊಟ್ಟು ಎಲ್ಲೆಲ್ಲಿಯೂ ತನ್ನ ಸಂದೇಶವನ್ನು ಹರಡಿ ಬರಲು ಅವರನ್ನು ಕಳುಹಿಸಿಕೊಟ್ಟ. ತಾನು ಅನೇಕ ಋಷಿಗಳು, ಪಂಡಿತರೊಂದಿಗೆ ಮಾತ ನಾಡುತ್ತಾ ಹೊರಟ.



ಕಶ್ಯಪನೆಂಬ ಬ್ರಾಹ್ಮಣ ಅವನ ಪರಮ ಭಕ್ತನಾದ.

ಅಲ್ಲಿಂದ ಬುದ್ಧ ಕಪಿಲವಸ್ತುವಿಗೆ ತೆರಳಿ ತನ್ನ ತಂದೆಯನ್ನೂ, ಸಂಸಾರವನ್ನೂ ತನ್ನ ಜೀವನಮಾರ್ಗಕ್ಕೆ ತಿರುಗಿಸಿದ. ಆತನ ಹೆಂಡತಿ ಯಶೋಧರ ಭಿಕ್ಷುಕಿಯಾದಳು, ಮಗ ರಾಹುಲ ಭಿಕ್ಷುವಾದ. ಸ್ವಲ್ಪ ಕಾಲಾನಂತರ ಜ್ಞಾತಿ ಆನಂದ ಅವನನ್ನು ಸೇರಿ ಸಾಯುವವರೆಗೆ ಅವನ ಅನುಯಾಯಿಯಾಗಿದ್ದ.

ರಾಜರಿಂದ ನಾಯಿಂದರು, ಜಲಗಾರರವರೆಗೆ ಎಲ್ಲಾ ಜಾತಿಯ ಜನಗಳು, ಅವನ ಅನುಯಾಯಿಗಳಾದರು. ದೇಶದ ಎಲ್ಲಾ ಭಾಗಗಳಿಗೂ ಆತನ ಸಂದೇಶ ಮುಟ್ಟಿತು.

ಕಾಶಿಗೆ ಇಪ್ಪತ್ತು ಮೈಲಿ ದೂರವಿರುವ ಕುಶಿನಾರದಲ್ಲಿ ಬುದ್ಧ ತನ್ನ ಎಂಭತ್ತನೆಯ ವಯಸ್ಸಿನಲ್ಲಿ ಇಹಲೋಕವನ್ನು ಬಿಟ್ಟು ತೆರಳಿದ. ಬುದ್ಧನ ಕೊನೆಗಾಲ ಸಮೀಪಿಸಿತೆಂದು ಕಣ್ಣೀರು ಸುರಿಸುತ್ತಿದ್ದ ಆನಂದನಿಗೆ 'ಓ ಆನಂದ! ನೀನೇ ಒಂದು ದೀಪವಾಗು. ದೀಪವನ್ನು ಗಟ್ಟಿಯಾಗಿ ಹಿಡಿಯುವಂತೆ ಸದಾ ಸತ್ಯವನ್ನು ಹಿಡಿ' ಎಂದು ಹೇಳಿದ.

ಜಗತ್ತು ಕಂಡ ಒಬ್ಬ ಮಹಾಪುರುಷ ಇಂತು ಬಾಳಿ, ಬದುಕಿ ಕೊನೆಯನ್ನು ಕಂಡ. ಅವನಿಂದ ಬಂದ ಬೆಳಕು, ಹಿಂದೂಸ್ಥಾನದಿಂದ ಮಾಯವಾಗಿದ್ದರೂ ಸಾವಿರಾರು ವರ್ಷಗಳಿಂದ ಏಷ್ಯಾ ಖಂಡದಲ್ಲೆಲ್ಲಾ ವ್ಯಾಪಿಸಿ ಬೆಳಗುತ್ತಿದೆ.

# ನಳಂದ ಮತ್ತು ತಕ್ಷಶಿಲೆ

ಭಗವಾನ್ ಬುದ್ಧನಾನಂತರ, ಅವನ ಉಪದೇಶಗಳನ್ನು ಸಂಗ್ರಹಿಸಿ ಅನೇಕ ಗ್ರಂಥಗಳನ್ನು ಬರೆಯಲಾಯಿತು. ಅವುಗಳನ್ನು ಪಾಲಿಭಾಷೆಯಲ್ಲಿ ಬರೆದರು. ಬುದ್ಧ ಮಾತನಾಡುತ್ತಿದ್ದ ಪ್ರಾಕೃತ ಭಾಷೆಯಿಂದ ಪಾಲಿಭಾಷೆ ಬೆಳೆಯಿತು. ಆ ಗ್ರಂಥಗಳು ಬುದ್ಧನ ಕಥೆಗಳನ್ನು ವಿಸ್ತರಿಸಿ, ಆತನ ಮಾತಿನ ಅರ್ಥವನ್ನು ಜನರಿಗೆ ತಿಳಿಸಿಕೊಟ್ಟವು.

ಈ ಮಹಾಪುರುಷನ ಸಂದೇಶ ನಮ್ಮ ದೇಶಕ್ಕೆ ವಿಶೇಷ ನಂಬಿಕೆಯನ್ನು ತಂದುಕೊಟ್ಟಿತು. ಜೀವನದ ರಹಸ್ಯವನ್ನರಿಯಬೇಕೆಂಬ ಆಸೆಯನ್ನು ಜನಗಳ ಮನಸ್ಸಿನಲ್ಲಿ ಹುಟ್ಟಿಸಿತು. ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಶಾಲೆ ಕಾಲೇಜುಗಳು ಹುಟ್ಟಿಕೊಂಡವು. ಅವುಗಳಲ್ಲಿ ಮುಖ್ಯವಾದ ನಳಂದ, ತಕ್ಷಶಿಲಾ ವಿಶ್ವವಿದ್ಯಾನಿಲಯಗಳ ಅವಶೇಷಗಳನ್ನು ಇಂದಿಗೂ ನೋಡಬಹುದು. ಇಲ್ಲಿಗೆ ನಮ್ಮ ದೇಶದ ನಾನಾಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದುದಲ್ಲದೆ ಚೀಣ, ಬರ್ಮಾ, ಪರ್ಶಿಯಾ, ಈಜಿಪ್ಟ್ ಮತ್ತು ಗ್ರೀಸ್ ದೇಶಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರು.

# ಜೈನಧರ್ಮ

ಬುದ್ಧ ಮನೆಬಿಟ್ಟು ಹೊರಟುಹೋದ ಕಾಲಕ್ಕೆ ಇಂದಿನ ಬಿಹಾರ್, ಅಂದಿನ ಮಗಧೆಯಲ್ಲಿ ಮತ್ತೊಬ್ಬ ಕ್ಷತ್ರಿಯ ರಾಜಕುಮಾರ ವರ್ಧಮಾನ ಬೆಳೆಯುತ್ತಿದ್ದ. ಅವನು ಹುಟ್ಟಿದ ತಾರೀಕು ಕ್ರಿ. ಪೂ. ೫೪೦. ಅವನು ವಯಸ್ಸಿಗೆ ಬಂದ ಮೇಲೆ ಸಾಧುಜೀವನವನ್ನು ಆಯ್ದುಕೊಂಡ. ಗೌತಮ ನಂತೆ ಅವನೂ ಉಪವಾಸ ಮಾಡಿ, ಪ್ರಾರ್ಥನೆಯಲ್ಲಿ ಮಗ್ನನಾಗಿ, ಋಷಿಗಳೊಂದಿಗೆ ವಾದವಿವಾದ ಮಾಡುತ್ತಿದ್ದ. ಹೀಗೆ ಹನ್ನೆರಡು ವರ್ಷಕಾಲ ಶ್ರಮಿಸಿದ ಮೇಲೆ ಅವನು ಜಿನನಾದ. ಆತನಿಗೆ ಮಹಾವೀರನೆಂಬ ಹೆಸರೂ ಇತ್ತು. ತನ್ನ ತತ್ತ್ವವನ್ನು ಮಹಾವೀರ ಮೂವತ್ತು ವರ್ಷಕಾಲ ಉಪ ದೇಶಿಸಿದ. ಅವನ ಕುಲದ ಅನೇಕ ಮಂದಿ ಅವನ ಅನುಯಾಯಿಗಳಾದರು.

ಮಾನವರು ಕಷ್ಟಪಡಲು ಈ ಲೋಕದಲ್ಲಿ ಮತ್ತೆ ಮತ್ತೆ ಹುಟ್ಟುತ್ತಾರೆಂದು ಅವನ ನಂಬಿಕೆ. ಅವರು ಉಪವಾಸಮಾಡಿ, ಪ್ರಾರ್ಥನೆ ಸಲ್ಲಿಸಿ, ಒಳ್ಳೆಯತನ, ನಯವಿನಯ, ಭಕ್ತಿ, ಪಾಪಕ್ಕೆ ಪಶ್ಚಾ ತ್ತಾಪಗಳೆಂಬ ನಾಲ್ಕು ಸದ್ಗುಣಗಳನ್ನನುಸರಿಸಿದರೆ ಈ ಹುಟ್ಟುಸಾವುಗಳ ತೊಡಕಿನಿಂದ ಬಿಡುಗಡೆ ಹೊಂದುತ್ತಾರೆ. ಈ ನಾಲ್ಕು ಸದ್ಗುಣಗಳನ್ನು ಯುಕ್ತ ಜ್ಞಾನ, ಯುಕ್ತ ನಂಬಿಕೆ, ಯುಕ್ತಕಾರ್ಯ ಮತ್ತು ಎಲ್ಲರ ಬಗ್ಗೆಯೂ ಕರುಣೆಗಳ ಮೂಲಕ ಸಾಧಿಸಬಹುದು. ಪ್ರಾಣಿಗಳಿಗೆ ಮತ್ತು ಕ್ರಿಮಿ

ಕೀಟಗಳಿಗೆ ಕೂಡ ದಯೆತೋರಬೇಕೆಂದು ಜೈನರು ಒತ್ತಿ ಹೇಳುತ್ತಾರೆ. ಉಸಿರಾಡುವಾಗ ಸಣ್ಣಪುಟ್ಟ ಕ್ರಿಮಿಕೀಟಗಳಿಗೆ ಹಿಂಸೆಯಾಗುವುದೆಂದು ಜೈನ ಮುನಿಗಳು ಮೂಗಿನಮೇಲೆ ಒಂದು ಬಟ್ಟೆ ಕಟ್ಟಿಕೊಳ್ಳುತ್ತಾರೆ. ಜೈನರು ಶಾಕಾಹಾರಿಗಳು. ಆಬು ಪರ್ವತದ ಮೇಲೆ ಮತ್ತು ಪಾಲಿಟಾಣಾ, ಗಿರ್ನಾರಗಳಲ್ಲಿ ಅವರ ಮುಖ್ಯ ದೇವಾಲಯಗಳಿವೆ.

ಬುದ್ಧಧರ್ಮದಷ್ಟು ಜೈನಧರ್ಮ ಜನಪ್ರಿಯವಾಗಲಿಲ್ಲ. ಕಾರಣವಿಷ್ಟೇ: ಬುದ್ಧ ಮಿತಿಯನ್ನು ಬೋಧಿಸಿದ, ಜಿನ ದೇಹವನ್ನು ದಂಡಿಸಿ ಎಲ್ಲ ಸುಖವನ್ನೂ ತ್ಯಾಗಮಾಡಬೇಕೆಂದು ಹೇಳಿದ. ಜೈನಧರ್ಮವನ್ನು ಅವಲಂಬಿಸುವುದಕ್ಕೆ ಜನಕ್ಕೆ ಬಹಳ ಕಷ್ಟವಾಯಿತು. ಅದು ಅನೇಕ ವಿಷಯಗಳಲ್ಲಿ ಹಿಂದೂಧರ್ಮದ ಹಾಗೇ ಇದ್ದುದರಿಂದ, ಹಿಂದೂಧರ್ಮ ಅದನ್ನು ತನ್ನೊಳಗೆ ಸೇರಿಸಿಕೊಂಡು ಬಿಟ್ಟಿತು.

## ಸಿಕಂದರ್

ಹಿಂದೂಸ್ಥಾನದಲ್ಲಿ ಬುದ್ಧನ ಧರ್ಮ ಹರಡುತ್ತಿದ್ದ ಕಾಲದಲ್ಲಿ ಪಶ್ಚಿಮದ ಕಡೆ ಪರ್ಶಿಯನ್ ಸಾಮ್ರಾಜ್ಯ ಬೆಳೆಯುತ್ತಿತ್ತು.

ಪರ್ಶಿಯನ್ನರ ದೊರೆ ದರಯಸ್ಸ್‌ನಿಗೆ ಇತರರ ದೇಶಗಳನ್ನು ಗೆಲ್ಲುವ ಹಂಬಲ. ಅವನು ಗ್ರೀಸಿಗೆ ಮುತ್ತಿಗೆಹಾಕಿದ. ಗ್ರೀಸ್ ಸಾಮ್ರಾಜ್ಯ ಸಣ್ಣಪುಟ್ಟ ರಾಜ್ಯಗಳ ಒಕ್ಕೂಟವಾಗಿದ್ದರೂ ಗ್ರೀಕರಿಗೆ ತಮ್ಮ ಸ್ವಾತಂತ್ರ್ಯದ ಬಗ್ಗೆ ಅಪಾರ ಅಭಿಮಾನ. ಗ್ರೀಸಿನ ಜನರೆಲ್ಲಾ ಒಂದುಗೂಡಿ



ದರಯಸ್ಸನನ್ನೆದುರಿಸಿದರು. ಅವನಿಗೆ ಮರಾಥಾನ್ ಬಳಿ ಸೋಲಾಯಿತು.

ದರಯಸ್ಸಿನಾನಂತರ ಕ್ಸರ್‌ಕ್ಸೆಸ್ ಪರ್ಶಿಯಾ ಚಕ್ರವರ್ತಿಯಾದ. ಅವನೂ ಗ್ರೀಸಿಗೆ ಮುತ್ತಿಗೆ ಹಾಕಿದ. ಗ್ರೀಸಿನ ಒಂದು ಭಾಗವಾದ ಸ್ಪಾರ್ಟಾದ ಜನರು ತಮ್ಮ ದಳಪತಿ ಲಿಯೋನಿಡಾಸನನ್ನು ಪರ್ಶಿಯನ್ನರೊಂದಿಗೆ ಕಾದಲು ಕಳುಹಿಸಿಕೊಟ್ಟರು. ಲಿಯೋನಿಡಾಸ್ ಮುನ್ನೂರೇ ಜನ ಸ್ಪಾರ್ಟನ್ನರೊಂದಿಗೆ ಥರ್ಮೊಪೈಲೇ ಕಣಿವೆಯನ್ನು ರಕ್ಷಿಸಿದ. ಅಲ್ಲಿಯೇ ಅವನು ತನ್ನ ಸಹಯೋಧರೊಂದಿಗೆ ವೀರನಂತೆ ಮಡಿದ. ಪರ್ಶಿಯನ್ನರು ಕಣಿವೆದಾಟ ತಡವಾಗಿ ಬಂದುದರಿಂದ ಸಲಾಮಿಸ್ ಬಳಿಯಾದ ಸಮುದ್ರಕದನದಲ್ಲಿ ನಾಶಹೊಂದಿದರು.

ಅಲ್ಲಿಂದ ಗ್ರೀಕರ ನಗರ ಪ್ರಾಂತ್ಯಗಳು ಪ್ರೌಢವಾಗಿ ಬೆಳೆದು ಶಕ್ತಿ, ಸೌಂದರ್ಯ, ಗಾಂಭೀರ್ಯ

ದಿಂದ ಮೆರೆದಾಡಿದವು. ಸೊಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್ ಮೊದಲಾದ ಋಷಿಗಳು ಅಲ್ಲಿ ವರ್ಧಿಸಿದರು. ಕಾವ್ಯ, ಕಲೆಗಳು ಚೆನ್ನಾಗಿ ಬೆಳೆದವು.

ಮೆಸಿಡೋನಿಯಾ ಎಂಬ ಒಂದು ಗ್ರೀಕ್ ಪ್ರಾಂತ್ಯದ ದೊರೆ ಫಿಲಿಪ್. ಅವನ ಮಗನೇ ನಮಗೆ ಸಿಕಂದರನೆಂದು ಪರಿಚಿತನಾಗಿರುವ ಅಲೆಕ್ಸಾಂಡರ್. ಅಲೆಕ್ಸಾಂಡರನ ಗುರು ಮಹರ್ಷಿ ಅರಿಸ್ಟಾಟಲ್. ಅಲೆಕ್ಸಾಂಡರ್ ವಿದ್ಯಾವಂತನೂ, ಸ್ವಾಭಿಮಾನಿಯೂ ಆಗಿ ಬೆಳೆದ. ಗ್ರೀಸನ್ನು ಮುತ್ತಿದ ಪರ್ಶಿಯನ್ನರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಅವನ ಆಸೆಯಾಯಿತು. ಕ್ಸರ್‌ಕ್ಸೆನ್‌ನಾನಂತರ ರಾಜ್ಯಕ್ಕೆ ಬಂದ ಮೂರನೆಯ ದರಯಸ್ಸನ ಮೇಲೆ ಕದನ ಹೂಡಿ ತನ್ನ ಸೈನ್ಯಗಳನ್ನು ನುಗ್ಗಿಸಿದ.

ದರಯಸ್ಸನನ್ನು ಸೋಲಿಸಿದ ತರುವಾಯ ತಾನು ಗೆಲ್ಲಲು ರಾಜ್ಯಗಳು ಉಳಿಯಲಿಲ್ಲವೆಂದು ಅಲೆಕ್ಸಾಂಡರ್ ದುಃಖಪಟ್ಟನಂತೆ. ಆಗ ಯಾರೋ ಅವನಿಗೆ ಹಿಂದೂಸ್ಥಾನದ ವಿಷಯ ಹೇಳಿದರು. ಕ್ರಿ. ಪೂ. ೩೨೭ರಲ್ಲಿ ಅಲೆಕ್ಸಾಂಡರ್ ತನ್ನ ಸೈನ್ಯಗಳನ್ನು ಹಿಂದೂಸ್ಥಾನದ ಮೇಲೆ ನುಗ್ಗಿಸಿದ.

ಉತ್ತರ ಹಿಂದೂಸ್ಥಾನವನ್ನು ಪುರೂ ಎಂಬ ದೊರೆ ಆಳುತ್ತಿದ್ದ. ಪುರುವೂ ಅವನ ಸೈನ್ಯವೂ ವೀರರಂತೆ ಕಾದಿದರು. ಆದರೆ ಸಿಕಂದರನ ಕುದುರೆಗಳು ಹಿಂದುಗಳ ಆನೆಗಳಿಗಿಂತ ವೇಗವಾಗಿ ಓಡುತ್ತಿದ್ದುವು. ಪುರುವಿನ ಸೈನ್ಯಕ್ಕೆ ಅಪಜಯವಾಯಿತು. ಪುರುವನ್ನು ಸೆರೆಹಿಡಿದು ಸಿಕಂದರನ ಮುಂದೆ ನಿಲ್ಲಿಸಿದರು. ಸಿಕಂದರ್ ಕೇಳಿದ 'ನಿನ್ನನ್ನು ಹೇಗೆ ಕಾಣಬೇಕು ನಾವು?' ಪುರು ತಲೆಯೆತ್ತಿ ಗಂಭೀರವಾಗಿ ಹೇಳಿದನಂತೆ 'ದೊರೆಯಂತೆ.' ಪುರುವಿನ ಧೈರ್ಯನೋಡಿ ಸಿಕಂದರ್ ಮರುಳಾದ. ಪುರುವಿಗೆ



ರಾಜ್ಯವನ್ನು ಬಿಟ್ಟು ದಕ್ಷಿಣದ ಕಡೆಗೆ ಸಿಕಂದರ್ ಹೊರಟ.

ತಮ್ಮನ್ನು ತಾವೇ ಆಳಿಕೊಂಡು ಹಳ್ಳಿಗಳಲ್ಲಿ ಸ್ವತಂತ್ರವಾಗಿ ವಾಸಿಸುತ್ತಿದ್ದವರನ್ನು ಸಿಕಂದರ್ ಸೋಲಿಸಲಾಗಲಿಲ್ಲ. ಅವರು ಸಿಕಂದರನ ಸೈನ್ಯ ಗಳನ್ನು ಕಗ್ಗತ್ತಲಿನಲ್ಲಿ ಎದುರಿಸಿ ಗಾಯಗೊಳಿಸಿ ದರು. ಸಿಕಂದರನಿಗೆ ಭಯವಾಯಿತು. ಅವನ ಸೈನಿಕರಿಗೆ ಮನೆಯ ಯೋಚನೆ ಹತ್ತಿತು. ಸಿಕಂದರ್ ವಿಧಿಯಿಲ್ಲದೆ ಹಿಂದಿರುಗಬೇಕಾಯಿತು. ಸಿಂಧೂ ನದಿಯ ಕೆಳಗೆ ಅವನು ದೋಣಿಗಳಲ್ಲಿ ಪ್ರಯಾಣ ಮಾಡಬೇಕಾಗಿ ಬಂತು. ದಾರಿಯುದ್ದಕ್ಕೂ ಕದನ. ಅವನ ಸೈನಿಕರು ಸಾಯುತ್ತ ಬಂದರು. ಪರ್ಶಿಯಾ ಮುಟ್ಟುವ ವೇಳೆಗೆ ಸಿಕಂದರನ ಸೈನ್ಯದಲ್ಲಿ ಕೆಲವೇ ಸೈನಿಕರು ಉಳಿದಿದ್ದರು. ಅವನಿಗೂ ಆಯಾಸ ವಾಗಿತ್ತು. ಬ್ಯಾಬಿಲೋನಿನಲ್ಲಿ ತನ್ನ ಮೂವತ್ತ

ಮೂರನೆಯ ವಯಸ್ಸಿನಲ್ಲಿ ಹಟಾತ್ತಾಗಿ ಸಿಕಂದರ್ ಮೃತಿಹೊಂದಿದ. ಜಗತ್ತನ್ನು ಜಯಿಸುವ ಸಿಕಂದರನ ಕನಸು ಇಂತು ಕೊನೆಯಾಯಿತು.

ಸಿಕಂದರ್ ಮಹಾ ದುರಹಂಕಾರಿ, ಕುಡುಕ, ಹಿಂಸಾಪರ. ಆದರೆ ಆ ಕಾಲದಲ್ಲಿ ಜಗತ್ತನ್ನೇ ಜಯಿಸಬೇಕೆಂದು ಯಾರೂ ಯೋಚಿಸಿರಲಿಲ್ಲವಾದ್ದರಿಂದ ಅವನು ಪ್ರಸಿದ್ಧನಾದ. ಈಜಿಪ್ಟಿನಲ್ಲಿರುವ ಅಲೆಕ್ಸಾಂಡ್ರಿಯಾ ನಗರ ಅವನ ಹೆಸರನ್ನೇ ಹೊತ್ತಿದೆ.

ಸಿಕಂದರ ಗೆದ್ದಿದ್ದ ಅನೇಕ ದೇಶಗಳನ್ನು ಅವನ ದಳಪತಿಗಳು ಹಿಡಿದಿದ್ದರು. ಅನೇಕ ಗ್ರೀಕರು ಹಿಂದೂಸ್ಥಾನದಲ್ಲಿಯೇ ಉಳಿದುಕೊಂಡರು. ಅವರು ಹಿಂದೂಗಳೊಂದಿಗೆ ವಿವಾಹ ಸಂಬಂಧ ಬೆಳಸಿ ಹಿಂದೂ ದೇಶೀಯರೇ ಆದರು.

## ಮೌರ್ಯರು (ಕ್ರಿ. ಪೂ. ೩೨೨-೧೮೪)

ಸಿಕಂದರನ ದಂಡಯಾತ್ರೆ ಮುಗಿದಮೇಲೆ ಚಂದ್ರಗುಪ್ತ ಮೌರ್ಯ, ತನ್ನ ಗೆಳೆಯ ಚಾಣಕ್ಯನ ಸಹಾಯದಿಂದ ಉತ್ತರ ಹಿಂದೂಸ್ಥಾನವನ್ನೆಲ್ಲಾ ಜಯಿಸಿದ. ಈ ವಂಶದ ಅರಸರಿಗೆ ಮೌರ್ಯರೆಂದು ಹೆಸರು. ಅವರು ಒಳ್ಳೆಯ ಅರಸರಾಗಿದ್ದರು; ನ್ಯಾಯಪರರಾಗಿದ್ದರು. ಅವರು ಜನರ ಸಮ್ಮತಿಯಿಂದ ಆಳುತ್ತಿದ್ದರು. ಹೀಗೆಂದು ಚಾಣಕ್ಯ ಬರೆದಿರುವ ಅರ್ಥಶಾಸ್ತ್ರವೆಂಬ ಗ್ರಂಥದಿಂದ ತಿಳಿದುಬರುತ್ತದೆ.

ಸಿಂಹಾಸನ ಹತ್ತಿದಕೂಡಲೆ ಚಂದ್ರಗುಪ್ತ ತನ್ನ ಪ್ರಜೆಗಳಿಗೆ 'ನಿಮ್ಮನ್ನು ನಾನು ಹಿಂಸೆಪಡಿಸಿದರೆ ನನಗೆ ಸ್ವರ್ಗ, ಜೀವನ, ಸಂತಾನ ಎಲ್ಲಾ ತಪ್ಪಿಹೋಗಲಿ' ಎಂದು ಹೇಳಿದನಂತೆ.

ಚಂದ್ರಗುಪ್ತ ತನ್ನ ರಾಜ್ಯವನ್ನು ಒಂದುಗೂಡಿಸಿ ಗ್ರೀಕರ ಪ್ರಾಬಲ್ಯವನ್ನು ಮುರಿದುಬಿಟ್ಟ. ಆದರೂ ಸಿಕಂದರನ ಮುದಿ ದಳವತಿ ಸೆಲ್ಯೂಕಸ್ ಒಂದು ಸೈನ್ಯ ತೆಗೆದುಕೊಂಡು ಬಂದ. ಚಂದ್ರ ಗುಪ್ತನ ಮುಂದೆ ಅವನ ಪ್ರತಾಪ ನಡೆಯಲಿಲ್ಲ. ಸೆಲ್ಯುಕಸ್ಸಿಗೆ ಸೋಲಾಯಿತು. ಶಾಂತಿ ಕರಾರಾಯಿತು. ಸೆಲ್ಯುಕಸ್ ತನ್ನ ಒಬ್ಬಳು ಮಗಳನ್ನು ಚಂದ್ರಗುಪ್ತನಿಗೆ ಲಗ್ನಮಾಡಿಕೊಟ್ಟ.

ಚಂದ್ರಗುಪ್ತನ ಜೀವನದಲ್ಲಿ ಪುರಸತ್ತೆಂಬುದೇ ಇರಲಿಲ್ಲ. ಅವನಿಗೆ ಕರಿಮರದ ಲಕ್ಕಣಿಗೆಯಿಂದ ಮೈ ತಿಕ್ಕಿಸಿಕೊಳ್ಳಲು ತುಂಬ ಇಷ್ಟ. ಆಗಲೂ ಜನರ ಮನವಿಗಳನ್ನು ಕೇಳುತ್ತಿದ್ದನಂತೆ.

ಸೆಲ್ಯುಕಸ್ ತನ್ನ ಪ್ರತಿನಿಧಿಯಾಗಿ ಮೆಗಾಸ್ತನೀಸನನ್ನು ಹಿಂದೂಸ್ಥಾನದ ರಾಜಸಭೆಗೆ ಕಳುಹಿಸಿ ಕೊಟ್ಟ. ಚಂದ್ರಗುಪ್ತನ ಮೇಲೂ ಅವನ ಕಾಲದ ಮೇಲೂ ಮೆಗಾಸ್ತನೀಸ್ ಒಂದು ಅದ್ಭುತ ಪುಸ್ತಕ ಬರೆದಿದ್ದಾನೆ. ಈ ಪುಸ್ತಕದಿಂದ ಮತ್ತು ಚಾಣಕ್ಯನ ಅರ್ಥಶಾಸ್ತ್ರದಿಂದ ಚಂದ್ರಗುಪ್ತ ಎಷ್ಟು ಚೆನ್ನಾಗಿ ರಾಜ್ಯವಾಳಿದ ಎನ್ನುವುದು ತಿಳಿದುಬರುತ್ತದೆ.

ಅವನ ಕಾಲದಲ್ಲಿ ಅನೇಕ ಗ್ರಂಥಗಳು ಬರೆಯಲ್ಪಟ್ಟವು. ಅನೇಕ ಸುಂದರ ಕಲಾಕೃತಿಗಳು ಮಾಡಲ್ಪಟ್ಟವು.



# ಪಾಟಲಿಪುತ್ರ

ಮೌರ್ಯರ ರಾಜಧಾನಿ ಪಾಟಲಿಪುತ್ರ. ಅದು ರೋಮ್ ನಗರದ ನಾಲ್ಕರಷ್ಟು ದೊಡ್ಡದಾಗಿತ್ತು. ಈಗಿನ ಪಾಟ್ನಾನಗರ ಅದರ ಅವಶೇಷಗಳ ಮೇಲೆ ನಿಂತಿದೆ.

ಪಾಟಲಿಪುತ್ರದ ಯೋಗಕ್ಷೇಮವನ್ನು ಒಂದು ಮುನಿಸಿಪಲ್ ಸಮಿತಿ ನೋಡಿಕೊಳ್ಳುತ್ತಿತ್ತು. ಹಿಂದೂಸ್ಥಾನದಲ್ಲಿ ಇದೇ ಮೊದಲನೆಯ ಮುನಿಸಿಪಲ್ ಸಮಿತಿ. ಇನ್ನೊಂದು ಸಮಿತಿ ಜನಗಣತಿಯ ಲೆಕ್ಕ, ಹುಟ್ಟುಸಾವುಗಳ ಲೆಕ್ಕವನ್ನಿಟ್ಟಿತ್ತು. ಅದು ಮಿಕ್ಕ ವಿಷಯ ಸಂಗ್ರಹಮಾಡಿ ಅಂಕೆ ಅಂಶಗಳನ್ನೊದಗಿಸುತ್ತಿತ್ತು. ನಮ್ಮ ಕಾಲದವರೆಗೆ ಈ ಕೆಲಸ ಮಾಡಿದ ಸರ್ಕಾರಗಳು ಜಗತ್ತಿನಲ್ಲೇ ವಿರಳ.

ಪಾಟಲಿಪುತ್ರ ಭದ್ರವಾದ ಮರದ ಆವರಣದಿಂದ ರಕ್ಷಿಸಲ್ಪಟ್ಟಿತ್ತು. ಈ ಆವರಣಕ್ಕೆ ಅರವತ್ತು ನಾಲ್ಕು ಬಾಗಿಲುಗಳು, ಐನೂರು ಗೋಪುರಗಳು. ಸುತ್ತ ನೀರಿನಿಂದ ತುಂಬಿದ ವಿಶಾಲವಾದ ಕಂದಕ.

ಆ ಕಾಲದಲ್ಲಿ ಕಲ್ಲುಗಳು ದೊರೆಯದಿದ್ದುದರಿಂದ ಅರಮನೆಯನ್ನು ಮರದಲ್ಲಿಯೇ ಕಟ್ಟಿದ್ದರು. ಅರಮನೆಯ ಕಂಬಗಳಿಗೆ ಚಿನ್ನದ ವರ್ತಿ ಕೆಲಸಮಾಡಲ್ಪಟ್ಟಿತ್ತು. ಅಲ್ಲಲ್ಲಿ ಚಿನ್ನದ ಬಳ್ಳಿಗಳು, ಬೆಳ್ಳಿಯ ಹಕ್ಕಿಗಳು. ಅಲ್ಲಿಯೆ ವಿಶಾಲವಾದ ತೋಟ, ಮೀನು ಕೊಳಗಳು, ಸೊಗಸಾದ ಮರಗಳಿದ್ದವು.

ಈಗ ಆ ಅರಮನೆ ಬಂಕಿಪುರ ಮತ್ತು ಪಾಟ್ನಾನಗರಗಳ ಮಧ್ಯೆಯಿರುವ ಕುಮ್‌ರಾಹರ್ ಎಂಬ ಹಳ್ಳಿಯಲ್ಲಿ ಹುದುಗಿಹೋಗಿದೆ. ನಾವು ಮಹೇಂಜೊದಾರೊ, ಹರಪ್ಪ ಮುಂತಾದ ನಗರಗಳನ್ನು ಅಗೆದು ಪುನರುಜ್ಜೀವನಗೊಳಿಸಿದಂತೆ ಇದನ್ನೂ ಒಂದು ದಿನ ಅಗೆದು ಹೊರತೆಗೆಯಬೇಕಾಗಿದೆ.


## ಅಶೋಕ (ಕ್ರಿ. ಪೂ. ೨೬೮-೨೨೬)

ಈಗ ನಾವು ಹಿಂದೂಸ್ಥಾನದ ಅತ್ಯಂತ ಶ್ರೇಷ್ಠ ದೊರೆ ಮಾತ್ರವೇ ಅಲ್ಲ—ಜಗತ್ತಿನ ಒಬ್ಬ ಶ್ರೇಷ್ಠ ದೊರೆ ಅಶೋಕನ ಕಥೆಗೆ ಬರುತ್ತೇವೆ. ಅವನು ಚಂದ್ರಗುಪ್ತನ ಮೊಮ್ಮಗ. ಅವನ ಪಾಲಿಗೆ ಬಹಳ ದೊಡ್ಡ ಸಾಮ್ರಾಜ್ಯ ಬಂದಿತು.

ಅಶೋಕ ಬಹಳ ಒಳ್ಳೆಯ ದೊರೆ. ಬುದ್ಧದೇವನ ಉಪದೇಶ ಅವನ ಮನಸ್ಸಿಗೆ ನಾಟಿತ್ತು. ಅವನು ಯುದ್ಧವನ್ನು ಬಿಟ್ಟು ಪ್ರೇಮದಿಂದ ದೇಶವನ್ನು ಗೆದ್ದ.

ಈಗಿನ ಆಂಧ್ರವಾಗಿರುವ ಕಳಿಂಗ ದೇಶವನ್ನು ಮುತ್ತಿ ಅದನ್ನು ಅಶೋಕನ ಸೈನಿಕರು ಗೆದ್ದ ಮೇಲೆ ಅಲ್ಲಿ ಆದ ಸಾವು ನೋವುಗಳನ್ನು ಕಂಡು ಅಶೋಕನಿಗೆ ವಿಶೇಷ ದುಃಖವಾಯಿತು. ತನಗೆ ಅದರಿಂದ 'ಪಶ್ಚಾತ್ತಾಪ ಮತ್ತು ಅಪರಿಮಿತ ದುಃಖ'ವಾಯಿತೆಂದು ಅವನೇ ಹೇಳಿದ್ದಾನೆ. ರಾಜ್ಯವನ್ನು ವಿಸ್ತರಿಸುವುದಕ್ಕೆ ಇನ್ನು ಹಿಂಸೆಗೆ ಕೈಹಾಕುವುದಿಲ್ಲವೆಂದು ಅವನು ಮನಸ್ಸುಮಾಡಿದ. 'ಧರ್ಮಸೂತ್ರ

ಗಳಿಂದ ಮತ್ತು ಒಳ್ಳೆಯತನದಿಂದ ಮಾಡಿದ ದಿಗ್ವಿಜಯವೇ ಮಹಾ ದಿಗ್ವಿಜಯ' ಎಂದು ಅಶೋಕ ಹೇಳಿದ್ದಾನೆ. ಶಸ್ತ್ರಾಸ್ತ್ರಗಳಿಂದ ಯುದ್ಧಮಾಡುವುದು ದೊರೆಗಳ ಕರ್ತವ್ಯವೆಂಬ ತಪ್ಪು ಅಭಿಪ್ರಾಯವನ್ನು ತೊರೆಯಬೇಕೆಂದು ಅವನು ತನ್ನ ಮಕ್ಕಳನ್ನು ಬೇಡಿಕೊಂಡ. ಯುದ್ಧದಲ್ಲಿ ತೊಡಗಬೇಕಾದ ಪ್ರಸಂಗ ಒದಗಿದರೂ ತಾಳ್ಮೆ, ವಿನಯದಿಂದ ಹೆಚ್ಚಿನ ಸಂತೋಷ ಲಭಿಸುವುದೆಂದು ಅವನು ಬೋಧಿಸಿದ.



ಪ್ರಯಾಣಿಕರಿಗೆ ಅನೇಕ ವಿಶ್ರಾಂತಿ ಗೃಹಗಳನ್ನೂ ಅಶೋಕ ಕಟ್ಟಿಸಿದ. ಕಾಯಿಲೆಯವರಿಗೆ ಮುದುಕರಿಗೆ ಆಸ್ಪತ್ರೆಗಳು, ಪ್ರಾಣಿಗಳಿಗೆ ಕೂಡ ಆಸ್ಪತ್ರೆಯನ್ನು ಅವನು ಕಟ್ಟಿಸಿದ.

ಬೆಟ್ಟಗಳ ಮೇಲೆ ಮತ್ತು ಕಂಬಗಳ ಮೇಲೆ ತನ್ನ ಪ್ರಸಿದ್ಧ ಹದಿನಾಲ್ಕು ಶಾಸನಗಳನ್ನು ಕೆತ್ತಿಸಿದ. ಇವುಗಳಲ್ಲಿ ಕೆಲವು ಇನ್ನೂ ಉಳಿದಿವೆ. ಒಂದು ಅಲ್ಹಾಬಾದಿನ ಕೋಟೆಯಲ್ಲಿದೆ. ಶಾಸನಗಳು ಎಲ್ಲರಿಗೂ ಅರ್ಥವಾಗಲೆಂದು ಜನರ ಭಾಷೆಯಾದ ಪ್ರಾಕೃತದಲ್ಲಿ ಬರೆಯಲ್ಪಟ್ಟಿವೆ.

ನಮ್ಮ ರಾಷ್ಟ್ರಬಾವುಟದ ಮೇಲಿರುವ ಚಕ್ರವೂ, ಕೆಲವು ಅಂಚೆ ಚೀಟಿಗಳ ಮೇಲಿರುವ ಸಿಂಹಗಳೂ ಅಶೋಕನ ಸ್ತಂಭಗಳಿಂದ ತೆಗೆದುಕೊಳ್ಳಲಾಗಿದೆ.

ಬುದ್ಧಧರ್ಮಕ್ಕೆ ಸಂಬಂಧಪಟ್ಟ ಕಪಿಲವಸ್ತು, ಸಾರಾನಾಥ, ಗಯೆ ಮೊದಲಾದ ಪುಣ್ಯಕ್ಷೇತ್ರಗಳಿಗೆ ಅಶೋಕ ಇಪ್ಪತ್ತೈದು ವರ್ಷಗಳು ರಾಜ್ಯವಾಳಿದನಂತರ ಹೋಗಿಬಂದ. ಬುದ್ಧ ಹುಟ್ಟಿದ ಲುಂಬಿನಿ ತೋಟದಲ್ಲಿ ಒಂದು ಸ್ತಂಭ ನೆಡಸಿ ಅದರ ಮೇಲೆ 'ಇಲ್ಲಿಯೇ ಪವಿತ್ರಾತ್ಮನು ಜನನ ತಾಳಿದುದು' ಎಂದು ಶಾಸನ ಬರೆಯಿಸಿದ.

ಅಶೋಕ ನಲವತ್ತೊಂದು ವರ್ಷ ರಾಜ್ಯವಾಳಿದ. ಆಳ್ವಿಕೆಯ ಕೊನೆಗೆ ಅವನು ಸನ್ಯಾಸಿಯಾದ. ಅವನ ಮಗಳು ಚಾರುಮತಿ ನೇಪಾಳದಲ್ಲಿ ಒಂದು ನಗರ ಕಟ್ಟಿಸಿದಳು. ಇಲ್ಲಿಯೇ ಆಕೆ ಭಿಕ್ಷುಣಿಯಾಗಿ ತಾನು ಕಟ್ಟಿಸಿದ್ದ ಒಂದು ಆಶ್ರಮದಲ್ಲಿ ಜೀವಿಸಿದಳು. ಆ ಸ್ಥಳಕ್ಕೆ ಇನ್ನೂ ಆಕೆಯ ಹೆಸರೇ ಇದೆ.

ಅಶೋಕನ ಕಾಲದಲ್ಲಿ ನಮ್ಮ ದೇಶದ ಪುರುಷರು, ಸ್ತ್ರೀಯರು, ಮಕ್ಕಳು, ಎಲ್ಲರೂ ಸುಖವಾಗಿದ್ದರೆಂದು ತಿಳಿಯಬರುತ್ತದೆ. ಈಜಿಪ್ಟ್, ಪರ್ಶಿಯಾ, ಚೀಣ, ಲಂಕಾ, ಬರ್ಮಾ, ಸಯ್ಯಾಂ ಮತ್ತು ಇತರ ದೇಶಗಳ ದೊರೆಗಳಿಗೆ ಅಶೋಕ ಸ್ನೇಹಸಂದೇಶವನ್ನು ಕಳುಹಿಸಿಕೊಟ್ಟ.

ಅಶೋಕನ ಮಗ ಮಹೇಂದ್ರ, ಮಗಳು ಸಂಗಮಿತ್ರ ಲಂಕೆಗೆ ಬುದ್ಧದೇವನ ಸಂದೇಶವನ್ನು ಒಯ್ದರು. ಸಂಗಮಿತ್ರ ತನ್ನೊಂದಿಗೆ ಬುದ್ಧಗಯೆಯಿಂದ ಬೋಧಿವೃಕ್ಷದ ಸಸಿಯನ್ನು ಚಿನ್ನದ ಕರಂಡದಲ್ಲಿ ತೆಗೆದುಕೊಂಡು ಹೋಗಿ ಲಂಕೆಯಲ್ಲಿ ನೆಟ್ಟ. ಈಗಲೂ ಅದರ ಮರವನ್ನು ಲಂಕೆಯಲ್ಲಿ ನೋಡಬಹುದು. ಜಗತ್ತಿನಲ್ಲಿ ಅದೇ ಅತ್ಯಂತ ಪುರಾತನವಾದ ಮರ.

# ಅಶೋಕನಾನಂತರ

ಅಶೋಕ ತೀರಿಕೊಂಡ ಐವತ್ತು ವರ್ಷಗಳ ಮೇಲೆ ಮೌರ್ಯಸಾಮ್ರಾಜ್ಯ ಒಡೆದುಹೋಯಿತು. ಪುಷ್ಯಮಿತ್ರನೆಂಬ ಬ್ರಾಹ್ಮಣ ಉತ್ತರದಲ್ಲಿ ದೊರೆಯಾದ. ದಕ್ಷಿಣವಲ್ಲಿ ತೆಲುಗು ಮಾತನಾಡುವ ಒಂದು ವಂಶ ಅಧಿಕಾರಕ್ಕೆ ಬಂದಿತು.

ಪುಷ್ಯಮಿತ್ರ ಹಿಂದೂಧರ್ಮವನ್ನು ಪುನರುಜ್ಜೀವನಗೊಳಿಸಿದ. ಆದರೆ ಬೌದ್ಧಧರ್ಮದ ಪ್ರಾಬಲ್ಯ ವೇನೂ ಕಡಿಮೆಯಾಗಿರಲಿಲ್ಲ.

ಮಧ್ಯ ಏಷ್ಯಾದಲ್ಲಿರುವ ಬ್ಯಾಕ್ಟ್ರಿಯದಿಂದ ಮಿನಾಂಡರ್ ಬಂದು ಪುಷ್ಯಮಿತ್ರನ ರಾಜ್ಯವನ್ನು ಮುತ್ತಿದ. ಅವನನ್ನು ಹೊಡೆದು ಆಚೆಗಟ್ಟಲಾಯಿತು. ಆದರೆ ಅವನು ಕಾಬೂಲ್, ಸಿಂಧಗಳನ್ನು ಕಬಳಿಸಿದೆ ಬಿಡಲಿಲ್ಲ.

ಮಧ್ಯ ಏಷ್ಯದಿಂದ ಹಸಿದ ಧಾಳಿಕಾರರ ಪಿಡುಗು ಮೊದಲಿನಿಂದಲೂ ಹಿಂದೂಸ್ಥಾನಕ್ಕೆ ತಪ್ಪಿದ್ದಲ್ಲ. ಈಗ ಮತ್ತೆ ಅವರ ಹಾವಳಿ ಆರಂಭವಾಯಿತು. ಬ್ಯಾಕ್ಟ್ರಿಯಾದವರು, ಶಕರು, ಸಿಥಿಯನ್ನರು, ತುರುಕರು, ಕುಶಾನರು ಮೇಲಿಂದ ಮೇಲೆ ಬರತೊಡಗಿದರು. ಹಿಂದೂಸ್ಥಾನ ಈ ಪಣಗಳನ್ನು ಅರಗಿಸಿಕೊಂಡು ಅವರನ್ನು ನಾಗರಿಕರನ್ನಾಗಿ ಮಾಡತೊಡಗಿತು. ಅವರಲ್ಲಿ ಬಹುಮಂದಿ ಬೌದ್ಧರಾದರು.

ಈ ಕಾಲಕ್ಕೆ ಬುದ್ಧನ ಉಪದೇಶ ಉತ್ತರ ಮುಖದಲ್ಲಿ ಪಸರಿಸಿ ಗೋಬಿಮರಳ್ನಾಡು, ಚೀಣ, ತಿಬೆಟ್ಟು ಗಳನ್ನು ಹೊಕ್ಕಿತು. ಮಧ್ಯ ಏಷ್ಯಾದಿಂದ ಹಿಂದೂಸ್ಥಾನದ ವರೆಗೆ ಹಬ್ಬಿದ ಕುಶಾನ್ ಮಹಾಸಾಮ್ರಾಜ್ಯ ಬೌದ್ಧ ಸಾಮ್ರಾಜ್ಯವಾಯಿತು. ಕುಶಾನರ ದೊರೆ ಕನಿಷ್ಕಾ ಬೌದ್ಧಧರ್ಮ ಪ್ರಸಾರಕ್ಕೆ ನೆರವಾದ. ಅವನು ಬೌದ್ಧ ಭಿಕ್ಷುಗಳ ಅನೇಕ ಸಭೆಗಳನ್ನು ಏರ್ಪಡಿಸಿ ವಿಚಾರ ವಿನಿಮಯಕ್ಕೆ ಅನುಕೂಲ ಮಾಡಿಕೊಟ್ಟ.

ಬುದ್ಧನ ಉಪದೇಶದ ಎರಡು ರೂಪಗಳು ಆಕಾರಗೊಂಡವು. ಮಹಾಯಾನದಲ್ಲಿ ಮೂರ್ತಿ ಪೂಜೆಗೆ ಅವಕಾಶವಿದೆ. ಅದು ಬಹುಮಟ್ಟಿಗೆ ಹಿಂದೂಧರ್ಮವನ್ನು ಹೋಲುತ್ತದೆ. ಹೀನಯಾನ ಹೆಚ್ಚು ಸುಲಭವೂ ಶುದ್ಧವೂ ಆದುದು.

ಬುದ್ಧನ ಅನೇಕ ಮೂರ್ತಿಗಳು ಕಡೆಯಲ್ಪಟ್ಟವು. ಅವನ ಜೀವನದಲ್ಲಿ ನಡೆದ ಕಥೆಗಳು ಬರೆಯಲ್ಪಟ್ಟವು. ಬೌದ್ಧವಿಹಾರಗಳಲ್ಲಿ ಶಿಲ್ಪ, ಚಿತ್ರಕಲೆ ಚೆನ್ನಾಗಿ ವರ್ಧಿಸುತ್ತ ಬಂದಿತು. ಆತನ ಉಪದೇಶ ಜಗತ್ತಿನಲ್ಲೆಲ್ಲಾ ಹಬ್ಬಿತು.

## ವಿಶಾಲ ಭಾರತ

ಬಂಗಾಳದ ಒಂದು ರಾಜ್ಯದ ರಾಜಕುಮಾರ ವಿಜಯನನ್ನು ದೊರೆ ದೇಶಭ್ರಷ್ಟನನ್ನಾಗಿ ಮಾಡಿದ. ಅವನು ತನ್ನ ಅನುಯಾಯಿಗಳೊಂದಿಗೆ ಲಂಕೆಯಲ್ಲಿ ಬಂದಿಳಿದ. ಲಂಕೆಯಲ್ಲಿ ಕುವನ್ನಳೆಂಬ ಆದಿ ನಿವಾಸಿಗಳ ರಾಜಕುಮಾರಿಯನ್ನು ಲಗ್ನಮಾಡಿಕೊಂಡ. ಲಂಕಾಧಿಪತ್ಯ ವಿಜಯನಿಗೆ ದೊರೆಯುವುದಕ್ಕೆ

ಆಕೆ ನೆರವಾದಳು. ವಿಜಯ ಸಿಂಹ ವಂಶಸ್ಥನೆಂಬ ಪ್ರತೀತಿಯಿದ್ದುದರಿಂದ ಸಿಂಹಳರೆಂಬ ಹೆಸರು ಲಂಕಾನಿವಾಸಿಗಳಿಗೆ ಬಂತು. ಅನುರಾಧಾಪುರ, ಪೊಲನ್ನರುವ ನಗರಗಳ ಜೀವನ ಹಿಂದೂಸ್ಥಾನದ ಜೀವನದಂತೇ ಇತ್ತು.

ಈ ಕಾಲಕ್ಕೆ ದಕ್ಷಿಣದ ಆಂಧ್ರ ದೊರೆಗಳು ಹಿಂದೂಧರ್ಮ ಪ್ರಸಾರದಲ್ಲಿ ಆಸಕ್ತರಾಗಿದ್ದರು. ಆ ಕಾಲದ ದಕ್ಷಿಣ ಹಿಂದೂಸ್ಥಾನದ ಜನ ತಾವೇ ದೋಣಿಗಳನ್ನು ಕಟ್ಟಿ ನಡಸುತ್ತಿದ್ದರು. ಅವರು ಸಮುದ್ರ ದಾಟಿ ಕಾಂಭೋಜ, ಶ್ರೀ ವಿಜಯ, ಆಂಗ್‌ಕೋರ್, ಮದಜಾಪಾಲಿಟ್ ಮೊದಲಾದ ಮಹಾ ನಗರಗಳನ್ನು ಕಟ್ಟಿದರು. ಎರಡು ಸಾವಿರ ವರ್ಷಕಾಲ ಹಿಂದೂ ಮತ್ತು ಪೆಸಿಫಿಕ್ ಸಾಗರಗಳ ಮಧ್ಯೆಯಿರುವ ದ್ವೀಪಗಳಲ್ಲಿ ಬೌದ್ಧಧರ್ಮ, ಹಿಂದೂಧರ್ಮಗಳು ವರ್ಧಿಸಿದವು. ಅಲ್ಲಿ ಸೊಗಸಾದ ದೇವಾಲಯಗಳನ್ನು ಕಟ್ಟಿದರು. ಬೆಟ್ಟಗಳನ್ನು ಕಡೆದರು. ಹಿಂದೂಸ್ಥಾನದ ನಾಟಕ, ನಾಟ್ಯ ಸಂಪ್ರದಾಯಗಳು ಅಲ್ಲಿ ವರ್ಧಿಸಿದವು. ಈ ಕಲೆಗಳು ಕೆಲಕಾಲಾನಂತರ ಹಿಂದೂಸ್ಥಾನದಲ್ಲಿ ನಾಮಾವಶೇಷವಾದರೂ ಜಾವಾ, ಬಾಲಿ, ಸುಮಾತ್ರಾ, ಕಾಂಬೋಡಿಯಾ, ಸಯಾಂಗಳಲ್ಲಿ ಸಜೀವವಾಗಿ ಉಳಿದುಕೊಂಡವು.

# ಗುಪ್ತರು (ಕ್ರಿ. ಪೂ. ೩೨೦-ಕ್ರಿ. ಶ. ೬೫೦)

ಕುಶಾನರ ಮತ್ತು ಆಂಧ್ರರ ಯುಗ ಕಳೆದ ಮೇಲೆ ಪಾಟಲಿಪುತ್ರದಲ್ಲಿ ಇನ್ನೊಬ್ಬ ಚಂದ್ರಗುಪ್ತ ಹುಟ್ಟಿ ಒಂದು ವಂಶವನ್ನು ಸ್ಥಾಪಿಸಿದ. ಈತನ ಹೆಸರೂ ಚಂದ್ರಗುಪ್ತ ಮೌರ್ಯನ ಹೆಸರಿನಂತೆಯೇ ಇದೆ. ನಾವು ಒಂದಕ್ಕೊಂದನ್ನು ಬೆರಸಬಾರದು.

ಮೊದಲನೆಯ ಚಂದ್ರಗುಪ್ತನ ತರುವಾಯ ಸಿಂಹಾಸನಕ್ಕೆ ಬಂದ ಅವನ ಮಗ ಸಮುದ್ರಗುಪ್ತ ನಲವತ್ತೈದು ವರ್ಷ ರಾಜ್ಯವಾಳಿದ. ಇವನು ಉತ್ತರ ಹಿಂದೂಸ್ಥಾನವನ್ನೆಲ್ಲಾ ಒಂದುಗೂಡಿಸಿದ. ಸಮುದ್ರಗುಪ್ತ ಮಹಾ ವೀರನಾಗಿದ್ದುದಲ್ಲದೆ ಉತ್ತಮ ಕವಿಯೂ ಗಾಯಕನೂ ಆಗಿದ್ದ. ಇವನಾನಂತರ ಸಿಂಹಾಸನವೇರಿದವನು ಇವನ ಮಗ ಎರಡನೆಯ ಚಂದ್ರಗುಪ್ತ ಅಥವಾ ವಿಕ್ರಮಾದಿತ್ಯ. ನಾವು ಇವನನ್ನು ವಿಕ್ರಮಾದಿತ್ಯನೆಂದೇ ಕರೆಯುವ. ಹಾಗೆ ಕರೆದರೆ ಇವನ ಹೆಸರನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬಹುದು. ವಿಕ್ರಮಾದಿತ್ಯ ಉಜ್ಜಯಿನಿಯನ್ನು ಗೆದ್ದು ಅದನ್ನು ತನ್ನ ರಾಜಧಾನಿ ಮಾಡಿಕೊಂಡ.

ಈ ವೇಳೆಗೆ ಕ್ರಿಸ್ತಾನಂತರ ನಾಲ್ಕು ಶತಮಾನಗಳು ಕಳೆದಿದ್ದವು. ಅಶೋಕನ ಕಾಲ ಆರು ನೂರು ವರ್ಷಗಳ ಕೆಳಗೆ ಆಗಿಹೋಗಿತ್ತು.

ಬೌದ್ಧಧರ್ಮದ ಪವಿತ್ರ ಕ್ಷೇತ್ರಗಳ ಸಂದರ್ಶನ ಮಾಡುವುದಕ್ಕೆ ಪ್ರಸಿದ್ಧ ಚೀಣೀ ಪ್ರಯಾಣಿಕ ಫಾಹಿಯನ್ ಬಂದ. ಅವನು ವಿಕ್ರಮಾದಿತ್ಯನ ವಿಷಯವನ್ನೂ ಆ ಕಾಲದ ಜನರ ವಿಷಯವನ್ನೂ ಬಹಳ ಸ್ವಾರಸ್ಯವಾಗಿ ನಿರೂಪಿಸಿದ್ದಾನೆ. ಅವರು ಸಂಪದ್ಯುಕ್ತರಾಗಿ ಸುಖವಾಗಿದ್ದರೆಂದು ಅವನು ಹೇಳುತ್ತಾನೆ. ಪ್ರಯಾಣಿಕರಿಗೆ ಅನೇಕ ವಿಶ್ರಾಂತಿ ಗೃಹಗಳಿದ್ದವು. ಜನರೇ ಕಾಣಿಕೆ ಕೊಟ್ಟು ಕಟ್ಟಿಸಿದ ಒಂದು ಉಚಿತ ಚಿಕಿತ್ಸಾಲಯ ರಾಜಧಾನಿಯಲ್ಲಿತ್ತು. ಜಗತ್ತಿನಲ್ಲೆಲ್ಲಾ ಪ್ರಾಯಶಃ ಇದೇ ಮೊದಲನೆಯ ಉಚಿತ ಚಿಕಿತ್ಸಾಲಯ. ಅಸ್ಪೃಶ್ಯರು ಅಥವಾ ಚಂಡಾಲರು ಊರ ಹೊರಗೆ ವಾಸಿಸುತ್ತಿದ್ದರು. ಅವರು ಊರ ಒಳಗೆ ಬರುವುದನ್ನು ಸೂಚಿಸಲು ಒಂದು ಮರದ ಕೊರಡಿನಿಂದ ಶಬ್ದ ಮಾಡಬೇಕಾಗುತ್ತಿತ್ತು.

ಸರ್ಕಾರ ಒಳ್ಳೆಯದಾಗಿತ್ತೆಂದೂ, ಬುದ್ಧನ ಉಪದೇಶಗಳನ್ನು ಕೆಲವು ಜನ ನಿಷ್ಠೆಯಿಂದ ಅನುಸರಿಸುತ್ತಿದ್ದರೆಂದೂ ಫಾಹಿಯನ್ ಹೇಳುತ್ತಾನೆ. ಗುಪ್ತ ದೊರೆಗಳು ಹಿಂದುಗಳಾದುದರಿಂದ ಬೌದ್ಧ ಧರ್ಮ ಕ್ಷಯಿಸಿದುದು ಸ್ವಾಭಾವಿಕವಾಗಿದೆ. ಗಯಾನಗರ ಬರಿದಾಗಿತ್ತು. ಪವಿತ್ರ ಕ್ಷೇತ್ರಗಳಲ್ಲಿ ಕಾಡುಗಳು ಬೆಳೆದಿದ್ದವು. ಕಪಿಲವಸ್ತು ನಿರ್ಜನ ಪ್ರದೇಶವಾಗಿತ್ತು.

ವಿಕ್ರಮಾದಿತ್ಯನ ಆಳ್ವಿಕೆ ಕಲೆ, ಸಾಹಿತ್ಯಕ್ಕೆ ಬಹಳ ಹೆಸರಾಗಿದೆ. ಅಶ್ವಘೋಷನಿಂದ ಆರಂಭವಾದ ಸಂಸ್ಕೃತ ಸಾಹಿತ್ಯ ಈಗ ಬಹಳ ಪ್ರಾಗಲ್ಭ್ಯಸ್ಥಿತಿಗೆ ಬಂದಿತು. ರಾಮಾಯಣ, ಭಾರತ ಕಥೆಗಳು ನಾಟಕರೂಪವಾಗಿ ಪುನರಾವತಾರ ತಾಳಿದವು.

ಕಾಳಿದಾಸನ ಕಾಲ ನಿಷ್ಕರ್ಷೆಯಾಗಿ ತಿಳಿಯದಿದ್ದರೂ ಅವನು ಈ ಕಾಲದವನೆಂದು ಊಹಿಸಬಹುದು. ಕಾಳಿದಾಸ ಅನೇಕ ಸುಂದರ ಕಾವ್ಯಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಶಾಕುಂತಲ ನಾಟಕ ಒಂದು. ಒಂದು ದಿನ ರಾಜಾ ದುಷ್ಯಂತ ಬೇಟೆಗೆ ಹೊರಡುತ್ತಾನೆ. ಅಲ್ಲಿ ಕಣ್ವಋಷಿಯ ಸಾಕು



ಮಗಳಾದ ಶಕುಂತಲೆಯನ್ನು ಕಂಡು ಅನುರಕ್ತನಾಗುತ್ತಾನೆ. ಅವಳನ್ನು ಹಕ್ಕಿಗಳು ಸಾಕಿದುದರಿಂದ ಶಕುಂತಲೆ ಎಂಬ ಹೆಸರು ಬಂತು. ಶಕುಂತಲೆಗೆ ಹಕ್ಕಿಗಳು, ಪ್ರಾಣಿಗಳು ಎಂದರೆ ಪಂಚಪ್ರಾಣ. ಅವುಗಳ ಭಾಷೆಯನ್ನವಳು ಮಾತನಾಡುತ್ತಿದ್ದಳು. ದುಷ್ಯಂತ ಆಕೆಯನ್ನು ವಿವಾಹವಾಗುತ್ತಾನೆ.



ಅವನು ಕೊಟ್ಟಿದ್ದ ಉಂಗುರವನ್ನು ಕಳೆದುಕೊಂಡದ್ದರಿಂದ ಶಕುಂತಲೆ ಕೆಲವುಕಾಲ ಗಂಡನನ್ನು ಬಿಟ್ಟು ಇರಬೇಕಾಯಿತು. ಆಕೆ ಸುಂದರಿಯೂ ಹೌದು, ಧೈರ್ಯಶಾಲಿನಿಯೂ ಹೌದು. ಅನೇಕ ಕಷ್ಟಗಳನ್ನು ಕಡೆಹಾಯ್ದ ಮೇಲೆ ಇಬ್ಬರೂ ಮತ್ತೆ ಸೇರಿ ಸುಖವಾಗಿರುತ್ತಾರೆ.

ಮೇಘದೂತವೆಂಬ ದಿವ್ಯಕಾವ್ಯವನ್ನು ಬರೆದವನೂ ಕಾಳಿದಾಸನೇ. ಪ್ರಿಯ ದೇಶಭ್ರಷ್ಟನಾಗಿ ಬಹಳ ದೂರದಲ್ಲಿ ವಿದೇಶದಲ್ಲಿದ್ದಾನೆ. ಮಳೆಗಾಲದ ಒಂದು ಮೋಡ ನೋಡಿ ತನ್ನ ಪ್ರಿಯತಮೆಗೆ ಒಂದು ಸಂದೇಶವನ್ನು ತೆಗೆದುಕೊಂಡು ಹೋಗೆಂದು ಕೇಳಿಕೊಳ್ಳುತ್ತಾನೆ. ಪ್ರಿಯತಮೆ ಇರುವ ಸ್ಥಳವನ್ನು ವಿವರಿಸುತ್ತಾ ಅನೇಕ ನಗರಗಳು, ಜನಗಳನ್ನು ವರ್ಣಿಸುತ್ತಾನೆ.

ಮೃಚ್ಛಕಟಿಕ ಅಥವಾ ಆಟದ ಗಾಡಿ ಎಂಬ ಉಜ್ಜ್ವಲ ನಾಟಕ ಕಾಳಿದಾಸನ ಕಾಲಕ್ಕೆ ಮುಂಚೆ ಬರೆಯಲ್ಪಟ್ಟದ್ದು. ಅದು ಶಾಕುಂತಲಕ್ಕೂ ಹೆಚ್ಚು ಶಕ್ತಿಯುತವಾಗಿದೆ. ಒಬ್ಬ ಕೆಟ್ಟ ದೊರೆಯ ವಿರುದ್ಧ ನಡೆದ ಬಂಡಾಯದ ಕಥೆಯನ್ನದು ವಿವರಿಸಿದೆ.

ವಿಕ್ರಮಾದಿತ್ಯನ ಆಸ್ಥಾನದಲ್ಲಿ ಆಡಲ್ಪಟ್ಟ ವಿಶಾಖಾದತ್ತನ ಮುದ್ರಾರಾಕ್ಷಸ ನಾಟಕ ಇಂದಿನ ನಾಟಕಗಳಂತಿದೆ. ಅದೇ ಭಾವ, ಅನುಭಾವ ಅದರಲ್ಲಿ ತುಂಬಿದೆ. ಚಂದ್ರಗುಪ್ತ ಮೌರ್ಯನ ಮಂತ್ರಿಯಾದ ಚಾಣಕ್ಯನ ತಂತ್ರಗಳನ್ನು ಅದು ಚಿತ್ರಿಸುತ್ತದೆ. ಅರ್ಥಶಾಸ್ತ್ರ ಬರೆದವನು ಚಾಣಕ್ಯನೆಂದು ನಿಮಗೆ ನೆನಪಿರಬಹುದು.

ಗುಪ್ತರ ಕಾಲದ ಶಿಲ್ಪಗಳೂ, ಆಟದ ಸಾಮಾನುಗಳೂ ಪ್ರಸಿದ್ಧವಾಗಿವೆ. ಅವು ಮಥುರೆ ಮತ್ತು

ಇತರ ಸ್ಥಳಗಳಲ್ಲಿ ದೊರೆಯುತ್ತವೆ. ಅಜಂತೆಯ ಗುಹಾಂತರ್ದೇವಾಲಯಗಳಲ್ಲಿರುವ ಭವ್ಯ ಚಿತ್ರಗಳು ಪ್ರಾಯಶಃ ಈ ಕಾಲದಲ್ಲಿ ಮುಗಿಸಲ್ಪಟ್ಟಿರಬೇಕು.



ಇದು ಹಿಂದೂಸ್ಥಾನದ ಸ್ವರ್ಣಯುಗ. ನಮ್ಮ ದೇಶದ ಕಥೆಯಲ್ಲಿ ಹಾಗೂ ಜಗತ್ತಿನ ಕಥೆಯಲ್ಲಿ ಅತ್ಯಂತ ವೈಭವಯುಕ್ತ ಕಾಲ.

ಬುದ್ಧನ ಉಪದೇಶ ಸಾರಿದ ಭಿಕ್ಷುಗಳು ಜನರ ಹೃದಯದಲ್ಲಿ ಪ್ರೇಮ ಭಾವನೆ ತುಂಬಿದರು. ಜನ ಒಬ್ಬರನ್ನೊಬ್ಬರು ಪರಸ್ಪರ ಅರಿಯಲೆತ್ನಿಸಿದರು. ಯುದ್ಧಗಳು, ದಿಗ್ವಿಜಯಗಳು ನಡೆದಿದ್ದರೂ ನಮ್ಮ ಪರಂಪರಾಗತ ಸಹನೆ ಅದ್ವಿತೀಯವಾದುದು.



ಚಿತ್ರಕಾರರು ನೆಲದ ಬಣ್ಣಗಳನ್ನೇ ಬೆರಸಿ ವಿಹಾರಗಳ ಇಡೀ ಗೋಡೆಗಳ ಮೇಲೆ, ಅರಮನೆಯ ಗೋಡೆಗಳ ಮೇಲೆ ಸುಖಜೀವನದ ಚಿತ್ರಗಳನ್ನು ಬರೆಯುತ್ತಿದ್ದರು.

ನಾಟ್ಯಕಲೆಯೂ ಚೆನ್ನಾಗಿ ವರ್ಧಿಸಿತು. ಪ್ರತಿಯೊಂದು ಮುದ್ರೆಗೂ ಒಂದೊಂದು ಅರ್ಥವಿದೆ. ನರ್ತಕರ ಚಲನವಲನದಿಂದ ಒಂದು ಇಡೀ ಕಥೆಯನ್ನೇ ಹೇಳಬಹುದು. ಈ ಮುದ್ರೆಗಳು ನೋಡುವುದಕ್ಕೆ ಬಲು ಸುಂದರ. ಕೆಲವು ಮುದ್ರೆಗಳು ಹೂವರಳಿ, ಮುಚ್ಚಿದಂತೆ ಕಾಣುತ್ತವೆ. ಕೆಲವು ಹಕ್ಕಿಗಳ

ಹಾರಾಟದಂತೆ ಕಾಣುತ್ತವೆ. ಮತ್ತೆ ಕೆಲವು ಹಾವುಗಳ ಲಾವಣ್ಯಪೂರಿತ ಮಂದಗಮನದಂತೆ ಕಾಣುತ್ತವೆ.

ಸಂಗೀತ ಕಲೆಯೂ ವರ್ಧಿಸಿತು. ನಾದದಿಂದ ರಾಗವನ್ನು ಗುರುತಿಸುತ್ತಿದ್ದುದಲ್ಲದೆ, ಆ ನಾದದ ಪ್ರತಿಯೊಂದು ಅಂಶಕ್ಕೂ ನಿಯೋಜಿತವಾಗಿದ್ದ ವರ್ಣಗಳಿಂದಲೂ ಗುರುತಿಸುತ್ತಿದ್ದರು.

ಜನರ ಭಾವನೆಗಳು, ಕಾರ್ಯಗಳನ್ನು ಕಥೆಗಳಲ್ಲಿ, ನಾಟಕಗಳಲ್ಲಿ ನಿರೂಪಿಸುತ್ತಿದ್ದರು. ಅಂತಹ ನೂರಾರು ಪುಸ್ತಕಗಳು ನಮ್ಮವರೆಗೂ ಬಂದಿವೆ. ಇವುಗಳಿಂದ ಆ ಕಾಲದ ಜನ ಹೇಗೆ ಬದುಕಿ ಬಾಳುತ್ತಿದ್ದರೆಂದು ತಿಳಿಯಪಡುತ್ತದೆ. ಜೀವನ ಸುಂದರವಾಗಿ ಸುಖಕರವಾಗಿತ್ತು. ಈಗ ಎರಡು ಮೂರು ಶತಮಾನಗಳಿಂದ ಹಿಂದೂಸ್ಥಾನ ದುಃಖದಲ್ಲಿ ಮುಳುಗಿರುವಂತೆ ಹಿಂದೆ ಇರಲಿಲ್ಲವೆಂದು ಇದರಿಂದ ನಮಗೆ ತಿಳಿಯಬರುತ್ತದೆ.

## ಹೂಣರು

ವಿಕ್ರಮಾದಿತ್ಯನ ವಂಶದವರು ಸುಮಾರು ಮುನ್ನೂರು ವರ್ಷಕಾಲ ರಾಜ್ಯವಾಳಿದರು. ಆದರೆ ಗುಪ್ತರಿಗೆ ಎಲ್ಲ ಕಡೆಯಿಂದಲೂ ಏಟುಗಳು ಬೀಳುತ್ತಿದ್ದವು. ಅವರ ಸಾಮ್ರಾಜ್ಯ ಹೂಣರ ಧಾಳಿಗಳಿಂದ ದುರ್ಬಲವಾಗುತ್ತ ಬಂತು.

ಹೂಣರು ಮಧ್ಯ ಏಷ್ಯಾದ ಕಡೆಯಿಂದ ಬಂದ ಗೋವಳರು.

ಒಂದು ಕಾಲದಲ್ಲಿ ಅಟಿಲ್ಲಾನ ನಾಯಕತ್ವದಲ್ಲಿ ಅವರು ಯೂರೋಪನ್ನು ಮುತ್ತಿ ಅದನ್ನು ಧ್ವಂಸ ಮಾಡಿದ್ದರು. ಗುಪ್ತರ ಐದನೆಯ ದೊರೆಯಾದ ಸ್ಕಾಂದಗುಪ್ತನ ಕಾಲದಲ್ಲಿ ಹಿಂದೂಸ್ಥಾನವನ್ನು ಮುತ್ತಿದ್ದರು. ಆದರೆ ಆಗ ಸ್ಕಾಂದಗುಪ್ತ ಅವರನ್ನು ಹೊಡೆದು ಓಡಿಸಿದ್ದ.

ಈಗ ಹೂಣರ ನಾಯಕ ತೋರೋಮನ್ ಹಿಂದೂಸ್ಥಾನಕ್ಕೆ ಬಂದು ಪಂಜಾಬ, ಕಾಶ್ಮೀರಗಳ ದೊರೆಯಾಗಿಬಿಟ್ಟಿದ್ದ. ಅವನು ಕಡುಕ್ರೂರಿ. ಅವನ ಮಗ ಮಿಹಿರಗುಲ ಅವನನ್ನೂ ಕ್ರೂರತನದಲ್ಲಿ ಮೀರಿಸಿದ್ದ.

ಹಿಂದೂಸ್ಥಾನದ ಜನ ಗುಪ್ತವಂಶದ ರಾಜಕುಮಾರ ಬಾಲಾದಿತ್ಯನ ಕೈಕೆಳಗೆ ಹೂಣರ ವಿರುದ್ಧ ಯುದ್ಧ ಹೂಡಿದರು. ಮಿಹಿರಗುಲನಿಗೆ ಸೋಲಾಯಿತು. ಅವನನ್ನು ಸೆರೆ ಹಿಡಿದರು. ಬಾಲಾದಿತ್ಯ ಅವನನ್ನು ಕ್ಷಮಿಸಲು, ಹೂಣರು ಹಿಂದೂಸ್ಥಾನದಲ್ಲಿ ನೆಲಸಿದರು. ಅನೇಕ ರಜಪೂತ ಕುಲಗಳು ಅವರ ಪರಂಪರೆಗೆ ಸೇರಿದವುಗಳಾಗಿವೆ.

ಬಾಲಾದಿತ್ಯ ಹಿಂದುವಾಗಿದ್ದರೂ ಅವನ ಗುರು ಬೌದ್ಧ. ಅವನ ಸಾಮ್ರಾಜ್ಯ ಬಹಳ ದುರ್ಬಲವಾಗಿದ್ದುದರಿಂದ ಅಲ್ಲಿ ಇಲ್ಲಿ ಸಣ್ಣಪುಟ್ಟ ರಾಜ್ಯಗಳು ತಲೆಯೆತ್ತಲು ಅವಕಾಶವಾಯಿತು.

# ಹರ್ಷ (ಕ್ರಿ. ಶ. ೬೦೬ - ೬೪೭)

ಇಂತಹ ಒಂದು ರಾಜ್ಯ ಕನೌಜಿನಲ್ಲಿ ವರ್ಧಿಸಿತು. ಅದರ ಮೊದಲಿನ ಹೆಸರು ಕನ್ಯಾಕುಬ್ಜ—ಗೂನು ಬೆನ್ನಿನ ಹುಡುಗಿಯರ ಊರು ಎಂದರ್ಥ. ಈ ಬಗ್ಗೆ ಒಂದು ಕಥೆಯಿದೆ. ಯಾರೋ ಅಪಮಾನ ಮಾಡಿದುದಕ್ಕೆ ಒಬ್ಬ ಋಷಿಗೆ ಕೋಪಬಂತಂತೆ. ದೊರೆಯ ನೂರು ಜನ ಹೆಣ್ಣುಮಕ್ಕಳಿಗೆ ಗೂನು ಬೆನ್ನಾಗುವಂತೆ ಅವನು ಶಾಪವಿತ್ತನಂತೆ.

ಹೂಣರು ಕನೌಜಿನ ದೊರೆಯನ್ನು ಕೊಂದು ಅವನ ರಾಣಿ ರಾಜಶ್ರೀಯನ್ನು ಸೆರೆಹಿಡಿದರು. ರಾಜಶ್ರೀಯ ಸೋದರ ರಾಜವರ್ಧನ ಅವರನ್ನು ಎದುರಿಸಿ ಸೋಲಿಸಿದ. ಆದರೆ ಅವರು ಅವನನ್ನು ಗುಪ್ತವಾಗಿ ಕೊಲ್ಲಿಸಿಬಿಟ್ಟರು. ಅವನ ತಮ್ಮ ಹರ್ಷವರ್ಧನ ರಾಜಶ್ರೀಯನ್ನು ಹುಡುಕಿಕೊಂಡು ಹೋದ. ಹೂಣರ ಹಿಂಸೆ ತಾಳಲಾರದೆ ರಾಣಿ ಆತ್ಮಹತ್ಯೆಮಾಡಿಕೊಳ್ಳುವುದರಲ್ಲಿದ್ದಳು. ಹರ್ಷ ಅವಳ ಗುರುತು ಹಿಡಿದು ಅವಳ ಪ್ರಾಣವನ್ನು ರಕ್ಷಿಸಿದ.

ಉತ್ತರ ಹಿಂದೂಸ್ಥಾನವನ್ನು ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ಹರ್ಷ ಗೆದ್ದ. ದಕ್ಷಿಣದಲ್ಲಿ ವಿಂಧ್ಯಾಪರ್ವತದ ವರೆಗೆ ಅವನ ರಾಜ್ಯ ಪಸರಿಸಿತು.

ಹರ್ಷ ಸ್ವಯಂ ಕವಿಯಾಗಿದ್ದ. ಅವನು ಅನೇಕ ಕಾವ್ಯಗಳನ್ನೂ ನಾಟಕಗಳನ್ನೂ ಬರೆದಿದ್ದಾನೆ.

ಚೀಣಾದ ಬೌದ್ಧ ಪ್ರವಾಸಿ ಹ್ಯೂಯಾನ್ ತ್ಸಾಂಗ್ ಹಿಂದೂಸ್ಥಾನಕ್ಕೆ ಬಂದು ಕೆಲವುಕಾಲ ಇಲ್ಲಿ ಕಳೆದ. ದೇಶ ಸೌಂದರ್ಯ, ಲಾವಣ್ಯಗಳಿಂದ ತುಂಬಿತ್ತು ಎಂದು ಅವನು ಬರೆದಿಟ್ಟಿದ್ದಾನೆ. 'ಜನ ಸತ್ಯವಂತರು ಮತ್ತು ಆತ್ಮಾಭಿಮಾನಿಗಳು. ಕೊಟ್ಟಮಾತಿಗೆ ಅವರೆಂದಿಗೂ ತಪ್ಪುತ್ತಿರಲಿಲ್ಲ. ಕಡ್ಡಾಯದ ಕೂಲಿಗೆ ಅವರು ತುತ್ತಾಗಿರಲಿಲ್ಲ. ದುಡಿಮೆ ಹಗುರವಾಗಿತ್ತು. ಶಾಸ್ತ್ರಗಳನ್ನು (ವ್ಯಾಕರಣ, ಲಲಿತಕಲೆ, ಕುಶಲ ಕಲೆ, ವೈದ್ಯ, ದರ್ಶನ) ಜನ ಅಭ್ಯಾಸಮಾಡುತ್ತಿದ್ದರು.'

ಪ್ರಯಾಗದ ಕುಂಭಮೇಳವನ್ನು ಹ್ಯೂಯಾನ್ ತ್ಸಾಂಗ್ ವರ್ಣಿಸಿದ್ದಾನೆ. ಆ ಮೇಳ ಇಂದಿಗೂ ನಡೆದು ಬರುತ್ತಿದೆ. ಮಹಾಕವಿ ಭವಭೂತಿ ಬದುಕಿದ್ದುದು ಈ ಕಾಲದಲ್ಲಿಯೇ.

## ದಕ್ಷಿಣ ಸಾಮ್ರಾಜ್ಯಗಳು (ಕ್ರಿ. ಶ. ೫೦೦-೧೩೦೦)

ದಕ್ಷಿಣದಲ್ಲಿ ಅನೇಕ ಶತಮಾನಗಳು ಹೊಸ ಹೊಸ ಸಾಮ್ರಾಜ್ಯಗಳು ವರ್ಧಿಸಿದವು.

ವಿಂಧ್ಯಾಪರ್ವತದ ಉತ್ತರಕ್ಕೆ ಹರ್ಷ ಆಳುತ್ತಿದ್ದಾಗ ದಕ್ಷಿಣದಲ್ಲಿ ಚಾಲುಕ್ಯ ಸಾಮ್ರಾಜ್ಯವಿತ್ತು. ಆ ಸಾಮ್ರಾಜ್ಯದ ಸಂಸ್ಥಾಪಕ ಪುಲಕೇಶಿ ಶ್ರೀ ರಾಮಚಂದ್ರನ ಸೂರ್ಯವಂಶದವನಂತೆ. ಚಾಲುಕ್ಯರು ತುಂಬ ಪ್ರಬಲರಾದರು.

ಅವರಾನಂತರ ದಕ್ಷಿಣದಲ್ಲಿ ಪಲ್ಲವರು ಅರಸರಾದರು. ಈಗ ಕಂಜೀವರವಾಗಿರುವ ಕಾಂಚಿಪುರವೇ

ಅವರ ರಾಜಧಾನಿ. ಪಲ್ಲವರು ಮಹಾ ಸಾಹಸಿಗರು. ಹಡಗುಗಳನ್ನು ಕಟ್ಟಿ ಅವರು ಸಮುದ್ರದಾಚೆ ಹೋಗುತ್ತಿದ್ದರು. ಅವರ ಸೈನ್ಯಗಳು ಮಲೇಷಿಯಾ—ಈಗಿನ ಮಲಯಾ, ಜಾವಾ, ಬಾಲಿ, ಸಯ್ಯಾಂ ಪ್ರದೇಶಗಳವರೆಗೆ ಹರಡಿಕೊಂಡವು.

ಪಾಂಡ್ಯದೊರೆಗಳಿಗೆ ಸೇರಿದ್ದ ಇನ್ನೊಂದು ಸಾಮ್ರಾಜ್ಯ ದಕ್ಷಿಣದಲ್ಲಿತ್ತು. ಅವರ ಆಳ್ವಿಕೆಯಲ್ಲಿ ಮಧುರಾ ನಗರ ಸಂಸ್ಕೃತಿಯ ಕೇಂದ್ರವಾಯಿತು. ಅಲ್ಲಿ ತಮಿಳುಕಾವ್ಯ ಚೆನ್ನಾಗಿ ವರ್ಧಿಸಿತು.


ಇವರೆಲ್ಲರಿಗಿಂತ ಪ್ರಸಿದ್ಧರಾದವರು ಚೋಳರು. ಅವರ ಸಾಮ್ರಾಜ್ಯ ಬಂಗಾಳ ಕೊಲ್ಲಿಯಿಂದ ಅರೇಬಿಯಾ ಸಮುದ್ರದವರೆಗೆ ಹಬ್ಬಿತು. ಚೋಳರೂ ಸಮುದ್ರಯಾನದಲ್ಲಿ ಆಸಕ್ತರು.

ಚೋಳರು ಬಹಳ ವರ್ಷಕಾಲ ಅಧಿಕಾರವನ್ನು ಉಳಿಸಿಕೊಂಡರು. ಮುಸ್ಲಿಮ ಧಾಳಿಗಳು ಅವರ ಮೇಲೆ ಪ್ರಭಾವ ಬೀರಲಿಲ್ಲ. ಗುಪ್ತರ ಕಾಲದಿಂದೀಚೆಗೆ ಅವರು ಕಟ್ಟಿದ ಸಾಮ್ರಾಜ್ಯವೇ ಅತ್ಯಂತ ಮಹತ್ತ್ವವಾದ ಹಿಂದೂ ಸಾಮ್ರಾಜ್ಯ.

ಚೋಳದೊರೆಗಳು ಕಟ್ಟಿದ ದೇವಾಲಯಗಳಲ್ಲಿ ಸೊಗಸಾದ ಕಲೆ ರೂಪಗೊಂಡಿತು.

ದಕ್ಷಿಣದ ದೊರೆಗಳ ಆಳ್ವಿಕೆಯಲ್ಲಿ ಬೌದ್ಧ, ಜೈನ ಧರ್ಮಗಳು ಕ್ರಮಕ್ರಮೇಣ ಹಿಂದೂ ಧರ್ಮದ ಒಳಗೇ ಅಡಕವಾಗುತ್ತ ಬಂದವು. ಇವರ ಕಾಲದಲ್ಲಿ ಅನೇಕ ಪ್ರಸಿದ್ಧ ಹಿಂದೂ ದೇವಾಲಯಗಳು ಕಟ್ಟಲ್ಪಟ್ಟವು. ಅವುಗಳಲ್ಲಿ ಖ್ಯಾತಿಪಡೆದಿರುವ ಹೈದರಾಬಾದು ಸಂಸ್ಥಾನದ ಎಲ್ಲೋರಾದಲ್ಲಿರುವ ಕೈಲಾಸ ದೇವಾಲಯ ಅತ್ಯದ್ಭುತವಾಗಿದೆ. ಅದನ್ನು ಒಂದೇ ಬೆಟ್ಟದಲ್ಲಿ ಕಡೆದಿದ್ದಾರೆ. ಅದರಲ್ಲಿ ಶಿವ,

ಕಾಳಿ, ಕೃಷ್ಣರ ಅನೇಕ ಕೆತ್ತನೆಯ ವಿಗ್ರಹಗಳೂ ಅನೇಕ ದೇವಾದಿದೇವತೆಗಳ ವಿಗ್ರಹಗಳೂ ಇವೆ. ನೂರಾರು ಮಾನವಪ್ರಮಾಣ ಮೂರ್ತಿಗಳು ಅಲ್ಲಿರುವುದರಿಂದ, ನೋಡಲು ಹೋದವನಿಗೆ ನೂರಾರು ಜನ ಸ್ವಾಗತ ಬಯಸಲು ಸಿದ್ಧರಾಗಿರುವರೇನೋ ಎಂದು ಭಾಸವಾಗುತ್ತದೆ.



ವಿಜಾಪುರ ಜಿಲ್ಲೆಯಲ್ಲಿರುವ ಬಾದಾಮಿಯ ಗುಹಾಂತರ್ದೇವಾಲಯದಲ್ಲಿ ಶಿವನ ಮತ್ತು ದೇವಾದಿ ದೇವತೆಗಳ ಕಥೆಹೇಳುವ ಸಾಲು ಸಾಲು ಮೂರ್ತಿ ಗಳಿವೆ. ನರಸಿಂಹ, ವರಾಹ ಮೂರ್ತಿಗಳೂ, ಕುಣಿ ಯುವ ಕುಬ್ಜರ ಮೂರ್ತಿಗಳೂ ಚಿತ್ರಿತವಾಗಿವೆ.

ಚೋಳರ ದೊರೆ ರಾಜರಾಜ ಕಟ್ಟಿಸಿದ ತಂಜಾ ವೂರಿನ ಮಹೋನ್ನತ ದೇವಾಲಯವೂ, ಮಧುರೆ, ಕಂಜೀವರದ ದೇವಾಲಯಗಳೂ ಪ್ರಸಿದ್ಧವಾಗಿವೆ. ಅವುಗಳಿಗೆ ದೊಡ್ಡ ಪಡಸಾಲೆಗಳಿವೆ. ಅವುಗಳ ತುಂಬ ಸೊಗಸಾದ ಮೂರ್ತಿಗಳಿವೆ.

ಚೋಳರ ಕಂಚಿನ ವಿಗ್ರಹಗಳೂ, ಶಿಲಾಶಿಲ್ಪಗಳೂ ಜಗತ್ತಿನಲ್ಲಿಯೇ ಬಹು ಸುಂದರವಾದವು.

ಪರಂಪರಾಗತವಾಗಿ ಬಂದಿರುವ ಕಲ್ಲಿನ ಮತ್ತು ಬಣ್ಣದ ಈ ಸಂಪತ್ತುಗಳನ್ನು ಕಂಡು ನಾವು ಹೆಮ್ಮೆ ಪಡಬೇಕು. ಸರಿಯಾದ ಜ್ಞಾನದಿಂದಲೇ ಸರಿಯಾದ ಹೆಮ್ಮೆ ಬರುವುದು. ನಮ್ಮ ಪ್ರಾಚೀನಕಾಲದ ಈ ಅದ್ಭುತ ನಿಧಿಗಳನ್ನು ಹಿಂದೂಸ್ಥಾನದ ಮಕ್ಕಳು ಅವುಗಳಿರುವಲ್ಲಿಗೆ ಹೋಗಿ ನೋಡಬೇಕು.

ನಾವು ಈಗಾಗಲೇ ಕಂಡಿರುವಂತೆ ನಮ್ಮ ಪೂರ್ವಜರು ಲೋಕೋತ್ತರ ಗ್ರಂಥಗಳನ್ನು ಬರೆದಿಟ್ಟು ಹೋಗಿದ್ದಾರೆ.

ಈ ಗ್ರಂಥಗಳಲ್ಲಿ ಕೆಲವು ಕೇರಳನಾಡಿನ ಶ್ರೀ ಶಂಕರಾಚಾರ್ಯರಿಂದ ಬರೆಯಲ್ಪಟ್ಟವು.



ನಮ್ಮ ದೇಶದಲ್ಲಿ ಜನನ ತಾಳಿರುವ ಜ್ಞಾನಿಗಳಲ್ಲಿ ಶಂಕರಾಚಾರ್ಯರು ಅತ್ಯಂತ ಶ್ರೇಷ್ಠರು. ಅವರು ಮೂವತ್ತೈದನೆಯ ವರ್ಷದಲ್ಲಿ ತೀರಿಕೊಂಡರು. ಆ ವೇಳೆಗಾಗಲೇ ಅವರು ಓದಬೇಕಾದುದೆಲ್ಲವನ್ನೂ ಓದಿ, ಬೇಕಾದಷ್ಟು ಪ್ರವಾಸಮಾಡಿ, ಪಂಡಿತರೊಡನೆ ಚರ್ಚೆಮಾಡಿ ಅನೇಕ ಗ್ರಂಥಗಳನ್ನು ಬರೆದರು. ಅವುಗಳು ಇಂದಿಗೂ ಪಂಡಿತರಿಗೆ ಪ್ರಮಾಣ ಗ್ರಂಥಗಳಾಗಿವೆ. ಬೌದ್ಧಧರ್ಮಕ್ಕೆ ವಿರುದ್ಧವಾಗಿ ಹಿಂದೂಧರ್ಮವನ್ನು ಅವರು ಎತ್ತಿ ಹಿಡಿದರು. ಅವರ ಟೀಕೆಗಳಾನಂತರ ಬೌದ್ಧಧರ್ಮ

ಹಿಂದೂದೇಶದಿಂದ ಮಾಯವಾಯಿತು. ಶಿವನನ್ನೇ ಏಕದೇವನೆಂದು ಪೂಜಿಸಲು ಶಂಕರಾಚಾರ್ಯರು ಜನರಿಗೆ ಬೋಧಿಸಿದರು.

ದಕ್ಷಿಣದಲ್ಲಿ ಆಚರಣೆಯಲ್ಲಿರುವ ಹಿಂದೂಧರ್ಮದ ಸಂಕೇತವೇ ನಟರಾಜನಮೂರ್ತಿ.

ಸುಮಾರು ಸಾವಿರ ವರ್ಷಕಾಲ ದಕ್ಷಿಣ ಹಿಂದೂಸ್ಥಾನದ ಸಾಮ್ರಾಜ್ಯಗಳು ವರ್ಧಿಸಿದವು.

## ಪೈಗಂಬರ ಮಹಮ್ಮದ್ (ಕ್ರಿ. ಶ. ೫೭೦-೬೩೨)

ಹಿಂದೂಸ್ಥಾನದಲ್ಲಿ ಗುಪ್ತರ ಸಾಮ್ರಾಜ್ಯ ವರ್ಧಿಸುವ ಕಾಲಕ್ಕೆ ಯೂರೋಪಿನಲ್ಲಿ ಗ್ರೀಕ್ ಮತ್ತು ರೋಮನ್ ನಾಗರಿಕತೆಗಳ ಕಾಲ ಮುಗಿದಿತ್ತು. ಮೆಡಿಟರೇನಿಯನ್ ಸಮುದ್ರದ ಸುತ್ತಲೂ ಸಣ್ಣಪುಟ್ಟ ರಾಜ್ಯಗಳು ತಲೆಯೆತ್ತುತ್ತಿದ್ದವು. ಮೆಡಿಟರೇನಿಯನ್ ಸಮುದ್ರ ಮತ್ತು ಪರ್ಶಿಯಾ ದೇಶಗಳ ಮಧ್ಯೆಯಿರುವ ಅರೇಬಿಯಾ ಮರಳ್ಗಾಡುಗಳಲ್ಲಿ ಬಲಿಷ್ಠರೂ, ಆತ್ಮಾಭಿಮಾನಿಗಳೂ ಆದ ಒಂದು ಗೋವಳ ಜನಾಂಗ ವಾಸಿಸುತ್ತಿತ್ತು. ಒಳ್ಳೆಯ ಭೂಮಿ ಸಿಕ್ಕಿದೆಡೆ ನಿಂತು ಉತ್ತುಬಿತ್ತಿ ತಮ್ಮ ಆಹಾರವನ್ನು ಅವರು ಬೆಳೆದುಕೊಳ್ಳುತ್ತಿದ್ದರು. ಅವರು ಕಲ್ಲಿನಿಂದ ಮಾಡಿದ ದೇವತಾ ಮೂರ್ತಿಗಳನ್ನು ಪೂಜಿಸುತ್ತಿದ್ದರು.

ಈ ಕತ್ತಲೆಯಲ್ಲಿ ಒಂದು ಬೆಳಕು ಸುಳಿಯಿತು. ಮೆಕ್ಕಾದಲ್ಲಿ ಹಜರತ್ ಮಹಮ್ಮದನ ಜನನವಾಯಿತು. ಮಹಮ್ಮದ್ ಶಾಂತ ಸ್ವಭಾವದ ಹುಡುಗ. ಅವನನ್ನು ಕಂಡರೆ ಎಲ್ಲರಿಗೂ ಆದರ, ನಂಬಿಕೆ. ಜನ ಕಲ್ಲು ದೇವರನ್ನು ಪೂಜಿಸಬಾರದೆಂದೂ, ತಮ್ಮ ತಮ್ಮಲ್ಲಿ ಕಚ್ಚಾಡಬಾರದೆಂದೂ, ಅಣ್ಣತಮ್ಮಂದಿರ

ಹಾಗೆ ಬಾಳುವೆ ಸಾಗಿಸಬೇಕೆಂದೂ ಅವನು ಬೋಧಿಸಲಾರಂಭಿಸಿದೊಡನೆಯೇ ಜನ ಕುಪಿತರಾಗಿ ಅವನನ್ನು ಊರುಬಿಟ್ಟು ಓಡಿಸಿದರು. ಅವನು ಯೆಥ್ರಿಬ್ ನಗರಕ್ಕೆ ಹೊರಟುಹೋದ. ಮುಸ್ಲಿಮರು ಹೇಳುವಂತೆ ಇದೇ ಅವನ ಹಿಜಿರಾ. ಇದು ನಡೆದುದು ಕ್ರಿ. ಶ. ೬೨೨ ರಲ್ಲಿ. ಮುಸ್ಲಿಮ ಪಂಚಾಂಗ ಇಂದಿನಿಂದಲೇ ಆರಂಭವಾದುದು. ಯೆಥ್ರಿಬಿನ ಜನ ಮಹಮ್ಮದನಿಗೆ ಸ್ವಾಗತ ಬಯಸಿ ಅವನನ್ನು ಪೈಗಂಬರ್ ಎಂದು ಕರೆದರು. ಯೆಥ್ರಿಬಿನ ಹೆಸರು ಮದೀನಾ—ಅಥವಾ—ಪೂರ್ತಿ ಹೆಸರು ಹೇಳಬೇಕೆಂದರೆ ಮದಿನಾ-ತುಲ್-ನಬಿ-ಪೈಗಂಬರನ ನಗರವೆಂದು ಬದಲಾಯಿಸಿತು.

ಹಿಜಿರಾದಿಂದ ಏಳು ವರ್ಷಗಳೊಳಗಾಗಿ ಇಸ್ಲಾಮಿನ ಸೋದರಭಾವ, ಸೇವಾದೀಕ್ಷೆ ಇಡೀ ಅರೇಬಿಯಾವನ್ನೇ ವ್ಯಾಪಿಸಿತು. ಪೈಗಂಬರ್ ಮಹಮ್ಮದ್ ಮೆಕ್ಕಾ ಪಟ್ಟಣಕ್ಕೆ ಹಿಂದಿರುಗಿದ. ಜನ ಅವನನ್ನು ಧರ್ಮಾವತಾರನೆಂದೂ, ದೊರೆಯೆಂದೂ ಭಾವಿಸಿ ಸ್ವಾಗತಿಸಿದರು. ಮಹಮ್ಮದನ ಬೋಧೆಗಳೆಲ್ಲಾ ಖುರಾನಿನಲ್ಲಿ ಅಡಕವಾಗಿವೆ. ಅವನ ಮರಣಾನಂತರ ಖುರಾನ್ ಮುಸ್ಲಿಮರ ಪವಿತ್ರ ಗ್ರಂಥವಾಯಿತು. ಪೈಗಂಬರನಾನಂತರ ಅಬುಬೇಕರ್ ಆ ಸ್ಥಾನಕ್ಕೆ ಬಂದ. ಅವನಾನಂತರ ಜನರಿಂದ ಚುನಾಯಿಸಲ್ಪಡುತ್ತಿದ್ದವರು ಪೈಗಂಬರನ ಗಾದಿಗೆ ಬಂದರು. ಅವರನ್ನು ಖಲೀಫರೆಂದು ಕರೆಯುತ್ತಿದ್ದರು.

ಮಹಮ್ಮದ್ ಬೋಧಿಸಿದ ಒಬ್ಬನೇ ದೇವರಲ್ಲಿ ನಂಬಿಕೆ, ಸೋದರ ಭಾವನೆ, ಸರಳ ಜೀವನದಲ್ಲಿ ಆಸಕ್ತಿ ಅರೇಬಿಯಾ ಜನರನ್ನು ಸ್ಫೂರ್ತಿಗೊಳಿಸಿದವು. ಯುದ್ಧಪ್ರಿಯರೂ, ಬಲಿಷ್ಠರೂ ಆದವರು ತಮ್ಮ ನಂಬಿಕೆಗಳನ್ನು ಸುತ್ತಮುತ್ತಲಿನ ಸಿರಿಯಾ, ತುರ್ಕಿ, ಪರ್ಶಿಯಾ ದೇಶೀಯರ ಗಂಟಲಲ್ಲಿ ಬಲವಂತ

ವಾಗಿ ಹಿಡಿದರು. ಮಧ್ಯಪ್ರಾಚ್ಯವನ್ನು ಒಂದು ಸಾಮ್ರಾಜ್ಯದ ಕೆಳಗೆ ಒಗ್ಗೂಡಿಸಿದರು. ಸ್ಪೇನಿನಿಂದ ಚೀಣಾದವರೆಗೆ ಇಸ್ಲಾಮಿನ ಹೆಸರು ಹಬ್ಬಿತು.

ಮುಸ್ಲಿಮ ದೊರೆಗಳು ಬೇರೆ ಬೇರೆ ದೇಶಗಳನ್ನು ಜಯಿಸಿದ ಮೇಲೆ ಮಹಮ್ಮದ್ ಬೋಧಿಸಿದ್ದ ಸರಳಜೀವನ, ಪೂಜಾ ವಿಧಾನಗಳು ಗಾಳಿಪಾಲಾದವು. ಅವುಗಳ ಬದಲು ಸುಖಭೋಗಾಸಕ್ತಿ, ಅಧಿಕಾರಲಾಲಸೆಗಳು ಬಂದು ಕೂಡಿಕೊಂಡವು. ಪ್ರಸಿದ್ಧ ಖಲೀಫ ಹರೌನ್-ಅಲ್-ರಷೀದನ ತರುವಾಯ ಸಣ್ಣಪುಟ್ಟ ಸಾಹಸಿಗರು ರಾಜ್ಯಗಳನ್ನು ಕಟ್ಟತೊಡಗಿದರು. ಅವರಲ್ಲಿ ಸಬುಕ್ತಗೀನನೆಂಬ ತುರ್ಕಿದಾಸ ಘಜ್ನಿ, ಖಾಂದಹಾರಗಳ ಸುತ್ತ ಕ್ರಿ. ಶ. ೯೩೫ರಲ್ಲಿ ಒಂದು ರಾಜ್ಯವನ್ನು ಕಟ್ಟಿದ. ಸಬುಕ್ತಗೀನ ಒಂದೆರಡು ಸಲ ಹಿಂದೂಸ್ಥಾನದ ಮೇಲೆ ದಾಳಿನಡೆಸಿದ.

## ಘಜ್ನಿ ಮಹಮ್ಮದ್ (ಕ್ರಿ. ಶ. ೯೯೮-೧೦೩೦)

ಹಿಂದೂಸ್ಥಾನದ ಅಕ್ಕಪಕ್ಕದಲ್ಲಿದ್ದ ದೇಶಗಳ ವೀರ ಜನ ಹೊಸ ದೇಶಗಳನ್ನು ಗೆಲ್ಲಲು ಪ್ರಯತ್ನ ಪಡುತ್ತಿದ್ದಾಗ ಹಿಂದೂಸ್ಥಾನದ ಉತ್ತರ ದಕ್ಷಿಣಗಳ ದೊರೆಗಳು ವೈಭವಯುಕ್ತವಾದ ದರ್ಬಾರುಗಳನ್ನು ನಡೆಸುತ್ತಿದ್ದರು. ಮೇಲಿಂದ ಮೇಲೆ ಅವರಲ್ಲಿಯೇ ಜಗಳ ಕದನಗಳಾಗುತ್ತಿದ್ದವು. ಅಶೋಕನೂ, ಗುಪ್ತರೂ ಕಟ್ಟಿದ ಸಂಯುಕ್ತ ಹಿಂದೂಸ್ಥಾನ ಒಡೆದು ಚೂರು ಚೂರಾಗುತ್ತಿತ್ತು.



ಹೀಗೆ ವಿಭಕ್ತವಾದ ಹಿಂದೂಸ್ಥಾನಕ್ಕೆ ಅದರ ಸಂಪತ್ತಿನ ಮೇಲಣ ಆಸೆಯಿಂದ ಹೊರಗಿನಿಂದ ದಾಳಿಕಾರರು ತಂಡೋಪತಂಡವಾಗಿ ಬಂದರು.

ಘಜ್ನಿ ಮಹಮ್ಮದನೇ ಮೊದಲನೆಯ ಜಯಶಾಲಿ. ಇವನು ಸಬುಕ್ತಗೀನನಾನಂತರ ರಾಜ್ಯಕ್ಕೆ ಬಂದಿದ್ದ. ಮಹಮ್ಮದ್ ಬಹಳ ದಕ್ಷಣದ ದಳಪತಿ ಮತ್ತು ಕುದುರೆ ಸವಾರಗಾರ.

ಹದಿನೇಳು ಸಲ ಉತ್ತರ ಹಿಂದೂಸ್ಥಾನವನ್ನು ಮಹಮ್ಮದ್ ಸುಲಿದುಬಿಟ್ಟ. ಅವನ ಸೈನ್ಯಗಳು ಸಂಪದ್ಯುಕ್ತವಾದ ನಗರಗಳನ್ನೂ ದೇವಾಲಯಗಳನ್ನೂ ಸುಲಿದು ನಾಶಮಾಡಿದವು. ಸೋಮನಾಥದ ಪ್ರಸಿದ್ಧ ದೇವಾಲಯವೂ ಅವರ ಕೈಗೆ ಸಿಕ್ಕಿ ನಾಶವಾದವು. ತನ್ನ ಅಧಿಕಾರಲಾಲಸೆ, ಸುಲಿಗೆಯ ಬುದ್ಧಿಯನ್ನು ಧರ್ಮದ ತೆರೆಯ ಹಿಂದೆ ಮರೆಮಾಡಲು ಅವನು ಯತ್ನಿಸಿದ. ದೂರ ದೇಶಗಳಿಗೆ ಸೈನಿಕರನ್ನು ಕರೆದೊಯ್ಯಬೇಕಾದರೆ ಅವರಿಗೆ ಧರ್ಮದ ಹುಚ್ಚು ಹಿಡಿಸಿ, ಪರಧರ್ಮದ್ವೇಷವನ್ನು ಹುಟ್ಟಿಸಿದರೇ ಸಾಧ್ಯವೆಂಬುದು ಅವನಿಗೆ ಚೆನ್ನಾಗಿ ಮನದಟ್ಟಾಗಿತ್ತು.

ಘಜ್ನಿಯಲ್ಲಿನ ತನ್ನ ರಾಜಧಾನಿಯಿಂದ ಪಂಜಾಬಿನವರೆಗೆ ಮಹಮ್ಮದ್ ತನ್ನ ಆಳ್ವಿಕೆಯನ್ನು ವಿಸ್ತರಿಡ. ಇಲ್ಲಿ ಅವನ ವಂಶಜರು ನೂರು ವರ್ಷಕಾಲ ರಾಜ್ಯವಾಳಿದರು.

## ಪಠಾಣರು (ಕ್ರಿ. ಶ. ೧೨೦೦-೧೫೨೬)

ಹೊರಗಣ ಆಕ್ರಮಣಗಳ ಗಂಡಾಂತರವಿದ್ದರೂ ರಜಪೂತ ದೊರೆಗಳು ಒಂದುಗೂಡಲಿಲ್ಲ. ಬೇಕಾದಷ್ಟು ಧೈರ್ಯ ಪೌರುಷ ತೋರಿಸಿ ಅವರು ತಮ್ಮಷ್ಟಕ್ಕೇ ಕಾದುತ್ತಿದ್ದರು. ಹೊರಗಿನ ಧಾಳಿಕಾರರನ್ನೆದುರಿಸಿ ಮಹಾ ಪರಾಕ್ರಮದಿಂದ ಕಾದಿದ ಪೃಥ್ವಿರಾಜನ ಹೆಸರು ಜನಜನಿತವಾಗಿದೆ. ಅವನ ಮೇಲೆ ಜನ ನೂರಾರು ಹಾಡುಗಳನ್ನು ಕಟ್ಟಿದ್ದಾರೆ. ದೇಶವನ್ನು ರಕ್ಷಿಸುವುದಕ್ಕೆ ಅವನೂ ಕೂಡ ಉತ್ತರ ಹಿಂದೂಸ್ಥಾನದ ದೊರೆಗಳ ಸಹಾಯ ದೊರಕಿಸಲಾಗಲಿಲ್ಲ. ಅವನು ಕನೌಜಿನ ರಾಜಾ ಜಯಚಂದನ ಮಗಳನ್ನೆತ್ತಿಕೊಂಡು ಓಡಿಹೋಗಲು, ಇತರ ರಾಜರು ಅವನ ಮೇಲೆ ತಿರುಗಿಬಿದ್ದರು.

ಘಜ್ನಿಯಿಂದ ಷಹಾಬುದ್ದೀನ್ ಘೋರಿ ಸೈನ್ಯ ಸಮೇತನಾಗಿ ಬಂದು ದೇಶವನ್ನು ಗೆದ್ದ. ಘಜ್ನಿಯಲ್ಲಿ ಮಹಮ್ಮದನ ವಂಶದವರ ತರುವಾಯ ಅಧಿಕಾರಕ್ಕೆ ಘೋರಿ ಮನೆತನದವರು ಬಂದಿದ್ದರು. ಈ ಧಾಳಿಯೊಂದಿಗೆ ಪಠಾಣರ ಆಕ್ರಮಣಗಳ ಎರಡನೆಯ ತರಂಗ ಆರಂಭವಾಯಿತು.

ಘಜ್ನಿ ಮಹಮ್ಮದನ ಹಾಗೆ ಘೋರಿ ಕೊಳ್ಳೆ ಹೊಡೆಯಲು ಹಿಂದೂಸ್ಥಾನಕ್ಕೆ ಬರಲಿಲ್ಲ. ಇಲ್ಲಿಯೇ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದು ಅವನ ಆಸೆಯಾಗಿತ್ತು. ಅವನ ವಿಜಯಗಳಿಂದ ಪಠಾಣರ

ಆಳ್ವಿಕೆ ಉತ್ತರ ಹಿಂದೂಸ್ಥಾನದ ಬಹು ಕಡೆಗಳಲ್ಲಿ—ಬಂಗಾಳದಲ್ಲಿ, ದಕ್ಷಿಣದಲ್ಲಿ ಆರಂಭವಾಯಿತು. ದೆಹಲಿನಗರ ಅವನ ರಾಜಧಾನಿಯಾಯಿತು. ದೆಹಲಿಯಿಂದ ಪಠಾಣ ದೊರೆಗಳು ತಮ್ಮ ಪ್ರತಿನಿಧಿಗಳು ಸುಬೇದಾರರ ಮೂಲಕ ಬೇರೆ ಬೇರೆ ಪ್ರಾಂತ್ಯಗಳನ್ನಾಳುತ್ತಿದ್ದರು.

ಘೋರಿಯ ಮರಣಾನಂತರ ಅವನ ಸೈನ್ಯಾಧಿಪತಿ ಕುತುಬ್ ಉದ್ದೀನ್ ಸುಲ್ತಾನನಾದ. ಅವನು ಒಂದು ಕಾಲಕ್ಕೆ ದಾಸನಾಗಿದ್ದ. ಅವನಿಂದ ದಾಸವಂಶ ಆರಂಭವಾಯಿತು. ದೆಹಲಿಯಲ್ಲಿ ಎತ್ತರವಾದ ಒಂದು ಗೋಪುರವನ್ನು ಕುತುಬ್ ಉದ್ದೀನ್ ಕಟ್ಟಿಸಿದ. ಅದೇ ಕುತುಬ್ ಮಿನಾರ್. ಅವನ ತರುವಾಯ ಪಟ್ಟಕ್ಕೆ ಬಂದ ಅವನ ಸಭಾಸದರಲ್ಲಿ ಒಬ್ಬನಾಗಿದ್ದ ಅಲ್ತಮಷ್ ಗೋಪುರದ ಕೆಲಸವನ್ನು ಮುಗಿಸಿದ.

ಅನಂತರ ಅಲ್ತಮಷನ ಮಗನ ವಜೀರನಾಗಿದ್ದ ಬಲ್ಬನ್ ಪಟ್ಟಕ್ಕೆ ಬಂದ. ಅವನು ವಿವೇಕಶಾಲಿ. ಮುಸ್ಲಿಮ ನಾಯಕರನ್ನೂ, ಹಿಂದೂ ರಾಜರನ್ನೂ ಒಗ್ಗೂಡಿಸಲು ಅವನು ಪ್ರಯತ್ನಿಸಿದ. ರೈತರ ವಿಷಯದಲ್ಲಿ ದಯಾಪರನಾಗಿದ್ದ.

ಮಧ್ಯ ಏಷ್ಯಾದಿಂದ ಮೊಘಲರ ಪಡೆಗಳು ಹಿಂದೂಸ್ಥಾನಕ್ಕೆ ಬಂದು ದಾಳಿಮಾಡತೊಡಗಿದವು. ನಮ್ಮ ದೇಶದ ಅನೈಕಮತ್ಯದ ಪ್ರಯೋಜನವನ್ನು ಹೊರಗಿನವರು ಚೆನ್ನಾಗಿ ತೆಗೆದುಕೊಂಡಿದ್ದಾರೆ. ಬಲ್ಬನ್ನನ ಮಗ ರಾಜಕುಮಾರ ಮಹಮ್ಮದ್ ಮೊಘಲರೊಂದಿಗೆ ಕಾಯುತ್ತಾ ಸತ್ತುಹೋದ. ಈ ಸುದ್ದಿಕೇಳಿ ಎದೆಯೊಡೆದು ಬಲ್ಬನ್ನನೂ ತೀರಿಕೊಂಡ.

ಈ ಗೊಂದಲದಲ್ಲಿ ತನ್ನ ಪ್ರತಿಷ್ಠೆ ಬೆಳಸಿಕೊಂಡು ಮೇಲಕ್ಕೆ ಬಂದವನು ಜಲಾಲುದ್ದೀನ್ ಖಿಲ್ಜಿ. ಅವನು ಖಿಲ್ಜಿವಂಶವನ್ನು ಸ್ಥಾಪಿಸಿದ. ಜಲಾಲುದ್ದೀನ್ ಒಳ್ಳೆಯ ಮುದುಕ. ತನ್ನ ಮೇಲೆ ತಿರುಗಿ ಬಿದ್ದವರನ್ನು ಕೂಡ ಶಿಕ್ಷಿಸದೆ ಕ್ಷಮಿಸುತ್ತಿದ್ದ.

ಅವನ ಅಳಿಯ ಅಲ್ಲಾವುದ್ದೀನ್ ಖಿಲ್ಜಿ ಬಹಳ ಆಶಾಪರ ಮತ್ತು ಗಟ್ಟಿಗ. ಜಲಾಲುದ್ದೀನನನ್ನು ಕೊಲ್ಲಿಸಿ ತಾನೇ ಪಟ್ಟಕಟ್ಟಿಕೊಂಡ.

ಅಲ್ಲಾವುದ್ದೀನ್ ಕಠಿಣಹೃದಯಿ, ನಿಷ್ಕರುಣಿಯಾದರೂ ಒಳ್ಳೆಯ ಆಡಳಿತಗಾರನಾಗಿದ್ದ. ತನ್ನ ಅಧಿಕಾರಕ್ಕೆ ಪ್ರತಿಹೇಳುತ್ತಿದ್ದ ಹಿಂದೂ ಮುಸ್ಲಿಮರನ್ನು ಅವನು ತುಳಿದುಬಿಟ್ಟ.

ಅವನು ಚಿತ್ತೂರನ್ನು ಮುತ್ತಿದ ವೃತ್ತಾಂತ ದೊಡ್ಡ ಪುರಾಣವಾಗಿದೆ.

ಅಲ್ಲಾವುದ್ದೀನನ ಕಿವಿಗೂ ಚಿತ್ತೂರಿನ ರಾಣಿ ಪದ್ಮಿನಿಯ ಅಪೂರ್ವ ಸೌಂದರ್ಯದ ಖ್ಯಾತಿ ಬಿದ್ದಿತು. ಆಕೆಯನ್ನು ನೋಡುವುದಷ್ಟೇ ತನ್ನ ಉದ್ದೇಶವೆಂದು ಹೇಳಿಕೊಂಡು ಅವನು ಚಿತ್ತೂರಿಗೆ ಬಂದ. ಅದಕ್ಕೆ ರಜಪೂತರು ಒಪ್ಪಿಕೊಂಡರು. ಆದರೆ ಅಲ್ಲಾವುದ್ದೀನ್ ಕೋಣೆಗೆ ಬಂದಾಗ ಪದ್ಮಿನಿ ಇರಲಿಲ್ಲ. ಆಕೆಯ ಪ್ರತಿಬಿಂಬವನ್ನು ತೋರಿಸುತ್ತಿದ್ದ ಕನ್ನಡಿಯ ಕಡೆಗೆ ಅವನ ಲಕ್ಷ್ಯವನ್ನು ಸೆಳೆದರು. ಅಲ್ಲಿ ಸೇರಿದ್ದವರೆಲ್ಲಾ ಗಹಗಹಿಸಿ ನಕ್ಕರು. ಅಲ್ಲಾವುದ್ದೀನನಿಗೆ ಅವಮಾನವಾಯಿತು. ಕೋಪದಿಂದ ತಪ್ತನಾದ. ಆಗ ಸುಮ್ಮನೆ ಹೊರಟು ಹೋದವನು ಸ್ವಲ್ಪಕಾಲದಲ್ಲಿಯೇ ದೊಡ್ಡ ಸೈನ್ಯದೊಂದಿಗೆ ಹಿಂದಿರುಗಿ ಚಿತ್ತೂರನ್ನು ಮುತ್ತಿದ. ಕೋಟೆಯೊಳಗಿದ್ದ ರಜಪೂತರಿಗೆ ಆಹಾರಸಾಮಗ್ರಿ ಸಾಲದಾಯಿತು. ಅವರ

ಸೈನ್ಯ ಚಿಕ್ಕದಾಗಿದ್ದರೂ ಕೋಟೆಯ ಹೊರಗೆ ಬಂದು ಯುದ್ಧ ಮಾಡುವುದೆಂದು ಅವರು ನಿಶ್ಚಯಿಸಿದರು.



ವೀರರಂತೆ ಕಾದಿದರು. ಅವರ ಸೈನ್ಯಕ್ಕೆ ಸೋಲಾಯಿತು. ಒಬ್ಬ ರಜಪೂತನೂ ಜೀವಂತ ಉಳಿಯಲಿಲ್ಲ. ಪದ್ಮಿನಿಯನ್ನು ವಶಪಡಿಸಿಕೊಳ್ಳಲು ಅಲ್ಲಾವುದ್ದೀನ್ ಕೋಟೆ ಪ್ರವೇಶಿಸಿದ. ಅವನಿಗೆ ಪದ್ಮಿನಿ ಬದಲು ಒಂದುಹಿಡಿಬೂದಿಸಿಕ್ಕಿತು. ಪದ್ಮಿನಿ ಮತ್ತು ಇತರ ಸ್ತ್ರೀಯರು ಸತಿಯನ್ನಾಚರಿಸಿ ತಮ್ಮ ದೇಹವನ್ನು ವಿಸರ್ಜಿಸಿದ್ದರು.

ಅಲ್ಲಾವುದ್ದೀನ್ ಒಬ್ಬ ಹಿಂದೂ ಸ್ತ್ರೀಯನ್ನು ಮದುವೆಯಾದ. ಅವನಂತೆ ಅವನ ಮಗನೂ ಒಬ್ಬ ಹಿಂದೂ ಸ್ತ್ರೀಯನ್ನೇ ಮದುವೆಯಾದ.

ಅಲ್ಲಾವುದ್ದೀನ್ ಹಿಂದೂಸ್ಥಾನವನ್ನು ಒಗ್ಗೂಡಿಸಿ ದೇಶದಲ್ಲಿ ಶಿಸ್ತು ಮೂಡುವಂತೆ ಮಾಡಿದ. ಕವಿಗಳಿಗೂ ಕಲಾವಿದರಿಗೂ ಅವನು ಪ್ರೋತ್ಸಾಹ ಕೊಡುತ್ತಿದ್ದ.

ಪಠಾಣ, ದಾಸ, ಖಿಲ್ಜಿ ದೊರೆಗಳ ಆಳ್ವಿಕೆಯಲ್ಲಿ ಧಾಳಿ ಬಂದವರು ಹಿಂದೂಸ್ಥಾನವನ್ನು ತಮ್ಮ ಮನೆಯೆಂದು ಭಾವಿಸತೊಡಗಿದರು. ಜಾತ್ಯಾತೀತವಾದ ಇಸ್ಲಾಮ್ ಧರ್ಮಕ್ಕೆ ಕೆಲವು ಕೆಳಗಣ ಜಾತಿಯ ಹಿಂದುಗಳು ಮತಾಂತರ ಹೊಂದಿದರು. ಮುಸ್ಲಿಮರಲ್ಲಿ ಅನೇಕ ಹಿಂದೂ ನಂಬಿಕೆಗಳೂ, ಪದ್ಧತಿಗಳೂ ಆಚರಣೆಗೆ ಬಂದವು.

ಅಲ್ಲಾವುದ್ದೀನನ ಮರಣಾನಂತರ ಹುಟ್ಟಿದ ಗೊಂದಲದಲ್ಲಿ ಮುಲ್ತಾನಿನ ಮಾಂಡಲಿಕನಾಗಿದ್ದ ಘ್ಯಾಸುದ್ದೀನ್ ತುಘಲಕ್ ದೆಹಲಿಯ ಸಿಂಹಾಸನವನ್ನು ಕೈವಶಪಡಿಸಿಕೊಂಡ. ಸುಲ್ತಾನನಾದಾಗ ಅವನಿಗೆ ಮುಪ್ಪಡಸಿತ್ತು. ಅಲ್ಲಾವುದ್ದೀನನ ಮೇಲ್ಪಂಕ್ತಿಯನ್ನನುಸರಿಸಿ ಒಳ್ಳೆಯ ಸುಧಾರಣೆಗಳನ್ನು ಮಾಡಲು ಅವನು ಯತ್ನಿಸಿದ. ಹೆಚ್ಚು ಭೂಮಿ ಬೇಸಾಯಕ್ಕೊಳಗಾಗುವಂತೆ ನಾಲೆಗಳನ್ನು ತೋಡಿಸಿದ. ಭೂಗಂದಾಯವನ್ನು ಕಡಿಮೆ ಮಾಡಿದ. ಸ್ಥಳದಿಂದ ಸ್ಥಳಕ್ಕೆ ಕುದುರೆ ಸವಾರರು ಕಾಗದಗಳನ್ನೊಯ್ಯುವ ಟಪಾಲು ಪದ್ಧತಿಯನ್ನು ನಿಯೋಜಿಸಿದ.

ಅವನಾನಂತರ ಅವನ ಮಗ ಮುಹಮದ್ ಬಿನ್ ತುಘಲಕ್ ಸಿಂಹಾಸನವನ್ನೇರಿದ. ಅವನು ಕಲೆ, ವಿಜ್ಞಾನಗಳ ಬಗ್ಗೆ ಪರಿಣಿತನಾದ ಪಂಡಿತನಾಗಿದ್ದ. ಆದರೆ ಅವನಿದ್ದುದು ಕಠಿಣಕಾಲದಲ್ಲಿ. ದೆಹಲಿಯಿಂದ ದೇವಗಿರಿಗೆ ತನ್ನ ರಾಜಧಾನಿಯನ್ನು ಬದಲಾಯಿಸಿದ. ಪರಿಣಾಮವಾಗಿ ದೆಹಲಿಯಲ್ಲಿ ಅಶಾಂತಿ ಹುಟ್ಟಿತು. ಅವನ ಕಾಲದಲ್ಲಿ ಹಿಂದೂಸ್ಥಾನಕ್ಕೆ ಪ್ರವಾಸಿಯಾಗಿ ಬಂದ ಮೂರರ ಇಬನ್ ಬಟೂಟಾ ಬರೆಯುತ್ತಾನೆ: 'ಎಲ್ಲವೂ ನಾಶಕ್ಕೊಳಗಾಯಿತು. ಒಂದು ನಾಯಿ, ಬೆಕ್ಕು ಕೂಡ ಉಳಿಯ

ದಂತೆ ಎಲ್ಲವನ್ನೂ ನಾಶಪಡಿಸಲಾಯಿತು'. ಅವನ ಕಾಲದ ಇತರ ಸುಲ್ತಾನರಂತೆ ತುಘಲಕ್‌ನಿಗೂ ಜಗತ್ತನ್ನು ಜಯಿಸುವ ಆಸೆಯಿತ್ತು.

ಈ ಕಾಲದಲ್ಲಿಯೇ ಹಿಂದೀ, ಉರ್ದು ಕಾವ್ಯದ ಆಚಾರ್ಯ ಅಮೀರ್ ಖುಸ್ರೋ ಬದುಕಿದ್ದ.

ಇದೇ ಕಾಲದಲ್ಲಿ ಮೊಂಗೋಲದ ಕ್ರೂರ ಚಂಗೇಸ್‌ಖಾನ್ ಏಷ್ಯಾಖಂಡವನ್ನೆಲ್ಲಾ ಸುತ್ತುತ್ತಿದ್ದ. ಜಗತ್ತನ್ನು ಜಯಿಸುವ ಭರದಲ್ಲಿ ಅವನು ಹಿಂದೂಸ್ಥಾನದ ಬಾಗಿಲುವರೆಗೂ ಬಂದ. ಅದೃಷ್ಟವಶಾತ್ ಅವನು ಪಶ್ಚಿಮದ ಕಡೆ ತಿರುಗಿದ, ಹಿಂದೂಸ್ಥಾನ ಬದುಕಿತು.

ಆದರೆ ಹಿಂದೂಸ್ಥಾನದ ಪರಿಸ್ಥಿತಿ ಸುಧಾರಿಸಲಿಲ್ಲ. ತರುವಾಯ ಬಂದ ಫಿರೋಜ್ ತುಘಲಕ್ ಶಿಸ್ತನ್ನು ತರಲೆತ್ನಿಸಿದರೂ ಸಾರ್ಥಕವಾಗಲಿಲ್ಲ. ಅವನ ಕಟುಧರ್ಮ, ಹಿಂದೂದ್ವೇಷ ಅವನ ಉದ್ದೇಶಕ್ಕೆ ಭಂಗ ತಂದವು. ಸುಲ್ತಾನನ ಸುಬೇದಾರರೂ, ದಳಪತಿಗಳೂ ದೆಹಲಿಯ ರಾಜವಂಶದ ಮೇಲೆ ವಿಷಕಾರುತ್ತಿದ್ದರು. ದೇಶ ಗೊಂದಲಕ್ಕೆ ಸಿಕ್ಕಿಕೊಂಡಿತು. ಹಿಂದೂಸ್ಥಾನದ ಹೊರಗೂ ಈ ಸುದ್ದಿ ಹಬ್ಬಿತು.

ಟಾರ್ಟರ ತೈಮೂರಲಂಗ ಅಥವಾ ತೈಮೂರಲೇನ್ ಹಿಂದೂಸ್ಥಾನದ ವಾಯುವ್ಯ ಗಡಿಯನ್ನು ಹರಿದುಕೊಂಡು ಸಮಭೂಮಿಗೆ ನುಗ್ಗಿದ. ಅವನು ಪರ್ಶಿಯಾ, ಅರೇಬಿಯಾ, ಕಾಕಸಸ್, ಸಾಮರ್ಖಂಡ ಗಳಲ್ಲಿ ಆಚರಿಸಿದ್ದಂತೆ ಇಲ್ಲಿಯೂ ಕೊಳ್ಳೆ, ನಾಶದಲ್ಲಿ ಮಗ್ನನಾದ.

ತೈಮೂರ್ ಬಂದ, ಹೋದ. ನಮ್ಮ ದೇಶ ಇದ್ದಹಾಗೇ ಇತ್ತು. ಚದುರಿಹೋಗಿದ್ದ ರೈತರು

ಮತ್ತೆ ಒಂದುಗೂಡಿದರು. ಮುಂದಿನ ನೂರು ವರ್ಷ ರಾಜ್ಯವಾಳಿದ ಸೈಯದ್, ಲೋಡಿ ದೊರೆಗಳನ್ನು ರಜಪೂತರು ಉರುಳಿಸಿದರು.

ಹಿಂದೂಸ್ಥಾನ ಅನೇಕ ಹಿಂದೂ, ಮುಸ್ಲಿಮ ರಾಜ್ಯಗಳಾಗಿ ಒಡೆದು ಹೋಗಿತ್ತು. ಅವುಗಳಲ್ಲಿ ವಿಜಯನಗರ ಸಾಮ್ರಾಜ್ಯ ಬಹಳ ಬಲಿಷ್ಠವಾಗಿತ್ತು.

ದೊರೆಗಳು ಬರುತ್ತಾರೆ, ದೊರೆಗಳು ಹೋಗುತ್ತಾರೆ. ರೈತರು ಯಥಾಪ್ರಕಾರ ತಮ್ಮ ಹಳೆಯ ಮಾರ್ಗದಲ್ಲಿಯೇ ಹೋಗುತ್ತಿರುತ್ತಾರೆ. ಪಂಚಾಯಿತರು ಮತ್ತೆ ಅಧಿಕಾರ ವಹಿಸಿದರು, ಕಾಳು ಕಡ್ಡಿ ಬೆಳೆಯುವುದಕ್ಕೆ ಆರಂಭವಾಯಿತು. ಹಿಂದೂ ಮುಸ್ಲಿಮರು ಒಟ್ಟಿಗೆ ಸುಖವಾಗಿ ಬಾಳುತ್ತಿದ್ದರು. ಹಿಂದೂ ಪೂಜಾವಿಧಾನಗಳು ಇಸ್ಲಾಮಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದವು. ದೊಡ್ಡ ದೊಡ್ಡ ಆಚಾರ್ಯರು, ಋಷಿಗಳು ಅವತರಿಸಿ ಉತ್ತಮ ಜೀವನ ಮಾರ್ಗವನ್ನು ಬೋಧಿಸಿದರು.

## ಹಿಂದೂ ಧರ್ಮ

ಹಿಂದೂ ಧರ್ಮದ ಮೂರು ರೂಪಗಳು ಪ್ರಚಾರದಲ್ಲಿದ್ದವು.

ಮೊದಲನೆಯದರಲ್ಲಿ ಪರಮಾತ್ಮನನ್ನು ವಿಷ್ಣುವೆಂದು ಕರೆಯುತ್ತಿದ್ದರು. ಇದಕ್ಕೆ ವೈಷ್ಣವ ಧರ್ಮ ಎಂಬ ಹೆಸರು ಬಂದಿತು. ವೇದದ ಸೂರ್ಯದೇವನಿಗೆ ವಿಷ್ಣು ಎಂಬ ಇನ್ನೊಂದು ಹೆಸರು. ಕೆಲವು

ಸಲ ಅವನನ್ನು ರಾಮನೆಂದೂ, ಕೆಲವು ಸಲ ಅವನನ್ನು ಕೃಷ್ಣನೆಂದೂ ಕರೆಯುತ್ತಿದ್ದರು. ವಿಷ್ಣುಭಕ್ತಿಯಿಂದ ಮಾನವರು ದೇವರನ್ನು ಮುಟ್ಟಬಹುದೆಂದು ವೈಷ್ಣವಧರ್ಮ ಬೋಧಿಸಿತು.

ಎರಡನೆಯದರಲ್ಲಿ ಶಿವನನ್ನು ಪರಮಾತ್ಮನ ಮುಖ್ಯ ಅವತಾರವೆಂದು ಪರಿಗಣಿಸಲಾಯಿತು. ವೈಷ್ಣವರು ವಿಷ್ಣುವನ್ನು ಪೂಜಿಸುತ್ತಿದ್ದ ಭಕ್ತಿಯ ಪ್ರಮಾಣದಿಂದಲೇ ಶೈವರು ಶಿವನನ್ನು ಪೂಜಿಸುತ್ತಿದ್ದರು. ನಾವು ಈಗಾಗಲೇ ಕಂಡಿರುವಂತೆ ಶೈವಧರ್ಮ ದಕ್ಷಿಣಭಾರತದಲ್ಲಿ ಬೆಳೆಯಲು ಶ್ರೀ ಶಂಕರಾಚಾರ್ಯರು ನೆರವಾದರು. ಆ ಧರ್ಮ ಇಂದಿಗೂ ಉಳಿದಿದೆ.

ಮೂರನೆಯದರಲ್ಲಿ ಜಗಜ್ಜನನಿ ಅಥವಾ ಕಾಳಿಯನ್ನು ಪರಮಾತ್ಮನ ಅವತಾರವೆಂದು ನಿರ್ದೇಶಿಸಲಾಯಿತು. ಶಕ್ತರು ಕಾಳಿಯನ್ನು ಭಕ್ತಿಯಿಂದ ಪೂಜಿಸತೊಡಗಿದರು. ಬಂಗಾಳದ ಕವಿಸಂತರು ಕಾಳಿಪೂಜೆಯನ್ನು ಪೂರ್ವಬಂಗಾಳದಲ್ಲಿ ಬೆಳಸಿದರು.

ರಾಮಾನುಜ, ರಮಾನಂದ, ತುಲಸಿದಾಸ, ವಲ್ಲಭಾಚಾರ್ಯ, ಮೀರಾಬಾಯಿ, ತುಕಾರಾಮ ಮತ್ತು ಚೈತನ್ಯದೇವ ವೈಷ್ಣವಧರ್ಮವನ್ನು ಪ್ರಸಾರ ಮಾಡಿದರು. ಅವರು ರಾಮ, ಕೃಷ್ಣರ ಮೇಲೆ ಹಾಡು ಕಟ್ಟಿ ದೇವರನ್ನು ಹೃತ್ಪೂರ್ವಕವಾಗಿ ಪ್ರೀತಿಸಬೇಕೆಂದೂ, ಭಕ್ತಿಯನ್ನು ಆಚರಿಸಬೇಕೆಂದೂ ಬೋಧಿಸಿದರು. ಇವರಲ್ಲಿ ಕೆಲವರು ಜಾತಿಪದ್ಧತಿಯನ್ನೊಪ್ಪುತ್ತಿರಲಿಲ್ಲ. ಅವರಲ್ಲಿ ಮುಖ್ಯನಾದವನು ನೇಕಾರ ಕವಿಯಾಗಿದ್ದ ರಮಾನಂದರ ಶಿಷ್ಯ ಕಬೀರ್. ಬಟ್ಟೆ ನೇಯುತ್ತಿದ್ದಂತೆ ಅವನು ಹಾಡು ಕಟ್ಟುತ್ತಿದ್ದ. ಹಿಂದೂ ಮುಸ್ಲಿಮರಿಬ್ಬರೂ ಅವನನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದರು. ಕಬೀರ್ ಸತ್ತಾಗ,

ಅವನ ದೇಹವನ್ನು ಸುಡಬೇಕೆಂದು ಹಿಂದುಗಳೂ, ಹೂಳಬೇಕೆಂದು ಮುಸಲ್ಮಾನರೂ ಮುಂದೆ ಬಂದರು. ಅವರು ಮೇಲುಹೊದಿಕೆಯನ್ನು ತೆಗೆದು ನೋಡಿದಾಗ ದೇಹದ ಬದಲು ಹೂಗಳಿದ್ದುವಂತೆ. ಹಿಂದುಗಳು ಅರ್ಧ, ಮುಸಲ್ಮಾನರು ಅರ್ಧ ತೆಗೆದುಕೊಂಡು ಹೋಗಿ ತಮ್ಮ ಜಾತಿವಿಧಿಯ ಪ್ರಕಾರ ಸಂಸ್ಕಾರ ಮಾಡಿದರಂತೆ.

ಈ ಧರ್ಮಗಳ ನೆಲೆಯಲ್ಲಿಯೇ ನಮ್ಮ ದೇಶದ ತರುವಾಯದ ಕಾವ್ಯ, ಚಿತ್ರಕಲೆ ಬೆಳೆದವು. ಇಂದಿಗೂ ಪ್ರತಿ ಹಳ್ಳಿಯಲ್ಲಿಯೂ ವೈಷ್ಣವರು, ಶೈವರು, ಶಕ್ತರು ಇದ್ದಾರೆ.

ನಾನಕ್ ಹಿಂದೂ ಮುಸಲ್ಮಾನರನ್ನು ಒಗ್ಗೂಡಿಸಬೇಕೆಂದು ಪ್ರಯತ್ನಿಸಿದ. ಆತ ಹಿಂದುಗಳ ದೇವಾಲಯಗಳಿಗೂ ಹೋಗುತ್ತಿದ್ದ; ಮುಸ್ಲಿಮರ ಮಸೀದಿಗಳಿಗೂ ಹೋಗುತ್ತಿದ್ದ. ರೈತರು ಅವನ ಉಪದೇಶವನ್ನು ಆಸಕ್ತಿಯಿಂದ ಕೇಳುತ್ತಿದ್ದರು. ಹಿಂದೂ ಮುಸಲ್ಮಾನರು ಒಂದಾಗದಿದ್ದರೂ ಸಿಖ್ ಧರ್ಮವೆಂಬ ಹೊಸ ಧರ್ಮ ಮಾತ್ರ ಜನ್ಮ ತಾಳಿತು. ಈ ಧರ್ಮ ಮಹಮ್ಮದ್ ಪೈಗಂಬರನ ಬೋಧೆಯನ್ನೂ ಹಿಂದುಗಳ ಭಕ್ತಿ ಪಂಥವನ್ನೂ ಬೆರಸಿತು. ಶಾಂತ ಧ್ಯಾನಕ್ಕೆ ಈ ಧರ್ಮ ಪ್ರೋತ್ಸಾಹ ಕೊಟ್ಟಿತು.

## ಬಾಬರ್ (ಕ್ರಿ. ಶ. ೧೫೨೬-೧೫೩೦)

ಉತ್ತರಕಡೆಯಿಂದ ಮತ್ತೊಬ್ಬ ವಿಜೇತ ಬಂದ. ಅವನೇ ತೈಮೂರಲಂಗನ ವಂಶಜನಾದ ಬಾಬರ್. ನಾಲ್ಕುನೂರು ಇಪ್ಪತ್ತೈದು ವರ್ಷಗಳ ಕೆಳಗೆ ಅವನು ದೆಹಲಿಯನ್ನು ಕೈವಶ ಮಾಡಿಕೊಂಡ.

ಅಂದಿನಿಂದ ಮೊಂಗೋಲರು ಹಿಂದೂಸ್ಥಾನವಲ್ಲಿ ಮುಘಲರಾದರು.

ತಲೆಯೆತ್ತುತ್ತಿದ್ದ ರಜಪೂತ ರಾಜ್ಯಗಳನ್ನು ಮಾರನೆಯ ವರ್ಷವೇ ಬಾಬರ್ ಮುರಿದು ತನ್ನ ಮುಘಲ ಸಾಮ್ರಾಜ್ಯವನ್ನು ಸ್ಥಾಪಿಸಿದ.

ಬಾಬರ್ ಮಹಾ ಬಲಿಷ್ಠನಾದ ಯೋಧನಾಗಿದ್ದ. ಒಮ್ಮೆ ನೂರೈವತ್ತು ಮೈಲಿ ಕುದುರೆಯ ಮೇಲೆ ಹೋಗಿ ಗಂಗಾನದಿಯನ್ನು ಎರಡುಸಲ ದಾಟಿದನಂತೆ. ಎಲ್ಲಾ ನಲವತ್ತೆಂಟು ಗಂಟೆಗಳಲ್ಲಿ.

ಜೀವನದ ಸುಂದರ ವಸ್ತುಗಳನ್ನು ಕಂಡರೆ ಬಾಬರನಿಗೆ ಪ್ರೇಮ. ಅವನ ಆತ್ಮಕಥೆ ಬಾಬರ್‌ನಾಮಾ ತುಂಬ ತಿಳಿವಿನಿಂದ ಸೌಂದರ್ಯದಿಂದ ತುಂಬಿದೆ. ಅವನು ಜಯಿಸಿದ ದೇಶದ ಹೂ ಹಣ್ಣುಗಳ ವರ್ಣನೆ ಸೊಗಸಾಗಿದೆ. ಹೂಗಳ ಸಾಮ್ಯವನ್ನೇ ಬಳಸಿಕೊಂಡು ಅವನು ಯೋಚಿಸುತ್ತಿದ್ದ.

'ನನ್ನ ಹೃದಯ ಕೆಂಪು ಗುಲಾಬಿಯ ಮೊಗ್ಗೆಯಂತೆ
ರೇಪಿಯೊಳಗೆ ರೇಪೆಕೂಡುವಂತೆ ಕೂಡಿ
ಒಳಗೆ ಹುದುಗಿ ಜ್ವಲಿಸುತ್ತಿದೆ....'

ಬಾಬರ್ ತನ್ನ ಮಗ ಹುಮಾಯೂನನಿಗಾಗಿ ಆತ್ಮಾರ್ಪಣಮಾಡಿದ ಕಥೆಯೊಂದು ಪ್ರಚಾರದಲ್ಲಿದೆ. ಹುಮಾಯೂನ್ ಜ್ವರಗ್ರಸ್ತನಾಗಿ ಮಲಗಿದ್ದನಂತೆ. ಬಾಬರ್ ಅವನ ಹಾಸಿಗೆ ಸುತ್ತ ಶಥಪಥ ತಿರುಗುತ್ತಾ ಹುಮಾಯೂನನ ಪ್ರಾಣ ಉಳಿದರೆ ಬದಲಾಗಿ ತನ್ನ ಪ್ರಾಣ ಒಪ್ಪಿಸುವುದಾಗಿ ಪ್ರಾರ್ಥಿಸಿಕೊಂಡ

ನಂತೆ. ಹಾಗೇ ಆಯಿತು. ಕೆಲವು ದಿನಗಳಲ್ಲಿ ಹುಮಾಯೂನನಿಗೆ ಸಂಪೂರ್ಣವಾಗಿ ಗುಣವಾಯಿತು. ಬಾಬರನಿಗೆ ಜ್ವರ ಬಂದು ಅವನು ಮಲಗಿಬಿಟ್ಟ, ಪುನಃ ಏಳಲೇ ಇಲ್ಲ.



ತಂದೆ ತೀರಿಕೊಂಡ ಹತ್ತು ವರ್ಷಗಳಲ್ಲಿ ಹುಮಾಯೂನ ರಾಜ್ಯಾಧಿಕಾರ ಕಳೆದುಕೊಂಡ. ಪಠಾಣರ ನಾಯಕ ಷೇರ್‌ಖಾನನಿಂದ ಅವನಿಗೆ ಸೋಲಾಯಿತು. ಹುಮಾಯೂನ್ ಪರ್ಶಿಯಾಕ್ಕೆ ಓಡಿಹೋದ.

## ಸೂರಿ ವಂಶ (ಕ್ರಿ. ಶ. ೧೫೪೦ – ೧೫೫೫)


ಷೇರ್‌ಖಾನ್ ಸಿಂಹಾಸನವನ್ನೇರಿ ಷೇರ್‌ಷಾ ಸೂರಿ ಎಂಬ ಹೆಸರಿನಿಂದ ಉತ್ತರ ಹಿಂದೂಸ್ಥಾನವನ್ನಾಳಿದ. ಅವನು ತುಂಬಾ ಬಲಿಷ್ಠ, ಉತ್ಸಾಹಿ, ದುಡಿಮೆಗಾರ. ಭೂಮಿಯನ್ನು ಅಳಸಿ, ನಿರ್ದಿಷ್ಟವಾದ ಕಂದಾಯವನ್ನು ವಿಧಿಸಿದ. ಇದರಿಂದ ರೈತರು ಅನ್ಯಾಯವಾಗಿ ಹೆಚ್ಚು ಕಂದಾಯ ಕೊಡುತ್ತಿದ್ದುದು ತಪ್ಪಿತು. ಉತ್ತರದ ಕೊನೆಯಿಂದ ದೆಹಲಿಯವರೆಗೆ ಇದ್ದ ದೊಡ್ಡ ರಸ್ತೆಯನ್ನು ಸರಿಮಾಡಿಸಿದ. ನಾಲೆಗಳನ್ನು ತೋಡಿಸಿದ. ಏಳೇ ವರ್ಷ ರಾಜ್ಯವಾಳಿ ಅವನು ತೀರಿಕೊಳ್ಳಲು ರಾಜ್ಯ ಚೂರು ಚೂರಾಗಿ ಒಡೆದು ಅವನ ಇಬ್ಬರ ವಂಶಜರ ಕೈವಶವಾಯಿತು. ಹುಮಾಯೂನನಿಗೆ ಈ ಸುದ್ದಿ

ಪರ್ಶಿಯಾಗೆ ಮುಟ್ಟಿತು. ಪರ್ಶಿಯಾದ ದೊರೆ ಷಾ ಟಮಸ್ಪನ ನೆರವು ಪಡೆದು ದೊಡ್ಡ ಸೈನ್ಯವೊಂದನ್ನು ಕೂಡಿಸಿಕೊಂಡು ಹಿಂದೂಸ್ಥಾನಕ್ಕೆ ಮುತ್ತಿಗೆ ಹಾಕಿದ. ಯುದ್ಧದಲ್ಲಿ ಅವನಿಗೆ ಜಯ ಲಭಿಸಿತು. ಸಿಂಹಾಸನ ಕೈವಶವಾಯಿತು. ಒಂದೇ ವರ್ಷ ಅವನು ರಾಜ್ಯವಾಳಿದ್ದ. ಒಂದು ದಿನ ದೆಹಲಿಯ ಹಳೆಯ ಕೋಟೆಯಲ್ಲಿದ್ದ ಪುಸ್ತಕ ಭಂಡಾರದಿಂದ ಕೆಳಗೆ ಬಿದ್ದು ಪ್ರಾಣ ಕಳೆದುಕೊಂಡ.

## ಅಕಬರ್ (ಕ್ರಿ. ಶ. ೧೫೫೬–೧೬೦೫)

ಗಾದಿಗೆ ಬಂದಾಗ ಹುಮಾಯೂನನ ಮಗ ಅಕಬರನಿಗೆ ತಾರುಣ್ಯ. ಆಗಲೇ ಅವನು ತನ್ನ ಹಿರಿಮೆಯ ಲಕ್ಷಣಗಳನ್ನು ಸೂಚಿಸಲಾರಂಭಿಸಿದ್ದ. ದೇಶದ ಜನಗಳನ್ನು ಒಗ್ಗೂಡಿಸಿದ ಹೊರತು ತನ್ನ ರಾಜ್ಯ ಉಳಿಯುವುದಿಲ್ಲವೆಂದು ಅವನು ಕಂಡುಕೊಂಡ. ಅನೇಕ ರಜಪೂತ ದೊರೆಗಳನ್ನು ಪ್ರೀತಿಯಿಂದ ಒಲಿಸಿಕೊಂಡ. ಹಿಂದು–ಮುಸ್ಲಿಮರಲ್ಲಿ ಸಖ್ಯ ಬೆಳೆಸಲು ತಾನೇ ಜೋಧಬಾಯಿ ಎಂಬ ಹಿಂದೂ ರಾಜಕುಮಾರಿಯನ್ನು ಮದುವೆಮಾಡಿಕೊಂಡ. ಮುಂದೆ ಚಕ್ರವರ್ತಿ ಜಹಾಂಗೀರ್ ಎನಿಸಿಕೊಂಡ ಅವನ ಮಗ ರಾಜಕುಮಾರ ಸಲೀಮ್ ಈ ದಾಂಪತ್ಯದಿಂದ ಹುಟ್ಟಿದವನು.

ಅಕಬರ್ ಜನ ಸೇರುತ್ತಿದ್ದ ಎಡೆಗೆ ಸಾಮಾನ್ಯ ಮನುಷ್ಯನಂತೆ ಮಾರುವೇಷ ಧರಿಸಿ ಹೋಗುತ್ತಿದ್ದ. ಈ ರೀತಿ ತನ್ನ ಪ್ರಜೆಗಳ ಕಷ್ಟ ಕಾರ್ಪಣ್ಯಗಳನ್ನು ಅರಿತುಕೊಂಡ. ಕೆಟ್ಟ ಅಧಿಕಾರಿಗಳಿಗೆ ನ್ಯಾಯದ, ಅನ್ಯಾಯದ ತೆರಿಗೆಗಳನ್ನು ಅವರು ಕೊಡುತ್ತಿದ್ದುದು ತಿಳಿದು ಬಂತು. ಭೂಮಿಯನ್ನು



ಅಳತೆಮಾಡಿಸಲು ತನ್ನ ಮಂತ್ರಿ ತೋದರಮಲ್ಲನಿಗೆ ಆಜ್ಞೆವಿಧಿಸಿದ. ಭೂಕಂದಾಯವನ್ನು ನಿರ್ಧಾರ ಮಾಡಿ ಅನ್ಯಾಯದ ಕಂದಾಯಗಳನ್ನು ನಿವಾರಿಸಿದ. ಕೆಟ್ಟ ಅಧಿಕಾರಿಗಳು ಜನರನ್ನು ನಾನಾ ವಿಧವಾಗಿ ಕಾಡುವುದನ್ನು ತಪ್ಪಿಸಿದ. ಸೈನ್ಯದ ಸಹಾಯದಿಂದ ದೇಶವನ್ನು ಒಗ್ಗೂಡಿಸಿದ. ಅವನ ಆಳ್ವಿಕೆಯಲ್ಲಿ ಹಿಂದೂಸ್ಥಾನ ಬಲಿಷ್ಠವೂ ಸುಖಪ್ರದವೂ ಆದ ದೇಶವಾಯಿತು.

ಅಕಬರ್ ತನ್ನ ಸುತ್ತ ಅನೇಕ ವಿವೇಕಿಗಳನ್ನು ಕೂಡಿಸಿಕೊಂಡ. ಅವನ ಒಂಭತ್ತು ಮಂದಿ ವಜೀರರಿಗೆ 'ನವರತ್ನಗಳು' ಎಂಬ ಹೆಸರಿತ್ತು. ಅವರಲ್ಲಿ ಸಂಗೀತಗಾರನಾದ ತಾನಸೇನ್, ತನ್ನ ನಗೆಮಾತಿನಿಂದ ಅಕಬರನನ್ನು ನಗಿಸುತ್ತಿದ್ದ ರಾಜಾ ಬೀರಬಲ, ನಗೆಯಲ್ಲಿ ಬೀರಬಲನ ಸರಿಸಾಟಿ ಎನಿಸಿಕೊಂಡಿದ್ದ ಧರ್ಮಗುರು ಮುಲ್ಲಾದೋ ಪಿಯಾಜಾ ಇವರು ಪ್ರಸಿದ್ಧರಾಗಿದ್ದರು. ಅಕಬರ್ ತನ್ನ ಮಂತ್ರಿ ಅಬುಲ್ ಫಜಲನ ಕೈಲಿ ತನ್ನ ಆಳ್ವಿಕೆಯ ಇತಿಹಾಸವನ್ನು ಬರೆಯಿಸಿದ. ಅದೇ 'ಅಕಬರ್ ನಾಮಾ'. ಅಬುಲ್ ಫಜಲ್ ಪರ್ಶಿಯನ್ ಭಾಷೆಯಲ್ಲಿ ರಾಮಾಯಣವನ್ನೂ ಅನುವಾದ ಮಾಡಿದ. ಅರಮನೆಯ ಚಿತ್ರಗಾರರಿಂದ ಚಿತ್ರಿತವಾದ ರಾಮಾಯಣದ ಸುಂದರ ಪ್ರತಿಯನ್ನು ಇಂದಿಗೂ ಜಯಪುರದ ಪೋತೀಖಾನೆಯಲ್ಲಿ ನೋಡಬಹುದು.

ಫಕೀರ್ ಸಲೀಂ ಚಿಸ್ತಿ ಬಳಿ ವಾಸಿಸಬೇಕೆಂದು ಅಕಬರನಿಗೆ ಆಸೆಯಾಯಿತು. ಅವನು ಅದನ್ನು ಕಾರ್ಯರೂಪಕ್ಕೆ ತರಲು ಆಗ್ರಾದ ಬಳಿ ಫತೇಪುರ್ ಸಿಕ್ರಿ ಎಂಬ ಸುಂದರ ನಗರವನ್ನು ಕಟ್ಟಿಸಿದ.

ಅಕಬರ್ ತನ್ನ ಅರಮನೆಗೆ ಪ್ರತಿಭಾವಂತರಾದ ಚಿತ್ರಗಾರರನ್ನೂ ಕುಶಲಕಲಾವಿದರನ್ನೂ ಬರ

ಮಾಡಿಕೊಂಡ. ಉಸ್ತಾದ್ ಮನ್ಸೂರನಿಗೂ, ಹಿಂದೂ ಚಿತ್ರಗಾರರಿಗೂ ಚಕ್ರವರ್ತಿ ವಿಶೇಷ ಗೌರವ ತೋರಿಸುತ್ತಿದ್ದ. ಈ ಚಿತ್ರಗಾರರ ಕೈಯಲ್ಲಿ ಬಾಬರ್ ತನ್ನೊಂದಿಗೆ ತಂದಿದ್ದ ಪರ್ಶಿಯನ್ ಸಂಪ್ರದಾಯ ಭಾರತೀಯ ಸಂಪ್ರದಾಯವಾಯಿತು. ಪರ್ಶಿಯನರ ಸುಂದರ ವರ್ಣವಿನ್ಯಾಸದ ಜತೆಗೆ ಅಕಬರನ ಕಾಲದ ಚಿತ್ರಗಾರರು ಆಳವಾದ ಹಿಂದೂ ಭಾವನೆಯನ್ನು ಅಳವಡಿಸಿದರು.

ಇಂಗ್ಲೆಂಡಿನ ರಾಣಿ ಎಲಿಜಬೆತಳೂ ಅಕಬರನೂ ಸಮಕಾಲೀನರು. ಬ್ರಿಟಿಷ್ ರಾಣಿಯ ಕಿವಿಗೆ ಮುಘಲ ಆಸ್ಥಾನದ ವೈಭವದ ವಿಷಯ ಮುಟ್ಟಿತ್ತು. ಆಕೆ ಅಕಬರನಿಗೆ ಗೌರವಯುತವಾದ ಒಂದು ಕಾಗದ ಬರೆದು ಹಿಂದೂದೇಶದ ಜತೆ ವ್ಯಾಪಾರಮಾಡಬೇಕೆಂದಿದ್ದ ತನ್ನ ದೇಶದ ಕೆಲವು ವರ್ತಕರ ಪರಿಚಯ ಮಾಡಿಕೊಟ್ಟಳು. ಅಕಬರನನ್ನು ಕಾಣಲು ಇನ್ನೂ ಅನೇಕ ಐರೋಪ್ಯರು ಬಂದರು.

ಕ್ರೈಸ್ತ ಜೆಸುವಿಟ್ ಪಾದ್ರಿಗಳೂ ಬಂದರು. ಅಕಬರನ ಸತ್ಯಪ್ರೇಮದ ವಿಷಯ ಅವರ ಕಿವಿಗೆ ಮುಟ್ಟಿತ್ತು. 'ಚಕ್ರವರ್ತಿ ಕೇವಲ ಮೂರೇ ಗಂಟೆಗಳನ್ನು ನಿದ್ರೆಗಾಗಿ ವಿನಿಯೋಗಿಸುತ್ತಿದ್ದ. . . . . . ಆತನಿಗೆ ಅದ್ಭುತ ಜ್ಞಾಪಕಶಕ್ತಿ ಇತ್ತು. ಆತನಿಗೆ ತನ್ನ ಎಲ್ಲ ಆನೆಗಳ, ಕುದುರೆಗಳ, ಜಿಂಕೆಗಳ, ಪಾರಿವಾಳಗಳ ಹೆಸರುಗಳೂ ಗೊತ್ತಿದ್ದವು. ಆತನಲ್ಲಿ ಸಾವಿರಾರು ಪ್ರಾಣಿಗಳೂ ಹಕ್ಕಿಗಳೂ ಇದ್ದುದರಿಂದ ಇದು ಬಹಳ ಆಶ್ಚರ್ಯವೆನಿಸುತ್ತದೆ'—ಎಂದು ಪಾದ್ರಿಗಳು ಬರೆದಿದ್ದಾರೆ.

ಈ ಪಾದ್ರಿಗಳು ಚಕ್ರವರ್ತಿಗೆ ತಮ್ಮ ಧರ್ಮದ ಪರಿಚಯ ಮಾಡಿಕೊಟ್ಟರು. ಅವನನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಬಹುದೆಂದು ಅವರು ನಿರೀಕ್ಷಿಸಿಕೊಂಡಿದ್ದರು. ಅವರೊಂದಿಗೆ ಚರ್ಚೆ

ಮಾಡುವಂತೆ ಕೆಲವು ಬ್ರಾಹ್ಮಣರನ್ನೂ ಮೌಲ್ವಿಗಳನ್ನೂ ಅಕಬರ್ ನೇಮಿಸಿದ. ಪ್ರತಿ ಒಂದು ಚರ್ಚೆಯನ್ನೂ ತಾನೇ ಕಿವಿಯಾರೆ ಕೇಳುತ್ತಿದ್ದ. ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮಗಳು ಬೋಧಿಸುತ್ತಿದ್ದ ಸತ್ಯದ ಬಗ್ಗೆ ಬೇಕಾದಷ್ಟು ವಿಚಾರಮಾಡಿದ. ಎಲ್ಲ ಧರ್ಮಗಳೂ ಒಬ್ಬನೇ ದೇವರಬಳಿಗೆ ತಮ್ಮತಮ್ಮ ಹಾದಿಯಲ್ಲಿ ಹೋಗಲೆತ್ನಿಸುತ್ತಿವೆ ಎಂದು ಅವನಿಗೆ ಭಾಸವಾಯಿತು. ಧರ್ಮದ ಬಗ್ಗೆ ಜನ ಜಗಳವಾಡದಿರಲೆಂದು 'ದೀನ್-ಇ-ಇಲಾಹಿ' ಎಂಬ ಧರ್ಮವನ್ನು ತಾನೇ ಸ್ಥಾಪಿಸಿದ. ಈ ಧರ್ಮದ ಒಳಗೆ ಎಲ್ಲ ಧರ್ಮತತ್ವಗಳಲ್ಲಿ ಇರುವ ಉತ್ತಮಾಂಶಗಳನ್ನು ಅಡಕಮಾಡಲೆತ್ನಿಸಿದ. ಆದರೆ ಧರ್ಮಾವಲಂಬಿಗಳು ತಮ್ಮ ಹಳೆಯಜಾಡು ಬಿಡಲಿಲ್ಲ. ಆದ್ದರಿಂದ 'ದೀನ್-ಇ-ಇಲಾಹಿ' ಊರ್ಜಿತವಾಗಲಿಲ್ಲ.

ಹಿಂದೂಕುಷ್ ಪರ್ವತಗಳಿಂದ ದಕ್ಷಿಣದವರೆಗೆ ಸಿಂಧದಿಂದ ಬಂಗಾಳದವರೆಗೆ ಹಬ್ಬಿದ ವಿಶಾಲ ಸಾಮ್ರಾಜ್ಯವನ್ನು ಅಕಬರ್ ಬಿಟ್ಟುಹೋದ. ಅವನ ಕಾಲಕ್ಕೆ ಅದು ಬಲಿಷ್ಠವಾಗಿ ಒಂದಾಗಿತ್ತು.

## ಜಹಾಂಗೀರ್ (ಕ್ರಿ. ಶ. ೧೬೦೫-೧೬೨೭)

ತನ್ನ ಮಗ ರಾಜಕುಮಾರ ಸಲೀಮ ನ್ಯಾಯಪರನಾದ ಒಳ್ಳೆಯ ದೊರೆಯಾಗುವಂತೆ ಅಕಬರ್ ತನ್ನ ಜೀವಮಾನಕಾಲದಲ್ಲೇ ಪ್ರಯತ್ನಿಸಿದ.


ಚಕ್ರವರ್ತಿಯಾದ ಮೇಲೆ ಸಲೀಮನ ಹೆಸರು ಜಹಾಂಗೀರ್ ಎಂದು ಬದಲಾಯಿತು. ಅವನು ನ್ಯಾಯಪರನಾದ ದೊರೆಯಾಗಿದ್ದ. ತನ್ನ ಕೋಣೆಗೆ ಒಂದು ಘಂಟೆ ಕಟ್ಟಿಸಿ ಅದನ್ನು ಎಳೆಯುವ

ಸರಪಣಿಯನ್ನು ಅರಮನೆಯ ಬಾಗಿಲಲ್ಲಿ ಬಿಡಿಸಿದ. ಯಾರು ಚಕ್ರವರ್ತಿಗೆ ದೂರು ಹೇಳಬೇಕಾಗಿದ್ದರೂ ಈ ಘಂಟೆ ಬಾರಿಸಿ ಚಕ್ರವರ್ತಿಯನ್ನು ಕಂಡು ನ್ಯಾಯ ದೊರಕಿಸಿಕೊಳ್ಳಬಹುದಾಗಿತ್ತು. ಜನ ಸಂತೃಪ್ತರಾಗಿದ್ದರು. ಭೂಮಿ ಬೇಕಾದಷ್ಟು ಬೆಳಸನ್ನು ಕೊಡುತ್ತಿತ್ತು. ಕೆಲಕಾಲ ರಾಜ್ಯದಲ್ಲಿ ಸೌಖ್ಯ ತಾನೇ ತಾನಾಗಿ ವ್ಯಾಪಿಸಿತ್ತು.

ಯೂರೋಪಿನಲ್ಲಿ ಹಿಂದೂಸ್ಥಾನದ ಅಪಾರ ಸಂಪತ್ತಿನ ಖ್ಯಾತಿ ಹಬ್ಬುತ್ತಿತ್ತು. ಸಾವಿರದ ಆರನೂರ ಹದಿನೈದರಲ್ಲಿ ಇಂಗ್ಲೆಂಡಿನ ದೊರೆ ಮೊದಲನೆಯ ಜೇಮ್ಸ್ ಒಬ್ಬ ವಿಶೇಷ ರಾಯಭಾರಿಯನ್ನು ಚಕ್ರವರ್ತಿಯ ಆಸ್ಥಾನಕ್ಕೆ ಕಳಿಸಿಕೊಟ್ಟ. ಈ ರಾಯಭಾರಿ ಸರ್ ಥಾಮಸ್ ರೋ, ಈಸ್ಟ್ ಇಂಡಿಯಾ ಕಂಪೆನಿಯ ಇಂಗ್ಲಿಷ್ ವರ್ತಕರು ಹಿಂದೂಸ್ಥಾನದಲ್ಲಿ ತಮ್ಮ ವ್ಯಾಪಾರ ಬೆಳಸಲು ಸಹಾಯ ಮಾಡಬೇಕೆಂದು ಚಕ್ರವರ್ತಿಯನ್ನು ಬೇಡಿಕೊಂಡ.

ಪೋರ್ಚುಗಲ್ಲಿನ ಪಾದ್ರಿಗಳೂ ಆಸ್ಥಾನದಲ್ಲಿ ತಮ್ಮ ಪ್ರಭಾವ ಬೆಳಸಿದ್ದಂತೆ ಕಂಡುಬರುತ್ತದೆ. ಇದನ್ನು ಕಂಡು ಇಂಗ್ಲಿಷರಿಗೆ ಅಸೂಯೆಯಾಯಿತು. ವ್ಯಾಪಾರ ನಡೆಸುತ್ತಿದ್ದ ಊರುಗಳಲ್ಲಿ ಇಂಗ್ಲಿಷರ ನಡತೆ ಚೆನ್ನಾಗಿಲ್ಲದಿದ್ದುದರಿಂದ ಸರ್ ಥಾಮಸ್‌ರೋ ಚಕ್ರವರ್ತಿಯನ್ನು ಸುಲಭವಾಗಿ ಕಾಣಲಾಗುತ್ತಿರಲಿಲ್ಲ. ಅವನು ಚಕ್ರವರ್ತಿಗೆ ಹಲವು ಡಬ್ಬ ಯೂರೋಪಿಯನರ ಹ್ಯಾಟುಗಳು, ಆಟದ ಸಾಮಾನುಗಳನ್ನೂ ತಂದೊಪ್ಪಿಸಿದ. ಈ ಬಹುಮಾನಗಳನ್ನು ಜಹಾಂಗೀರನ ವಜೀರರು ತೆಗೆದುಕೊಳ್ಳುತ್ತಿದ್ದರು. ಅವರ ಹೆಂಡತಿಯರು ಹ್ಯಾಟುಗಳನ್ನು ಧರಿಸಿಕೊಂಡು ಆಸ್ಥಾನದಲ್ಲಿ ಓಡಿ

ಯಾಡುತ್ತಿದ್ದುದು ಬಹು ವಿನೋದಕರವಾಗಿತ್ತು. ಕೊನೆಗೆ ಸರ್ ಥಾಮಸ್‌ರೋನ ಪ್ರಯತ್ನ ಸಫಲಿಸಿತು. ಚಕ್ರವರ್ತಿ ಅವನನ್ನು ಆಸ್ಥಾನಕ್ಕೆ ಬರಮಾಡಿಕೊಂಡು ಪ್ರೀತಿ ವಿಶ್ವಾಸಗಳಿಂದ ಕಂಡ.



ಜಹಾಂಗೀರ್ ನ್ಯಾಯಪರನಾದ ದೊರೆಯಾಗಿದ್ದರೂ, ಒಳ್ಳೆಯ ಆಡಳಿತಗಾರನಾಗಿರಲಿಲ್ಲ. ತನ್ನ ವಿಲಾಸಕ್ಕೆ ವಿಶೇಷ ಕಾಲ ವ್ಯಯಮಾಡುತ್ತಿದ್ದ. ವಿಪರೀತ ಮದ್ಯಪಾನ ಮಾಡುತ್ತಿದ್ದ. ಬೇಟೆಯಲ್ಲಿ ತನ್ನ ಕಾಲವನ್ನೆಲ್ಲ ಕಳೆಯುತ್ತಿದ್ದ.

ತನ್ನ ತಂದೆಯ ಅರಮನೆಯಲ್ಲಿ

ನೋಡಿದ ಒಬ್ಬ ಸಭಾಸದನ ಮಗಳ ಮೇಲೆ ತಾರುಣ್ಯದಲ್ಲಿಯೇ ಜಹಾಂಗೀರ್ ಅನುರಾಗಗೊಂಡಿದ್ದ. ಹುಡುಗಿ ತೋಟದಲ್ಲಿ ಆಡುತ್ತಿದ್ದಳು. ಆ ದಾರಿಯಲ್ಲಿ ಬಂದ ಸಲೀಮ ತನ್ನ ಎರಡು ಪಾರಿವಾಳ ಗಳನ್ನು ಹಿಡಿದುಕೊಳ್ಳಲು ಅವಳ ಕೈಗಿತ್ತ. ಒಂದು ಪಾರಿವಾಳ ಅವಳ ಕೈತಪ್ಪಿಸಿ ಹಾರಿಹೋಯಿತು. ಅದು ಹೇಗಾಯಿತೆಂದು ಸಲೀಮ ಕೇಳಲು ಅವಳು ಇನ್ನೊಂದು ಪಾರಿವಾಳವನ್ನೂ ಬಿಟ್ಟು 'ಹೀಗಾ ಯಿತು' ಎಂದು ಹೇಳಿದಳು. ಸಲೀಮನಿಗೆ ಕೋಪ ಬಂತು. ಆದರೆ ಅವಳ ನಿಷ್ಕಪಟ ಮುಖ ನೋಡಿ ದಾಗ ಅವನ ಕೋಪ ಉಪಶಮನವಾಗಿ ಮುಖದಲ್ಲಿ ಮುಗುಳ್ನಗೆ ತೇಲಿತು. ಅವಳನ್ನು, ಸಿಂಹ ದೊಂದಿಗೆ ಏಕಾಂಗಿಯಾಗಿ ಕಾದಿದ್ದ ಬಂಗಾಳದ ರಾಜಪ್ರತಿನಿಧಿ ಷೇರ್ ಆಫ್‌ಘನ್ನನಿಗೆ ಕೊಟ್ಟು ದುರದೃಷ್ಟವಶಾತ್ ವಿವಾಹವಾಯಿತು.

ಸಲೀಮ ಚಕ್ರವರ್ತಿಯಾದ ಕೂಡಲೇ ಷೇರ್ ಆಫ್‌ಘನ್ನನನ್ನು ಕೊಲ್ಲಿಸಿಬಿಟ್ಟ. ತನ್ನ ಪ್ರಿಯತಮೆ ಯನ್ನು ಅರಮನೆಗೆ ಕರೆದುಕೊಂಡು ಬಂದ. ಅವಳಿಗೆ ನೂರ್ ಜಹಾನ್—ಜಗತ್ತಿನ ಬೆಳಕು ಎಂದು ಹೆಸರಿಟ್ಟ. ಎರಡು ವರ್ಷಕಾಲ ನೂರ್‌ಜಹಾನ್ ಅವನೊಂದಿಗೆ ಮಾತನಾಡಲಿಲ್ಲ. ಅನಂತರ ಅವಳು ಅವನನ್ನು ಕ್ಷಮಿಸಿ ಅವನ ರಾಣಿಯಾದಳು.

ಇದಾದಮೇಲೆ ರಾಜ್ಯವನ್ನು ನೂರ್‌ಜಹಾನಳೇ ಆಳುವುದಕ್ಕೆ ಮೊದಲುಮಾಡಿದಳು. ಚಕ್ರವರ್ತಿ ಮದ್ಯಪಾನಮಾಡಿಕೊಂಡು ಬೇಟೆಯಾಡಿಕೊಂಡು ಕಾವ್ಯ ಬರೆದುಕೊಂಡು ಕಾಲ ಕಳೆಯುತ್ತಿದ್ದ. ಅವನು ಕವಿಗಳನ್ನು, ಸಂಗೀತಗಾರರನ್ನು, ಚಿತ್ರಗಾರರನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡ. ಈಯೆಲ್ಲ

ಕಲೆಗಳನ್ನು ತಾನೇ ಕಲಿಯಲು ಪ್ರಯತ್ನಿಸಿದ. ಕೆಲಕಾಲ ಆಸ್ಥಾನದಲ್ಲಿ ಸೌಂದರ್ಯ, ಸಂತೋಷ ತುಂಬಿ ತುಳುಕುತ್ತಿತ್ತು.

ಜಹಾಂಗೀರ್ ದುರ್ಬಲ ಚಕ್ರವರ್ತಿಯಾಗಿದ್ದುದರಿಂದ ಅವನ ಮಾಂಡಲಿಕರು ದಂಗೆಯೆದ್ದರು. ಆಸ್ಥಾನದಲ್ಲಿ ಸೌಖ್ಯ ಹೆಚ್ಚಿದಂತೆ ರೈತರ ಪಾಡು ಕಠಿಣವಾಗುತ್ತಾ ಬಂತು.

ನೂರ್‌ಜಹಾನ್ ಜಾಣೆಯಾದರೂ, ವಿವಿಧ ಪ್ರಾಂತ್ಯಗಳ ರಾಜಪ್ರತಿನಿಧಿಗಳನ್ನು ಹತೋಟಿಯಲ್ಲಿಡ ಲಾಗಲಿಲ್ಲ. ಆಕೆ ಮಹಾಧೀರೆ. ಒಂದು ಕಾಲದಲ್ಲಿ ವಜೀರ ಮಹಬತ್‌ಖಾನ್ ದಂಗೆಯೆದ್ದಾಗ ಆಕೆಯೇ ಅವನ ಮೇಲೆ ಸೈನ್ಯ ನಡಸಿದಳು.

ಚಕ್ರವರ್ತಿಯ ಮಕ್ಕಳು ತಮ್ಮ ತಮ್ಮಲ್ಲಿಯೇ ವ್ಯಾಜ್ಯವಾಡತೊಡಗಿದರು. ಪ್ರತಿಯೊಬ್ಬರೂ ಸಿಂಹಾಸನ ದೊರಕಿಸಬೇಕೆಂದು ಪ್ರಯತ್ನಿಸಿದರು. ಜಹಾಂಗೀರನ ಮನಸ್ಸು ವ್ಯಾಕುಲಗೊಂಡಿತು. ಕೆಲಕಾಲಾನಂತರ ಅವನು ತೀರಿಕೊಂಡ. ಅವನ ಸಂಸ್ಕಾರ ಲಾಹೋರಿನ ಬಳಿಯಿರುವ ಷಹಾದಾರಾ ಬಳಿಯಾಯಿತು.

ಅವನಾನಂತರ ನೂರ್‌ಜಹಾನ್‌ರಾಣಿಯ ಪ್ರಭಾವ ಕಡಿಮೆಯಾಯಿತು. ಆಕೆ ಮುದಿಯಾಗಿ ದಿಕ್ಕಿಲ್ಲದೆ ಸತ್ತಳು. ಆಕೆಯನ್ನು ಪತಿಯ ಸಮಾಧಿಗೆ ಕೆಲವು ಮೈಲಿ ದೂರದಲ್ಲಿ ಸಮಾಧಿ ಮಾಡಿದರು. ಇಂದಿಗೂ ಆಕೆಯ ಪುಟ್ಟ ಸಮಾಧಿಯನ್ನು ರೈಲಿನಲ್ಲಿ ಹೋಗುವಾಗ ನೋಡಬಹುದು. ತನ್ನ ಕೊನೆಗಾಲ

ಹೀಗೇ ಆಗಬಹುದೆಂದು ಆಕೆ ಭವಿಷ್ಯ ಕಂಡಿದ್ದಳೆಂದು ಕಾಣುತ್ತದೆ. ತನ್ನ ಸಮಾಧಿಯ ಮೇಲೆ ಕೆತ್ತಲು ಈ ಶಾಸನ ಬರೆದಳು:

'ನನ್ನ ಸಮಾಧಿಯ ಮೇಲೆ ದೀಪವಾಗಲಿ ಗುಲಾಬಿಯಾಗಲಿ ಇರುವುದಿಲ್ಲ.
ದೀವದ ಹುಳುವಿನ ರೆಕ್ಕೆಗಳು ಸುಡಲ್ಪಡುವುದೂ ಇಲ್ಲ, ಕೋಗಿಲೆ ಹಾಡುವುದೂ ಇಲ್ಲ.'

## ಷಹಜಹಾನ್ (ಕ್ರಿ. ಶ. ೧೬೨೭-೧೬೫೮)

ಜಹಾಂಗೀರನ ಮಗ ಷಹಜಹಾನ್ ಸಿಂಹಾಸನವನ್ನೇರಿದಾಗ ರಾಜ್ಯ ದೊಡ್ಡ ಗೊಂದಲಕ್ಕೀಡಾಗಿತ್ತು.

ಪ್ರಾಂತ್ಯ ಪ್ರತಿನಿಧಿಗಳ ದಂಗೆಯಿಂದಲೂ, ಉತ್ತರಾಧಿಕಾರತ್ವದ ಯುದ್ಧಗಳಿಂದಲೂ ಅಧಿಕಾರಿಗಳು ಲಂಚಕೋರರಾಗಿ ನೀತಿಭ್ರಷ್ಟರಾಗಿದ್ದರು. ಜನಗಳಿಗೆ ಹಿಂಸೆ ಹೆಚ್ಚಾಗಿ ಅವರ ಗೋಳು ತೀರದಾಗಿತ್ತು. ಷಹಜಹಾನ್ ಮತ್ತು ಅವನ ಆಸ್ಥಾನಿಕರು ಸುಖವಾಗಿ ಬಾಳಿ ಬದುಕಿದರು. ಆದರೆ ಜನಕ್ಕೆ ತಿನ್ನಲು ಹಿಟ್ಟಿಲ್ಲ. ಪ್ರಾಂತ್ಯಗಳ ಪ್ರತಿನಿಧಿಗಳು ಚಕ್ರವರ್ತಿಯ ಮಾತಿಗೆ ಗೌರವ ಕೊಡುತ್ತಿರಲಿಲ್ಲ. ಸಮುದ್ರತೀರಗಳಲ್ಲಿದ್ದ ಪರದೇಶೀಯರು ತೊಂದರೆ ಕೊಡಲಾರಂಭಿಸಿದ್ದರು. ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟಿಷರು ಒಬ್ಬರನ್ನೊಬ್ಬರು ಹೊರಗೆ ಸಾಗಿಸಿ ಎಲ್ಲ ವ್ಯಾಪಾರವನ್ನೂ ತಾವೇ ದಕ್ಕಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದರು. ಅವರೂ ಚಕ್ರವರ್ತಿಯನ್ನು ಕಡೆಗಾಣಿಸತೊಡಗಿದರು.



7

ಸೈನ್ಯಕ್ಕಾಗಿ ಷಹಜಹಾನನು ಅಪಾರ ಹಣ ವ್ಯಯಮಾಡಬೇಕಾಯಿತು. ಇದರಿಂದ ಬೊಕ್ಕಸ ಬರಿದಾಗಿ ದೇಶದಲ್ಲಿ ಅಶಾಂತಿಗೆಡೆಕೊಟ್ಟಿತು.

ಚಕ್ರವರ್ತಿಗೆ ಭವ್ಯವಾದ ಕನಸುಗಳು. ತನ್ನ ರಾಜ್ಯದ ವೈಭವವನ್ನು ಹೆಚ್ಚಿಸಲಿಕ್ಕೆ ವಿಶಾಲವಾದ ಸುಂದರ ಕಟ್ಟಡಗಳನ್ನು ಕಟ್ಟಿಸಬೇಕೆಂದು ಆಸೆ.


ದೆಹಲಿಯ ಪ್ರಸಿದ್ಧ ಕೆಂಪುಕೋಟೆಯನ್ನು ಕಟ್ಟಲು ದೇಶದ ಕುಶಲ ಶಿಲ್ಪಿಗಳನ್ನು ಚಕ್ರವರ್ತಿ ಬರಮಾಡಿಕೊಂಡ. ಈ ಕೋಟೆಯಲ್ಲಿ ಎರಡು ತೊಟ್ಟಿಗಳು ನಿರ್ಮಿತವಾದವು. ಒಂದು ದಿವಾನಿ ಖಾಸ್— ರಾಜ ಮನೆತನದವರ ಆಲೋಚನಾಮಂದಿರ; ಇನ್ನೊಂದು ದಿವಾನಿ ಆಮ್— ಜನತೆಯ ಆಲೋಚನಾ ಮಂದಿರ. ಅಮೂಲ್ಯ ರತ್ನಗಳಿಂದ ಕೆತ್ತಿದ ತಖ್ತೆತವೂಸ್— ಮಯೂರ ಸಿಂಹಾಸನವನ್ನು ತನಗಾಗಿ ಮಾಡಿಸಿಕೊಂಡ.



ಕೋಟೆಯ ಎದುರು ಈರುಳ್ಳಿ ಆಕಾರದ ಗುಮ್ಮಟವನ್ನು ಹೊಂದಿದ್ದ ಜುಮ್ಮಾ ಮಸೀದಿಯನ್ನು ಕಟ್ಟಿಸಿದ.

ಚಕ್ರವರ್ತಿಯ ಪ್ರಿಯರಾಣಿ ಮುಮ್ತಾಜ್‌ಮಹಾಲ್ ತೀರಿಕೊಳ್ಳಲು ಆಗ್ರಾದಲ್ಲಿ ಆಕೆಯ ಸಮಾಧಿಯ ಮೇಲೆ

ತಾಜಮಹಾಲನ್ನು ಕಟ್ಟಿಸಿದ. ಇದು ಜಗತ್ತಿನ ಅಚ್ಚರಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಅಮೃತಶಿಲೆಯಲ್ಲಿ ಮಾಡಲ್ಪಟ್ಟಿರುವ ತಾಜಮಹಾಲು ಮಧ್ಯಾಹ್ನದಲ್ಲಿ ಮತ್ತು ಬೆಳದಿಂಗಳು ರಾತ್ರಿಯಲ್ಲಿ ಏಕಪ್ರಕಾರವಾಗಿ ಬೆಳಗುತ್ತದೆ. ಅದನ್ನು ಒಂದು ಬಗೆಯ ದೈವಿಕ ಸೌಂದರ್ಯ ಆವರಿಸಿದೆ.



ಈ ಚಕ್ರವರ್ತಿಯ ಖ್ಯಾತಿ ಪ್ರಸಿದ್ಧ ಶಿಲ್ಪಿಯೆಂದು ಉಳಿದಿದೆ. ತನ್ನ ಸಭಾಸದರನ್ನು ಹದ್ದಿನಲ್ಲಿಡುವುದಕ್ಕೂ, ಜನತೆಯನ್ನು ತೃಪ್ತಿಪಡಿಸುವುದಕ್ಕೂ ಇವನಿಂದ ಸಾಧ್ಯವಾಗಲಿಲ್ಲ.

ಷಹಜಹಾನ್ ಬಹಳಕಾಲ ಬದುಕಿದುದರಿಂದ ಇವನ ಮಕ್ಕಳಲ್ಲಿ ರಾಜ್ಯಕ್ಕಾಗಿ ಕಲಹವಾರಂಭವಾಯಿತು. ಜಹಾಂಗೀರನ ವಿರುದ್ಧ ಷಹಜಹಾನ್ ದಂಗೆಯೆದ್ದಂತೆ ಅವನ ಮಕ್ಕಳು ಅವನ ವಿರುದ್ಧ ದಂಗೆಯೆದ್ದರು.

## ಔರಂಗಜೇಬ (ಕ್ರಿ. ಶ. ೧೬೫೮-೧೭೦೭)

ಅಣ್ಣ ತಮ್ಮಂದಿರಲ್ಲಾದ ಕದನಗಳಲ್ಲಿ ಷಹಜಹಾನನ ಮೂರನೆಯ ಮಗ ಔರಂಗಜೇಬ ಜಯಶಾಲಿಯಾದ. ಇವನು ಇಬ್ಬರು ಸೋದರರ ವಧೆ ಮಾಡಿಸಿದ. ಮೂರನೆಯವನು ತಲೆ ತಪ್ಪಿಸಿಕೊಂಡು

ಓಡಿಹೋದ. ತನ್ನ ತಂದೆಯನ್ನೇ ಸೆರೆಮನೆಯಲ್ಲಿ ದೂಡಿದ.

ಅವರಂಗಜೇಬ ನಿರಾಡಂಬರ ಜೀವನ ನಡಸುತ್ತಿದ್ದ ಕಷ್ಟಜೀವಿ. ಅವನ ಮನಸ್ಸು ಕಬ್ಬಿಣದಂತೆ ಕಠಿಣ, ಅವನ ಧರ್ಮ ಸಹನೆಯನ್ನರಿಯದ ಕಟುಧರ್ಮ.

ದಿಗ್ವಿಜಯಗಳಿಂದ ದೇಶವನ್ನು ಒಂದುಗೂಡಿಸಲು ಅವರಂಗಜೇಬ ಪ್ರಯತ್ನಿಸಿದ. ದಂಗೆಕೋರರಾದ ಪ್ರಾಂತ್ಯ ಪ್ರತಿನಿಧಿಗಳನ್ನು ಅಣಗಿಸಲು ಸೈನ್ಯವನ್ನು ಹಿಂದೂಸ್ಥಾನದ ಎಲ್ಲಕಡೆಗೂ ನುಗ್ಗಿಸಿದ. ಆದರೆ ಅವರಂಗಜೇಬನ ಬೊಕ್ಕಸ ಬರಿದು. ಜಹಾಂಗೀರ್, ಷಹಜಹಾನ್ ಮತ್ತು ಅವರ ಸುಖಲೋಲುಪ-ಆಸ್ಥಾನಿಕರು ಅದನ್ನು ಬರಿದುಮಾಡಿ ಬಿಟ್ಟು ಹೋಗಿದ್ದರು. ಚಕ್ರವರ್ತಿ ಕೈಹಾಕಿದ ಯುದ್ಧಗಳೆಲ್ಲಾ ಖರ್ಚಿನ ಪ್ರಸಂಗಗಳಾಗುತ್ತ ಬಂದವು. ಆಸ್ಥಾನಿಕರಿಂದ ಹೆಚ್ಚು ಕೆಲಸಮಾಡಿಸಿ, ಅವರ ಖರ್ಚನ್ನು ಕಡಿಮೆಮಾಡಿಸಲು ಸಾಧ್ಯವಾಗಲಿಲ್ಲ. ಸರ್ಕಾರಿ ಅಧಿಕಾರಿಗಳ ಸಂಖ್ಯೆ ಮೊದಲಿದ್ದುದಕ್ಕಿಂತ ಬೆಳೆಯುತ್ತ ಹೋಯಿತು. ಎಲ್ಲರೂ ರೈತನ ಮೇಲೆ ಬಿದ್ದು ಅವನನ್ನು ಸುಲಿದು ತಿನ್ನುವುದಕ್ಕೆ ಆರಂಭಿಸಿದರು. ನಾನಾ ತೆರಿಗೆಗಳ ದಬ್ಬಾಳಿಕೆಗೆ ಸಿಕ್ಕಿದ ರೈತನಿಗೆ ಹೆಚ್ಚು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ.



ಕಾಲ ಹೋದಂತೆ ಅವರಂಗಜೇಬನಿಗೆ ಇಸ್ಲಾಮಿನ ಮೇಲೆ ಅಭಿಮಾನ ಹೆಚ್ಚುತ್ತ ಹೋಯಿತು. ಬಲವತ್ತರವಾಗಿ ಹಿಂದೂ ಪ್ರಜೆಗಳನ್ನು ಮತಾಂತರಗೊಳಿಸುವುದಕ್ಕೆ ಅವನು ಪ್ರಯತ್ನಿಸಿದ.

ಅಸಂತುಷ್ಟರಾದ ರೈತರೂ, ಬಲವಂತದ ಸೈನ್ಯಸೇವೆಗೆ ಒಪ್ಪದಿದ್ದವರೂ ಶಿವಾಜಿಯನ್ನೂ ಸಿಕ್ಖರ ಕೊನೆಯ ಗುರುವಾದ ಗುರುಗೋವಿಂದನನ್ನೂ ಆಶ್ರಯಿಸಿದರು.

ಸಾಮ್ರಾಜ್ಯದ ಮೇರೆ ಬಹಳ ವಿಸ್ತಾರವಾಗಿ ಹಬ್ಬಿದರೂ ಅವರಂಗಜೇಬ ಜನರ ಪ್ರೇಮ ಸಂಪಾದಿಸಲಿಲ್ಲ. ಅವನ ಪೂರ್ವಜರು ಮಾಡಿದ್ದ ಒಳ್ಳೆಯ ಕೆಲಸಗಳನ್ನು ಅವನು ನಾಶಮಾಡಿದ.

## ಮುಘಲ ಸಾಮ್ರಾಜ್ಯದ ಅಳಿಗಾಲ

ನಾನಾ ತೆರನಾದ ದಂಗೆಗಳಾರಂಭವಾದವು. ಇವುಗಳಲ್ಲಿ ಮಹಾರಾಷ್ಟ್ರ ನಾಯಕನಾದ ಶಿವಾಜಿಯ ದಂಗೆ ಮುಖ್ಯವಾದುದು.

ದಕ್ಷಿಣದಲ್ಲಿರುವ ವಿಜಾಪುರದ ಸುಲ್ತಾನನ ಆಸ್ಥಾನದಲ್ಲಿ ಶಿವಾಜಿಯ ತಂದೆ ಸಾಧಾರಣ ಸಭಾಸದ. ಶಿವಾಜಿ ಅಲ್ಲಿಂದ ಓಡಿಹೋಗಿ ಮಹಾರಾಷ್ಟ್ರ, ಗುಜರಾತು, ರಜಪುಟಾಣಗಳ ರೈತರನ್ನು ತನ್ನ ಬಾವುಟದ ಕೆಳಗೆ ಸೇರಿಸಿದ. ಒಂದು ದೊಡ್ಡ ಅಕ್ರಮ ಸೈನ್ಯವನ್ನೇ ಕಟ್ಟಿದ. ಆಗಾಗ್ಗೆ, ತಾನು ಅಡಗಿಕೊಂಡಿದ್ದ ಬೆಟ್ಟಗುಡ್ಡಗಳಿಂದ ಮುಘಲರಾಜ್ಯದೊಳಗೆ ಬಂದು ಕೊಳ್ಳೆಹೊಡೆದುಕೊಂಡು ಹೋಗುತ್ತಿದ್ದ.



ಷಹಜಹಾನನ ಆಳ್ವಿಕೆಯ ಕೊನೆಯ ಭಾಗದಲ್ಲಿ ಹುಟ್ಟಿಕೊಂಡ ಗೊಂದಲಕಾಲದಲ್ಲಿ ಶಿವಾಜಿ ಪಶ್ಚಿಮತೀರದಲ್ಲಿ ಪ್ರಬಲನಾದ.

ಅವನನ್ನಡಗಿಸಲು ಅವರಂಗಜೇಬ ಅನೇಕ ಸಾರಿ ಸೈನ್ಯ ಕಳುಹಿಸಿಕೊಟ್ಟ. ಶಿವಾಜಿಯ ಕುದುರೆ ಸವಾರರು, ಸೈನಿಕರು ಚಾಣಾಕ್ಷರಾಗಿದ್ದುದರಿಂದ ಅವರು ಯಾರೂ ಚಕ್ರವರ್ತಿಯ ಸೈನ್ಯದವರ ಕೈಗೆ ಸಿಕ್ಕಿಬೀಳುತ್ತಿರಲಿಲ್ಲ.

ಹಿಂದೂಸ್ಥಾನ ಕಂಡಿರುವ ಮಹಾ ವೀರರಲ್ಲಿ ಶಿವಾಜಿಯೊಬ್ಬ. ಅವನು ನರಿಯಂತೆ ಕುಟಿಲನೂ ಆಗಿದ್ದ. ವಿಜಾಪುರದ ಸುಲ್ತಾನ ತನ್ನ ದಳಪತಿ ಅಫಜಲ್ ಖಾನನನ್ನು ಶಿವಾಜಿಯ ವಿರುದ್ಧ ಹೋರಾಡಲು ಕಳುಹಿಸಿಕೊಟ್ಟ. ಪ್ರತಾಪಘರದ ಇಳಿಜಾರಿನಲ್ಲಿ ಇಬ್ಬರೂ ಸೇರುವುದೆಂದು ಇತ್ಯರ್ಥವಾಯಿತು. ಶಿವಾಜಿ ಕುಳ್ಳ, ಅಫಜಲ್

ಆಜಾನಬಾಹು. ಇಬ್ಬರೂ ಸ್ನೇಹಿತರಂತೆ ವರ್ತಿಸಲು ಸೇರಿದರೂ ಪರಸ್ಪರ ಕೇಡನ್ನೇ ಬಯಸುತ್ತಿದ್ದರು. ಶಿಷ್ಟಾಚಾರದಂತೆ ಅಪ್ಪಿಕೊಂಡಾಗ ಶಿವಾಜಿಯನ್ನು ತೀರಿಸಿಬಿಡಬಹುದೆಂದು ಅಫ್‌ಜಲ್ ಲೆಕ್ಕಹಾಕಿದ. ಇದಕ್ಕಾಗಿ ತನ್ನ ತೋಳಮರೆಯಲ್ಲಿ ಒಂದು ಖಡ್ಗವನ್ನು ಔತಿಟ್ಟುಕೊಂಡಿದ್ದ. ಇದಕ್ಕೆ ಶಿವಾಜಿ ತಯಾರಾಗಿಯೇ ಬಂದಿದ್ದ. ಉಂಗುರಗಳ ಹಾಗೆ ಕಾಣುತ್ತಿದ್ದ ವ್ಯಾಘ್ರನಖವೆಂಬ ಆಯುಧವನ್ನು ಶಿವಾಜಿ ಧರಿಸಿದ್ದ. ಅಫ್‌ಜಲ್‌ಖಾನ, ಶಿವಾಜಿಯನ್ನು ಬಿಗಿಯಾಗಿ ತನ್ನ ಬಲಿಷ್ಠಬಾಹುಗಳಲ್ಲಿ ಅಪ್ಪಿಹಿಡಿದಾಗ ಶಿವಾಜಿ ತನ್ನ ವ್ಯಾಘ್ರನಖದಿಂದ ಅವನ ಬೆನ್ನನ್ನು ಸೀಳಿಬಿಟ್ಟ.

ಶಿವಾಜಿಯೂ ಅವನ ಮರಾಠರೂ ಔರಂಗಜೇಬನ ಸಾಮ್ರಾಜ್ಯವನ್ನು ತಮ್ಮ ಧಾಳಿಗಳಿಂದ ಮುರಿದುಬಿಟ್ಟರು. ಶಿವಾಜಿ ತೀರಿಕೊಂಡ ಮೇಲೆ ಅವನ ದಳಪತಿಗಳು ಒಂದುಗೂಡಲಿಲ್ಲ. ಪ್ರತಿಯೊಬ್ಬನಿಗೂ ರಾಜ್ಯ ಬೇಕಾಗಿತ್ತು. ಅವರು ಚಕ್ರವರ್ತಿಯೊಂದಿಗೂ ಕಾದಿದರು. ತಮ್ಮತಮ್ಮೊಳಗೂ ಕಾದಿದರು.

ಔರಂಗಜೇಬ ಸಾಯುವವೇಳೆಗೆ ಹಿಂದೂಸ್ಥಾನ ಹರಿದು, ಮುರಿದು, ದುಃಖಪೀಡಿತವಾಗಿತ್ತು.

ಚಿರಕಾಲ ಉಳಿಯುವಂತೆ ಕಾಣುತ್ತಿದ್ದ ಮುಘಲ ಸಾಮ್ರಾಜ್ಯದ ಅಳಿವು ನಮ್ಮನ್ನು ವಿಚಾರಪರವಶರನ್ನಾಗಿ ಮಾಡಬೇಕು. ಕೇವಲ ಇನ್ನೂರೇ ವರ್ಷಗಳ ಕೆಳಗೆ ಬಾಬರನ ಅಶ್ವಾರೋಹಿಗಳ ಕುದುರೆಯ ಖಡಿ ಖಡಿಲ್ ನಾದಕ್ಕೆ ಇಡೀ ಹಿಂದೂಸ್ಥಾನ ನಡುಗಿಹೋಗಿತ್ತು.

ಭೂಮಿತಾಯಿಯ ಮಕ್ಕಳು ಮುಘಲ ಸೈನ್ಯಗಳಿಗೆ ಅಂಜಿ ದಿಕ್ಕಾಪಾಲಾಗಿ ಓಡಿಹೋಗಿದ್ದರು.

ಹಾಗಾದರೆ ಈ ಮಹಾ ಸಾಮ್ರಾಜ್ಯವೇತಕ್ಕೆ ಒಡೆದು ಚೂರು ಚೂರಾಯಿತು?

ಆಸ್ಥಾನಿಕರ ದುರಾಚಾರ ದುರಾಶೆಗಳೇ ಕಾರಣವೆಂದು ಕಂಡುಬರುತ್ತದೆ. ರೈತರು ಕೊಟ್ಟ ಹಣವನ್ನು ಅವರು ಬೇಟೆ, ಹಬ್ಬ, ಬಟ್ಟೆ, ಒಡವೆಗಳಿಗೆ ಖರ್ಚು ಮಾಡುತ್ತಿದ್ದರು. ನಾಲೆ ತೋಡಿಸುವುದಕ್ಕೆ, ರಸ್ತೆ ಮಾಡಿಸುವುದಕ್ಕೆ, ಜನಗಳಿಗೆ ನೆಮ್ಮದಿಯನ್ನುಂಟುಮಾಡುವುದಕ್ಕೆ ದೊರೆ ಹೆಚ್ಚು ಹಣ ವ್ಯಯಮಾಡುತ್ತಿರಲಿಲ್ಲ. ಚಕ್ರವರ್ತಿಯ ವಿರುದ್ಧ ರೈತರನ್ನು ಹುರಿಮುಂಬಿಸಿ ಯಾವ ಚಿಕ್ಕ ರಾಜನಾದರೂ ಒಂದು ರಾಜ್ಯವನ್ನು ಕಟ್ಟಬಹುದಾಗಿತ್ತು.

ಹೀಗಾಗಿ ಚಕ್ರಾಧಿಪತ್ಯ ಒಡೆದು ಚೂರಾಯಿತು.

## ಪರಂಗಿಯವರು

ಅವರಂಗಜೀಬನಾನಂತರ ಒಂದೂವರೆ ಶತಮಾನಕಾಲ ಹಿಂದೂಸ್ಥಾನ ಕ್ಷಾಮ, ಯುದ್ಧ, ದರೋಡೆ, ಮತ್ತು ಭಯಂಕರ ವಿಪ್ಲವಕ್ಕೆ ತುತ್ತಾಯಿತು. ರಾಜರೂ ಸುಲ್ತಾನರೂ ಜಗಳವಾಡತೊಡಗಿದರು. ಎಂದಿನಂತೆ ಹೊರಗಿನ ಧಾಳಿಕಾರರಿಗೆ ಹಿಂದೂಸ್ಥಾನದ ದುರ್ಬಲ ಪರಿಸ್ಥಿತಿ ಹಬ್ಬವಾಯಿತು. ಪರ್ಶಿಯಾದ ದೊರೆ ನಾದಿರಷಹಾ ಸಾವಿರದ ಏಳುನೂರ ಮೂವತ್ತೊಂಭತ್ತರಲ್ಲಿ ದೆಹಲಿಗೆ ಮುತ್ತಿಗೆ ಹಾಕಿ ಅನರ್ಘ್ಯ ರತ್ನರಾಶಿಯನ್ನೂ ಮಯೂರ ಸಿಂಹಾಸನವನ್ನೂ ಹೊತ್ತುಕೊಂಡು ಹೋದ.

ಇಷ್ಟಾದರೂ ರಾಜರಿಗೂ, ಸುಲ್ತಾನರಿಗೂ ಬುದ್ಧಿ ಬರಲಿಲ್ಲ. ಅವರು ಬಡಿದಾಡುತ್ತಲೇ ಇದ್ದರು. ಫರಂಗಿಯವರು—ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟಿಷರು ಹೋರಾಟಗಾರರಿಗೆ ನೆರವು ನೀಡುತ್ತಿದ್ದರು. ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭವೆಂಬುದೇ ಅವರ ನೀತಿಯಾಗಿತ್ತು. ಅವರಿಗೆ ಅಧಿಕಾರ ಬೇಕಾಗಿತ್ತು, ಅದಕ್ಕಾಗಿ ಒಬ್ಬ ದೊರೆಯನ್ನು ಇನ್ನೊಬ್ಬನ ಮೇಲೆ ಎತ್ತಿಕಟ್ಟು ತ್ತಿದ್ದರು.

ಪೋರ್ಚುಗೀಸರ ನೌಕಾದಳಪತಿ ವಾಸ್ಕೋಡಿಗಾಮ ಹಿಂದೂಸ್ಥಾನಕ್ಕೆ ಸಮುದ್ರದ ಮೂಲಕ ಬರುವ ದಾರಿಯನ್ನು ಮೊದಲನೆಯ ಸಾರಿ ಕಂಡುಹಿಡಿದ. ಗುಡ್ ಹೋಪ್ ದ್ವೀಪವನ್ನು ಬಳಸಿ ಕೊಂಡು ಅವನು ಸಾವಿರದ ನಾನೂರ ತೊಂಭತ್ತೆಂಟರಲ್ಲಿ ಕಲ್ಲಿಕೋಟೆಗೆ ಬಂದಿಳಿದ. ಇತರ ಪರಂಗಿ ಯವರಿಗೂ ಪೋರ್ಚುಗೀಸರಿಗೂ ಆದ ಜಗಳದಲ್ಲಿ ಪೋರ್ಚುಗೀಸರಿಗೆ ಜಯಲಾಭ ದೊರೆಯದೆ ಅವರು ಗೋವಾ ಮತ್ತು ಇನ್ನೂ ಕೆಲವು ನಗರಗಳನ್ನಿಟ್ಟುಕೊಂಡು ಯುದ್ಧದ ಗೊಡವೆಯನ್ನೇ ಬಿಟ್ಟರು. ಇಂದಿಗೂ ಆ ನಗರಗಳು ಅವರ ಕೈವಶದಲ್ಲಿವೆ.

ಇಂಗ್ಲಿಷರು ಹೆಚ್ಚು ಜಯಶಾಲಿಗಳಾದರು. ಜಾನ್ ಕಂಪೆನಿಯೆಂದು ಹೆಸರು ಪಡೆದಿದ್ದ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಬೇಕಾದಷ್ಟು ಹಣವಿತ್ತು, ಪ್ರಭಾವವೂ ಇತ್ತು. ಅವರ ಮುಖ್ಯ ನಾಯಕ ರಾಬರ್ಟ್ ಕ್ಲೈವ್. ಅವನು ಮೊದಲು ಜಾನ್ ಕಂಪೆನಿಯ ಗುಮಾಸ್ತನಾಗಿದ್ದ. ಗುಮಾಸ್ತೆಗಿರಿ ಯನ್ನು ಬಿಟ್ಟು ಸಾಹಸಪ್ರಿಯ ಸೈನಿಕನಾಗಿ ಹೊರಟ.



ಅರ್ಕಾಟಿನ ಬಳಿ : ಫ್ರೆಂಚರನ್ನೆದುರಿಸುವುದೆಂದು ಒಂದು ದಿನ ಕ್ಲೈವ್ ನಿರ್ಧರಿಸಿದ. ಐವತ್ತುಮೂರು ದಿವಸಗಳಲ್ಲಿ ಅದನ್ನು ಹಿಡಿದ. ಅಲ್ಲಿಂದ ಫ್ರೆಂಚರಿಗೂ ಬ್ರಿಟಿಷರಿಗೂ ಏಳು ವರ್ಷಕಾಲ ಯುದ್ಧ ಪ್ರಾಪ್ತ ವಾಯಿತು. ಡೂಪ್ಲೆಯನ್ನು ಸೈನ್ಯಾಧಿಕಾರಿಯನ್ನಾಗಿ ಪಡೆ ದಿದ್ದ ಫ್ರೆಂಚರಿಗೆ ಕೊನೆಗೆ ಸೋಲಾಯಿತು. ಈ ಸೋಲಿ ನೊಂದಿಗೆ ಹಿಂದೂಸ್ಥಾನದಲ್ಲಿ ಫ್ರೆಂಚರ ಪ್ರಾಬಲ್ಯ ಕೊನೆ ಗಂಡಿತು.

ಇದಾದ ಮೇಲೆ ಜಾನ್ ಕಂಪೆನಿ ಹಿಂದೂಸ್ಥಾನದ ದೊರೆಗಳ ಮೇಲೆ ಪಿತೂರಿ ಮಾಡಲಾರಂಭಿಸಿತು.

ಬಂಗಾಳದಲ್ಲಿ ಮುಘಲ ಪ್ರತಿನಿಧಿಯಾಗಿದ್ದ ಸಿರಾ ಜುದ್ದೌಲನಿಗೆ ಕಂಪೆನಿಯ ಅಧಿಕಾರಗಳ ವರ್ತನೆ ಸರಿ ಬೀಳುತ್ತಿರಲಿಲ್ಲ. ಜನರನ್ನು ಅವರು ಹೆದರಿಸಿ ಬೆದರಿಸು ತ್ತಿದ್ದುದು ಅವನಿಗೆ ಬೇಸರವನ್ನುಂಟುಮಾಡಿತ್ತು. ಅವನು ಕಲ್ಕತ್ತೆಯ ಇಂಗ್ಲಿಷ್ ಬಂದರಿಗೆ ಮುತ್ತಿಗೆ ಹಾಕಿದ.

ಅವನು ತನ್ನ ಇಂಗ್ಲಿಷ್ ಶತ್ರುಗಳನ್ನು ಒಂದು ಕತ್ತಲೆ ಕೋಣೆಯಲ್ಲಿ ಸೆರೆ ಹಾಕಿದುದನ್ನು ಇಂಗ್ಲಿಷರು ಇನ್ನೂ ಮರೆತಿಲ್ಲ. ಅಲ್ಲಿ ಅವರು ಸೆಕೆಯನ್ನು ತಾಳಲಾರದೆ ಸತ್ತರೆಂದು ಇಂಗ್ಲಿಷರು ಪ್ರಸಾರಮಾಡಿದರು. ತಮ್ಮ ಪತ್ರ್ಯಪುಸ್ತಕಗಳಲ್ಲಿ ಅದನ್ನು 'ಕಲ್ಕತ್ತೆಯ ಕತ್ತಲೆಕೋಣೆ' ಎಂದು ಕರೆದರು. ಕಂಪೆನಿಯ ಕಾರಾಗೃಹಗಳಲ್ಲಿಯೇ ಅವರನ್ನು ಸಿರಾಜುದ್ದೌಲ ಸೆರೆಹಾಕಿದ್ದ. ಅಲ್ಲಿ ಕೆಲವರು ಉಸಿರು ಕಟ್ಟಿಕೊಂಡು ಸತ್ತದ್ದೂ ನಿಜ. ಆದರೆ ಸಂಖ್ಯೆಯನ್ನು ಇಂಗ್ಲಿಷರು ಯದ್ವಾತದ್ವಾ ಉತ್ಪ್ರೇಕ್ಷೆ ಮಾಡಿದರು. ಕಲ್ಕತ್ತೆಯ ಕತ್ತಲೆ ಕೋಣೆಯ ಸ್ತಂಭವನ್ನು ತೆಗೆದು ಹಾಕಿಸಲು ಮೊನ್ನೆ ಮೊನ್ನೆ ನೇತಾಜಿ ಸುಭಾಷ್ ಬೋಸರು ಬಹುವಾಗಿ ಪ್ರಯತ್ನಿಸಿದರು.

ಹಿಂದೂಸ್ಥಾನದಲ್ಲಿ ಬ್ರಿಟಿಷರ ಪ್ರಾಬಲ್ಯ ಪರಾಕಾಷ್ಠದೆಸೆ ಮುಟ್ಟಲು ನೆರವಾದವರು ಇಬ್ಬರು ಇಂಗ್ಲಿಷರು—ಕ್ಲೈವ್, ಮತ್ತು ವಾರನ್ ಹೇಸ್ಟಿಂಗ್ಸ್.

ಕಲ್ಕತ್ತೆಗೆ ಸಿರಾಜುದ್ದೌಲ ಮುತ್ತಿಗೆ ಹಾಕಿದ ಮೇಲೆ ಕ್ಲೈವ್ ಬಂಗಾಳದಲ್ಲಿ ಒಂದು ಸೈನ್ಯ ಕೂಡಿಸಿ ಪ್ಲಾಸೀ ಕದನದಲ್ಲಿ ಅವನನ್ನು ಸೋಲಿಸಿಬಿಟ್ಟ. ಇದೇ ಕಾಲಕ್ಕೆ ಹೇಸ್ಟಿಂಗ್ಸನ ಆಗಮನವಾಯಿತು. ಅವನು ಸಿರಾಜುದ್ದೌಲನ ಒಬ್ಬ ದಳಪತಿ ಮೀರ್ ಜಾಫರನಿಗೆ ಲಂಚಕೊಟ್ಟು ತಮ್ಮ ಕಡೆ ಎಳೆದುಕೊಂಡ. ಈ ವಿಶ್ವಾಸಘಾತುಕತನಕ್ಕೆ ಪ್ರತಿಫಲವಾಗಿ ಮೀರ್ ಜಾಫರನಿಗೆ ಬಂಗಾಳದ ನವಾಬಗಿರಿಯನ್ನು ಹೇಸ್ಟಿಂಗ್ಸ್ ಕೊಟ್ಟ.

ಬೇಕಾದಷ್ಟು ಲಂಚ ಹೊಡೆದು, ಅನ್ಯಾಯವಾಗಿ ಲಕ್ಷಾಂತರ ರೂಪಾಯಿ ಸಂಪಾದಿಸಿ ಕ್ಲೈವ್

ಮೂವತ್ತೈದನೆಯ ವಯಸ್ಸಿನಲ್ಲಿ ಕೆಲಸದಿಂದ ನಿವೃತ್ತನಾದ. ಅವನ ಸ್ಥಾನಕ್ಕೆ ಹೇಸ್ಟಿಂಗ್ಸ್ ಬಂದ.

ಹೇಸ್ಟಿಂಗ್ಸ್ ವಿದ್ಯಾವಂತನಾಗಿದ್ದ. ಪುಸ್ತಕಗಳನ್ನು ಕಂಡರೆ ಅವನಿಗೆ ವಿಶ್ವಾಸ. ಹಾಗೆ ಪಿತೂರಿ ಮಾಡುವುದಕ್ಕೂ ವಿಶ್ವಾಸ. ಕಂಪೆನಿಗೆ ಬೇಕಾದಷ್ಟು ಹಣ ಸಂಗ್ರಹಿಸಿಕೊಟ್ಟ. ಹಿಂದೂಸ್ಥಾನದ ರಾಜರನ್ನು ಬೆದರಿಸಿ ತಾನೂ ವಿಶೇಷ ಲಂಚಹೊಡೆದ. ಹಿಂದೂಸ್ಥಾನ ಬಹಳ ಸಂಪದ್ಭರಿತವಾದ ದೇಶವೆಂಬ ಭಾವನೆ ಇಂಗ್ಲಿಷರಲ್ಲಿ ಬೇರೂರಿತ್ತು. ಅವರು ಹಿಂದೂಸ್ಥಾನದ ಸಂಪತ್ತನ್ನು ಸೂರೆಹೊಡೆಯಲು ಹಿಂದೆಮುಂದೆ ನೋಡಲಿಲ್ಲ.



ಕೆಲವು ದೂರದರ್ಶಿಗಳಾದ ಇಂಗ್ಲಿಷರು ಜಾನ್ ಕಂಪೆನಿಯ ದುರ್ನಡತೆಗಳನ್ನು ಖಂಡಿಸಿದರು.

ಏಳುವರ್ಷಕಾಲ ತಡೆಯಿಲ್ಲದೆ ವಾರೆನ್ ಹೇಸ್ಟಿಂಗ್ಸ್ ಹಿಂದೂಸ್ಥಾನದಲ್ಲಿ ನಡೆಸಿದ ಅತ್ಯಾಚಾರಗಳಿಗೆ ಬ್ರಿಟಿಷ್ ಪಾರ್ಲಿಮೆಂಟ್ ಕೂಡ ವಿಚಾರಣೆ ನಡೆಸಬೇಕಾಗಿ ಬಂತು.

ಮೊದಲು ಇಂಗ್ಲೀಷರು ಬಂದುದು ನಮ್ಮ ನವರು ಬಟ್ಟೆ, ಹತ್ತಿ ಬಟ್ಟೆಗಳನ್ನು ಕೊಂಡುಕೊಳ್ಳುವುದಕ್ಕೆ. ಇಂಗ್ಲೆಂಡಿನ ಮ್ಯಾಂಚೆಸ್ಟರ್, ಲ್ಯಾಂಕಷೈರು ಪಟ್ಟಣಗಳಲ್ಲಿ ಅವರದೇ ಮಿಲ್ಲುಗಳಿದ್ದವು. ನಮ್ಮ ಕಚ್ಚಾ ಹತ್ತಿಯನ್ನು ಕೊಂಡು ಅದನ್ನು ತಮ್ಮ

ಗಿರಣಿಗಳಲ್ಲಿ ಬಟ್ಟೆಮಾಡಿ ನಮಗೇ ಮಾರಲೆತ್ನಿಸಿದರು. ಈ ಮೂಲಕ ಹಿಂದೂಸ್ಥಾನದ ಕೈಗಾರಿಕೆಗಳನ್ನು ನಾಶಪಡಿಸಲೆತ್ನಿಸಿದರು.

ಜಾನ್ ಕಂಪೆನಿ ಹೆಚ್ಚು ಹೆಚ್ಚು ರಾಜ್ಯಗಳನ್ನು ಸಂಗ್ರಹಿಸತೊಡಗಿತು. ಅನೇಕ ಭಾರತೀಯರಿಗೆ ಜಮೀನುಗಳನ್ನೂ ಬಿರುದುಗಳನ್ನೂ ಲಂಚವಾಗಿ ಕೊಟ್ಟು ಅವರ ನೀತಿಯನ್ನು ನಾಶಗೊಳಿಸಿತು. ನಮ್ಮ ರೈತರು ಕೂಲಿಗಳಾಗಿ ದುಡಿಯಲಾರಂಭಿಸಿದರು. ರೈತರು ಬಡವರಾದರೂ ಸ್ವತಂತ್ರರಾಗಿದ್ದುದೂ ಅವರ ಉಪಯೋಗಕ್ಕೆ ಬೇಕಾದಷ್ಟು ಭೂಮಿ ಸಿಕ್ಕುತ್ತಿದ್ದುದೂ ನಿಮ್ಮ ನೆನಪಿನಲ್ಲಿರಬಹುದು. ಸುಖವಾದ ಆ ಕಾಲ ಹೋಯಿತು.

ನಮ್ಮ ನೇಕಾರರು ಜಗತ್ತಿನಲ್ಲಿಯೇ ಹೆಸರು ಪಡೆದ ನವರು ಬಟ್ಟೆಯನ್ನು ನೇಯುತ್ತಿದ್ದರು. ಇಂಗ್ಲೆಂಡಿನಿಂದ ಮಿಲ್ ಬಟ್ಟೆ ಬರಲಾರಂಭವಾಗಿ ಅವರು ದಿವಾಳಿ ತೆಗೆಯಬೇಕಾಯಿತು. ಅನೇಕ ಕ್ಷಾಮಗಳು ತಲೆತೋರಿದವು. ಸಾವಿರದೇಳುನೂರ ಎಪ್ಪತ್ತರಲ್ಲಿ ಬಂದ ಕ್ಷಾಮ ಬಹಳ ಘೋರವಾದುದು. ಕೋಟ್ಯಾಂತರ ಜನ ಹಸಿವಿನಿಂದ ಸತ್ತರು. ಸೊಗಸಾದ ನವಿರು ಬಟ್ಟೆ ಮಾಡುತ್ತಿದ್ದ ಡಾಕಾದ ಜನಸಂಖ್ಯೆ ಹತ್ತೇ ವರ್ಷಗಳಲ್ಲಿ ಒಂದೂವರೆ ಲಕ್ಷದಿಂದ ಇಪ್ಪತ್ತು ಸಾವಿರಕ್ಕಿಳಿಯಿತು.

ಸಾವಿರಾರು ವರ್ಷಗಳಿಂದ ಸಮುದ್ರದ ಮೇಲೆ ಹೋಗುತ್ತಿದ್ದ ನಮ್ಮ ಹಡಗುಗಳು ನಿರ್ನಾಮವಾದವು. ನಮ್ಮ ಸಮುದ್ರಗಳ ಮೇಲೆ ಇಂಗ್ಲಿಷರ ಹಡಗುಗಳ ಓಡಾಟ ಆರಂಭವಾಯಿತು.

ಇಂಗ್ಲಿಷರು ಭಾರತದ ರಕ್ತ ಹೀರಿದರು.

ಈ ಮಧ್ಯೆ ಜಾನ್ ಕಂಪೆನಿ ಭೇದೋಪಾಯವನ್ನನುಸರಿಸಿ ರಾಜರನ್ನೂ ಸುಲ್ತಾನರನ್ನೂ ಕಚ್ಚಾಡುವುದಕ್ಕೆ ಬಿಟ್ಟು ಅವರನ್ನು ತುಳಿಯುತ್ತ ಬಂತು. ಮರಾಟಾದೊರೆಗಳು, ಹೈದರ್ ಅಲ್ಲಿ, ಟಿಪ್ಪುಸುಲ್ತಾನ, ಪಿಂಡಾರಿಗಳು, ಆಫ್ ಘನ್ನರು, ರಣಜಿತ ಸಿಂಹನ ವಂಶಜರು ವಿದೇಶೀಯರ ಕ್ರೌರ್ಯಕ್ಕೆ ಬಲಿಯಾದರು.

## ಸ್ವಾತಂತ್ರ್ಯ ಸಮರ (ಕ್ರಿ. ಶ. ೧೮೫೭)

ರಾಜರಿಗೂ ಸುಲ್ತಾನರಿಗೂ ಆದ ಪರಾಜಯ ದೇಶವನ್ನು ಸಂಪೂರ್ಣವಾಗಿ ಅಣಗಿಸಲಿಲ್ಲ. ಬಹಳ ಕಾಲದಿಂದ ತೊಂದರೆಗೀಡಾಗಿ ನರಳುತ್ತಿದ್ದ ಜನ ಬ್ರಿಟಿಷರ ವಿರುದ್ಧ ದಂಗೆಯೆದ್ದರು.

ದೆಹಲಿಯ ಚಕ್ರವರ್ತಿ ಕವಿ ಬಹದೂರ್ ಷಾ ಯುದ್ಧದ ನಾಯಕತ್ವ ವಹಿಸಿದ್ದ. ಕಂಪೆನಿಯ ಭಾರತೀಯ ಸಿಪಾಯಿಗಳ ಮಧ್ಯೆ ದಂಗೆ ಮೊದಲು ಹೊಗೆಯಾಡಿತು. ವಿದೇಶೀಯರೊಂದಿಗೆ ಕಾದಲು ಹಿಂದೂ ಮುಸಲ್ಮಾನರು ಒಂದಾಗಿ ಮುನ್ನುಗ್ಗಿದರು.

ತನ್ನ ಸೈನ್ಯದ ಮುಂದೆ ಕತ್ತಿ ಹಿರಿದು ಯುದ್ಧಕ್ಕೆ ಹೊರಟ ವೀರರಮಣಿ ರಾಣಿ ಜಾನ್ಸಿ ಲಕ್ಷ್ಮೀಬಾಯಿಯ ಪರಾಕ್ರಮವನ್ನು ಇಂದಿಗೂ ಮನೆಮನೆಯಲ್ಲಿ ಹಾಡಿ ಹೊಗಳುತ್ತಾರೆ. 'ಆಕೆ ಮಹಾಧೈರ್ಯಶಾಲಿ ಮತ್ತು ದಂಗೆಗಾರರ ಪಕ್ಷದಲ್ಲಿ ಪುರುಷೋತ್ತಮಳು' ಎಂದು ಸರ್ ಹ್ಯೂರೋಸ್ ಎಂಬ ಇಂಗ್ಲಿಷಿನವನೇ ಹೇಳಿದ್ದಾನೆ.

ದೆಹಲಿ, ಕಾನ್‌ಪುರ, ರೋಹಿಲ ಖಂಡ ಮತ್ತಿತರ ಸ್ಥಳಗಳಲ್ಲಿ ಸಿಪಾಯಿಗಳೂ ಜನರೂ ಕೂಡಿ ಬ್ರಿಟಿಷರೊಂದಿಗೆ ಕಾದಿದರು. ಕೆಲವು ಕಡೆ ಅವರಿಗೆ ಜಯ ಲಾಭವೂ ಲಭಿಸಿತು. ಕೆಲವು ರಾಜರು ದೇಶೀಯ ಪಕ್ಷದಲ್ಲಿದ್ದರೂ ಅನೇಕ ಮಂದಿ ಶತ್ರುವನ್ನಾಶ್ರಯಿಸಿದ್ದರು. ದೇಶೀಯರೊಂದಿಗಿದ್ದವರು ಅಷ್ಟು ಬಲಿಷ್ಠರಾಗಿರಲಿಲ್ಲ. ಯುದ್ಧಕ್ಕೆ ಸರಿಯಾದ ರೀತಿ ವ್ಯವಸ್ಥೆ ಮಾಡು



ವುದರ ಬದಲು ಕೆಲವರು ಅಲ್ಲಿಇಲ್ಲಿ ಸಿಕ್ಕಿದ ಒಬ್ಬೊಬ್ಬ ಇಂಗ್ಲಿಷಿನವನನ್ನು ಕೊಂದು ತೃಪ್ತರಾದರು.

ಹೃದಯವಿದ್ರಾವಕ ಹಾಡುಗಳಿಂದ ಬಹದೂರ್ ಷಾ ಜನರನ್ನು ಹುರಿದುಂಬಿಸಿದ. ಆದರೆ ಅವನು ದುರ್ಬಲ ಆಡಳಿತಗಾರ. ಸಿಂಹಾಸನಕ್ಕೆ ಬಂದ ಕೂಡಲೇ ಇದ್ದ ಅಧಿಕಾರವನ್ನೂ ನೀಗಿಕೊಂಡ. ಈ

ಯುದ್ಧದಿಂದ ಒಂದು ಉಪಕಾರವಾಯಿತು. ಹಿಂದೂ-ಮುಸ್ಲಿಮರಲ್ಲಿ ಪುನಃ ಸಖ್ಯ ಬೆಳೆಯಿತು. ಇಬ್ಬರೂ ಒಂದೇ ಬಟ್ಟಲಿನಿಂದ ನೀರು ಕುಡಿಯುತ್ತಿದ್ದರು.



ಅನೇಕ ವೀರಕದನಗಳಾದರೂ ಸ್ವಾತಂತ್ರ್ಯ ಸಮರದಲ್ಲಿ ಭಾರತೀಯರಿಗೆ ಸೋಲಾಯಿತು. ಬಹದೂರ್ ಷಾನನ್ನು ಸೆರೆಹಿಡಿದು, ಬರ್ಮಾ ದೇಶಕ್ಕೆ ಸಾಗಿಸಿದರು.

ಅವನಿಗೆ ಸೆರೆಮನೆಯಲ್ಲಿ ಬರೆಯಲು ಕಾಗದ ಮಸಿಯನ್ನೂ ಕೊಡುತ್ತಿರಲಿಲ್ಲ. ಇದ್ದಿಲಿನಿಂದ ಗೋಡೆಗಳ ಮೇಲೆ ಬಹದೂರ್ ಷಾ ಬರೆಯುತ್ತಿದ್ದ. ದುಃಖದಿಂದ ಅವನು ಕಂಗೆಟ್ಟಿದ್ದ. ಅವನು ತನ್ನ ದುಃಖವನ್ನು ಈ ರೀತಿ ವ್ಯಕ್ತಪಡಿಸಿದ್ದಾನೆ:

'ನಾನು ಯಾರ ಕಣ್ಣ ಬೆಳಕೂ ಅಲ್ಲ.
ನಾನು ಯಾರ ಹೃದಯದ ನಲ್ಲನೂ ಅಲ್ಲ.

ಯಾರಿಗೂ ಪ್ರಯೋಜನವಿಲ್ಲದ
ಒಂದು ಹಿಡಿ ಧೂಳು ನಾನು.'

ಹಳೆಯ ರಾಜಧಾನಿ ಪರಿತ್ಯಾಜ್ಯವಾಯಿತು. ಬಹದೂರ್‌ಷಾನ ಮಾತಿನಲ್ಲಿ:

'ದೆಹಲಿ ಒಂದು ಕಾಲದಲ್ಲಿ ಸ್ವರ್ಗವಾಗಿತ್ತು
ಅಲ್ಲಿದ್ದ ಸುಖ ಸಂತೋಷಗಳಿಗೆ ಮಿಗಿಲಿಲ್ಲ.
ಈ ಶಾಂತಿವಧುವನ್ನು ಅವರು ಕೆಡಿಸಿದ್ದಾರೆ.
ಈಗುಳಿದಿರುವುದೇನು ? ನಾಶ ಮತ್ತು ದುಃಖ.'

ಜನರ ಬಗ್ಗೆ ಬ್ರಿಟಿಷರು ಬಹಳ ಕ್ರೂರವರ್ತನೆ ತೋರಿಸಿದರು. ಅಲ್ಹಾಬಾದು ಒಂದರಲ್ಲೇ ಎಪ್ಪತ್ತೇಳು ಸಾವಿರ ಜನರು—ಗಂಡಸರು, ಹೆಂಗಸರು, ಮಕ್ಕಳನ್ನು ಕೊಲೆ ಮಾಡಿಸಿದರು. ಫೀಲ್ಡ್ ಮಾರ್ಷಲ್ ರಾಬರ್ಟ್ಸ್ ಆದ ಲೆಫ್ಟಿನೆಂಟ್ ರಾಬರ್ಟ್ಸ್ 'ತಾನು ಎಷ್ಟು ಜನ ದೇಶೀಯರನ್ನು ತೋಪಿನ ಬಾಯಿಗೆ ಕಟ್ಟಿಸಿ ಸುಡಿಸಿದ'ನೆನ್ನುವುದನ್ನು ತನ್ನ ತಾಯಿಗೆ ಬರೆದಿದ್ದಾನೆ. ಹೊಸ ಹೊಸ ರೀತಿಯಲ್ಲಿ ತಾನು ಜನಗಳನ್ನು ಕೊಂದ ಬಗೆಯನ್ನು ವರ್ಣಿಸಿ ಇನ್ನೊಬ್ಬ ಜಂಬ ಕೊಚ್ಚಿಕೊಂಡಿದ್ದಾನೆ. ಜನರ ಶಿಖಿಯನ್ನು ಮಾವಿನ ಮರಕ್ಕೆ ಕಟ್ಟಿಸಿ ಅವರು ಸಾಯಲು ಬಿಡುತ್ತಿದ್ದುದನ್ನು ಅವನು ವರ್ಣಿಸಿದ್ದಾನೆ. ಇನ್ನು ಕೆಲವರನ್ನು ಆನೆಗಳ ಕೆಳಗೆ ಹಾಕಿ ತುಳಿಸಿದ್ದನ್ನು ಅವನೇ ಚಿತ್ರಿಸಿದ್ದಾನೆ.

# ರಾಣಿ ವಿಕ್ಟೋರಿಯಾ

ಈ ರಾಕ್ಷಸೀ ಘಟನೆಗಳಾದ ಮೇಲೆ ಬ್ರಿಟಿಷರು ನಮ್ಮನ್ನು ಸ್ವಲ್ಪ ಉತ್ತಮವಾಗಿ ಆಳಲೆತ್ನಿಸಿದರು. ಈಸ್ಟ್ ಇಂಡಿಯಾ ಕಂಪೆನಿಯ ಕೈಯಿಂದ ಬ್ರಿಟಿಷ್ ಪಾರ್ಲಿಮೆಂಟ್ ಹಿಂದೂಸ್ಥಾನವನ್ನು ಕಿತ್ತುಕೊಂಡಿತು. ವಿಕ್ಟೋರಿಯಾ ರಾಣಿ ಒಂದು ಭವ್ಯ ಭಾಷಣ ಮಾಡಿದಳು. ಈ ಭಾಷಣದಲ್ಲಿ ಜನರ ಪರಿಸ್ಥಿತಿ ಸುಧಾರಿಸುವುದಾಗಿ ವಾಗ್ದಾನ ಮಾಡಿದಳು. ರಾಜರ ಆಧಿಪತ್ಯವನ್ನು ಅವರ ರಾಜ್ಯಗಳ ಮೇಲೆ ಅಂಗೀಕರಿಸಿದಳು. ಆದರೆ ಅವರು ರಾಜಭಕ್ತಿಯುತರಾಗಿದ್ದು ಬ್ರಿಟಿಷರು ಹೇಳಿದಂತೆ ಕೇಳಬೇಕೆಂಬ ಕರಾರು ಸೇರಿಕೊಂಡಿತ್ತು. ಹಿಂದೂಸ್ಥಾನದಲ್ಲಿದ್ದ ಬ್ರಿಟಿಷರು ವಿಕ್ಟೋರಿಯಾ ಮಾಡಿದ ವಾಗ್ದಾನವನ್ನೆಲ್ಲಾ ಸಂಪೂರ್ಣವಾಗಿ ಮರೆತುಬಿಟ್ಟರು.

ಬ್ರಿಟಿಷರಲ್ಲಿ ಕೆಲವರು ಸ್ವಲ್ಪ ಯೋಗ್ಯರಾಗಿದ್ದರೂ ಹೆಚ್ಚು ಮಂದಿ 'ಬಡಾ ಸಾಹೇಬ'ರಂತೆ ವರ್ತಿಸುತ್ತಿದ್ದರು. ನಮ್ಮನ್ನು 'ಕರಿ ದೇಶೀಯರು' ಎಂದು ತಿರಸ್ಕಾರದಿಂದ ಕರೆದು ಒದೆಯುತ್ತಿದ್ದರು. ಜನರ ಸಂಪರ್ಕವಿಲ್ಲದಂತೆ ದೂರ ದೊಡ್ಡ ಬಂಗಲೆಗಳಲ್ಲಿ ವಾಸಮಾಡುತ್ತಿದ್ದರು. ಅವರ ಕ್ಲಬ್ಬುಗಳ ಬಾಗಿಲುಗಳಲ್ಲಿ ಮುಖ ತಗ್ಗಿಸುವಂಥ ಪ್ರಕಟನೆಗಳು—'ಭಾರತೀಯರಿಗೂ, ನಾಯಿಗಳಿಗೂ ಒಳಗೆ ಪ್ರವೇಶವಿಲ್ಲ.'

ಇಲ್ಲಿ ಹಣಮಾಡಿ, ಅದನ್ನು ಖರ್ಚುಮಾಡಲು ಇಂಗ್ಲೆಂಡಿಗೆ ಒಯ್ಯುತ್ತಿದ್ದರು.

ಹಿಂದೆ ಬಂದಿದ್ದ ವಿದೇಶೀ ವ್ಯಾಪಾರಿಗಳು ಹಿಂದೂಸ್ಥಾನದ ಪ್ರಜೆಗಳಂತೆ ಬಾಳಲೆತ್ನಿಸಿದ್ದರು. ಆದರೆ ಇಂಗ್ಲಿಷರ ರೀತಿಯೇ ಬೇರೆ.

ಇಂಗ್ಲಿಷರು ಎಂದಿಗೂ ನಮ್ಮೊಂದಿಗೆ ಬೆರೆಯಲಿಲ್ಲ—ನಮ್ಮವರಾಗಲಿಲ್ಲ.

## ಬ್ರಿಟಿಷರ ಆಡಳಿತ

ಬ್ರಿಟಿಷರಿಗೆ ಹಿಂದೂಸ್ಥಾನದ ವಿಷಯ ಹೆಚ್ಚು ಗೊತ್ತಿರಲಿಲ್ಲ. ಹಿಂದೂಸ್ಥಾನವನ್ನು ಇನ್ನೊಂದು ಇಂಗ್ಲೆಂಡ್ ಮಾಡಲು ಅವರೆತ್ನಿಸಿದರು. ಹೊಸ ಭೂಮಿ ಪದ್ಧತಿಯನ್ನಾರಂಭಿಸಿ ಭೂಮಿಯ ಒಡೆತನವನ್ನು ಜಮಿನುದಾರರಿಗೂ, ರೈತಮಾಲಿಕರಿಗೂ ಹಂಚಿದರು. ಈ ಮೊದಲು ಭೂಮಿಯ ಒಡೆತನ ಯಾರಿಗೂ ಇದ್ದಿಲ್ಲ. ಎಲ್ಲರಿಗೂ ಭೂಮಿಯನ್ನು ಉತ್ತು ಬಿತ್ತು ಬೆಳಸು ತೆಗೆಯುವ ಅಧಿಕಾರ ವಿತ್ತು. ತಮ್ಮ ಫ್ಯೂಡಲ್ ಸ್ವಾಮಿತ್ವದ ಬಗೆಯನ್ನು ಹಿಂದೂಸ್ಥಾನದಲ್ಲಿಯೂ ನಿರ್ಮಿಸಿದರು.

ರೈತರಿಗೆ ಸಾಲ ಹೆಚ್ಚಿ ಅವರು ಜಮೀನುಗಳನ್ನು ಮಾರಿಕೊಂಡರು. ಅವರಿಗೆ ಮಾಡಲು ಕೆಲಸವಿಲ್ಲ. ಹಿಂದೂಸ್ಥಾನದಲ್ಲಿ ಹೆಚ್ಚು ಕಾರ್ಖಾನೆಗಳನ್ನು ಕಟ್ಟುವುದಕ್ಕೆ ಇಂಗ್ಲಿಷರಿಗೆ ಬೇಕಿಲ್ಲ. ಇಲ್ಲಿ ಕಾರ್ಖಾನೆ ಗಳನ್ನು ಸ್ಥಾಪಿಸಿದರೆ ಇಂಗ್ಲೆಂಡಿನಲ್ಲಿದ್ದ ಗಿರಣಿಗಳಿಗೆ ಬರುತ್ತಿದ್ದ ಹಣ ಹೋಗುತ್ತಿತ್ತು. ತಮ್ಮ ಜನ ಕಷ್ಟಕ್ಕೀಡಾಗುತ್ತಿದ್ದರು. ಇದಕ್ಕೂ ಹೆಚ್ಚಿನ ಕಾರಣವೆಂದರೆ ನಮ್ಮನ್ನು ದಟ್ಟದಾರಿದ್ರ್ಯದಲ್ಲಿಟ್ಟು ನಾವು ದಂಗೆಯೇಳದಂತೆ ದುರ್ಬಲರನ್ನಾಗಿ ಮಾಡುವುದಾಗಿತ್ತು. ಕೋಟ್ಯಾಂತರ ಜನ ನಿರುದ್ಯೋಗಿಗಳಾದರು.

ಐವತ್ತು ವರ್ಷಗಳಲ್ಲಿ ಇಪ್ಪತ್ತೆರಡು ಕ್ಷಾಮಗಳು ತಲೆದೋರಿದವು. ಎರಡು ವರ್ಷಕ್ಕೆ ಒಂದರಂತೆ ಕ್ಷಾಮ!

ಪರಿಸ್ಥಿತಿ ದಿನೇ ದಿನೇ ಹದಗೆಡುತ್ತ ಬಂತು. ಹಿಂದೂಸ್ಥಾನ ಜಗತ್ತಿನಲ್ಲಿಯೇ ಅತ್ಯಂತ ನಿರ್ಭಾಗ್ಯ ದೇಶವಾಗುತ್ತ ಬಂತು. ಹುಟ್ಟಿದಾಗಲೇ ಸಾವಿರಕ್ಕೆ ನೂರಾರು ಮಕ್ಕಳು ಸಾಯುತ್ತಿದ್ದರು. ಕ್ಷಾಮ, ಕ್ಷಯ, ಮಲೇರಿಯಾ ಮತ್ತಿತರ ರೋಗರುಜಿನಾದಿಗಳು ಕೋಟ್ಯಾಂತರ ಜನಗಳನ್ನು ಕೊಲ್ಲುತ್ತಿದ್ದವು. ಜಗತ್ತಿನಲ್ಲಿಯೇ ಭಾರತೀಯನ ಸರಾಸರಿ ಆಯುಃಪ್ರಮಾಣ ಚಿಕ್ಕದು—ಇಪ್ಪತ್ತೇಳೇ ವರ್ಷ. ನೂರರಲ್ಲಿ ಹನ್ನೆರಡು ಮಂದಿಗೆ ಮಾತ್ರ ಓದು ಬರೆಹ ಬರುವುದು.

ನಮ್ಮ ಜೀವನ ವಿಧಾನದಲ್ಲಿ ಬ್ರಿಟಿಷರ ಆಗಮನ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿತೆಂಬುದನ್ನು ಮರೆಯಬಾರದು. ಬ್ರಿಟಿಷರು ಅನೇಕ ರಸ್ತೆಗಳನ್ನು ಹಾಯಿಸಿದರು, ರೈಲುಗಳನ್ನು ಹಾಕಿಸಿದರು. ಹಳ್ಳಿಗಳಿಗೂ ಊರುಗಳಿಗೂ ನಿಕಟ ಸಂಬಂಧವೇರ್ಪಡಿಸಿದರು. ನಮ್ಮ ಆಳರಸರು ಈ ಸುಧಾರಣೆಗಳನ್ನು ಕೈಗೊಂಡದ್ದು ನಮ್ಮ ಉದ್ಧಾರಕ್ಕಲ್ಲ, ಸುಲಿಗೆಗೆ. ತಮ್ಮ ಅಧಿಕಾರಿಗಳು ಹೋಗಿ ಬರುವುದಕ್ಕೆ, ಸೈನ್ಯಗಳು ಸಾಗುವುದಕ್ಕೆ, ಭಾರತದಿಂದ ಕಚ್ಚಾಮಾಲು ರಫ್ತಾಗುವುದಕ್ಕೆ ರೈಲುಗಳು ಬೇಕಾಗಿದ್ದವು. ಆದರೆ ಪರ್ಯಾಯವಾಗಿ ಜನತೆಗೂ ಇವುಗಳಿಂದ ಪ್ರಯೋಜನವಾಯಿತು. ಯಂತ್ರ ಕೈಗಾರಿಕೆ ಸಣ್ಣ ಪ್ರಮಾಣದಲ್ಲಿ ನಮ್ಮ ದೇಶಕ್ಕೆ ಬಂದರೂ ಅದು ಜಗತ್ತಿನ ಇತರ ಭಾಗಗಳೊಂದಿಗೆ ನಮ್ಮನ್ನು ಬೆಸೆಯಿತು.

ಮಹಾನುಭಾವರಾದ ಕೆಲವು ಇಂಗ್ಲಿಷರಿಂದ ನಮ್ಮ ದೇಶದ ಹಲವು ಹಿರಿಯರು ಆಧುನಿಕ ಜೀವನಕ್ರಮವನ್ನು ಕಲಿಯಲು ಇಂಗ್ಲೆಂಡಿಗೆ ಹೋದರು. ಉದಾರಮತಿಗಳಾದ ಇಂಗ್ಲಿಷ್ ಮಹಾನುಭಾವರಿಗೂ, ನಮ್ಮನ್ನಾಳಲು ಬರುವ ಚಿಲ್ಲರೆ ಮನಸ್ಸಿನ ಇಂಗ್ಲಿಷರಿಗೂ ಯಾವ ಸಂಬಂಧವೂ ಇಲ್ಲ. ದೊಡ್ಡವರು ದೊಡ್ಡವರೇ, ಸಣ್ಣವರು ಸಣ್ಣವರೇ. ನಮ್ಮ ನಾಯಕರು ಈ ಮಹಾನುಭಾವರೊಂದಿಗೆ ಸ್ನೇಹ ಬೆಳಸಿದರು. ಆಧುನಿಕ ಪ್ರಜಾಸರ್ಕಾರ ಯೂರೋಪಿನ ದೇಶಗಳ ಸ್ವತ್ತಾಗಿದ್ದಂತೆ ನಮ್ಮ ಸ್ವತ್ತೂ ಆಗುತ್ತ ಬಂತು.

ನಾವು ಪರಕೀಯರ ಕೈಕೆಳಗೆ ಬಿದ್ದಿದ್ದುದರಿಂದ ನಮ್ಮ ನಾಯಕರು ಪ್ರಜಾಸರ್ಕಾರ ತತ್ತ್ವವನ್ನು ಹೆಚ್ಚು ಒತ್ತಿ ಹೇಳತೊಡಗಿದರು.

## ಜಾಗೃತಿ

ನೂರು ವರ್ಷಗಳ ಕೆಳಗೆ ಹಿಂದೂಸ್ಥಾನ ಕಣ್ದೆರೆಯತೊಡಗಿತು.

ಶಾಲೆ, ಕಾಲೇಜುಗಳಿಗೆ ಹೋದ ಕೆಲವು ಭಾರತೀಯರಿಗೆ ಇಂಗ್ಲಿಷರ ರೀತಿನೀತಿಗಳ ಪರಿಚಯವಾಯಿತು.

ಇಂಗ್ಲೆಂಡಿನಲ್ಲಿ ಇಂಗ್ಲಿಷರು ಉಪದೇಶಿಸುತ್ತಿದ್ದ ಸ್ವಾತಂತ್ರ್ಯಕಲ್ಪನೆಯನ್ನು ಹಿಂದೂಸ್ಥಾನಕ್ಕೆ ಬಂದ ಇಂಗ್ಲಿಷರು ತಮ್ಮೊಂದಿಗೆ ತರಲಿಲ್ಲವೆಂಬುದು ನಮ್ಮವರಿಗೆ ತಿಳಿದುಬಂತು. ಅವರು ಮೆಲ್ಲನೆ

ಪ್ರತಿಭಟಿಸಲಾರಂಭಿಸಿದರು. ಶ್ರೀಮಂತರು ದೊಡ್ಡ ಪ್ರಮಾಣದಲ್ಲಿ ವ್ಯಾಪಾರಮಾಡಲಾಗುತ್ತಿರಲಿಲ್ಲ, ಅವರ ಮಕ್ಕಳಿಗೆ ಉದ್ಯೋಗಗಳು ಸಿಕ್ಕುತ್ತಿರಲಿಲ್ಲ. ಎಲ್ಲಾ ಬ್ರಿಟಿಷರ ಮಂಗಮುಷ್ಠಿಯಲ್ಲಿಅಡಕವಾಗಿತ್ತು.

೧೮೫೭ರ ಸಮರವಾದ ಮೇಲೆ ಮುಸ್ಲಿಮರ ಬಗ್ಗೆ ಇಂಗ್ಲಿಷರ ದೌರ್ಜನ್ಯ ಹೆಚ್ಚಿತು. ಮುಸ್ಲಿಮರು ಅನೇಕ ಕಷ್ಟನಷ್ಟಗಳಿಗೀಡಾಗಬೇಕಾಯಿತು. ಶಿಕ್ಷಣ ದೊರಕಿಸಲು ಅವರು ಮೊದಲು ಪ್ರಯತ್ನಿಸಲಿಲ್ಲ. ವಿಶ್ವವಿದ್ಯಾನಿಲಯಗಳಿಗೆ ಹೋಗುತ್ತಿದ್ದವರು ಹೆಚ್ಚು ಮಂದಿ ಹಿಂದೂಗಳೇ. ಮುಸ್ಲಿಮರ ಬಡತನ ಸ್ವಲ್ಪವೂ ಸುಧಾರಿಸಲಿಲ್ಲ. ಹಿಂದೂಸ್ಥಾನವಲ್ಲಿ ನೂಲುವ, ನೇಯುವ ಕಲೆಯನ್ನು ಬ್ರಿಟಿಷರು ನಾಶಪಡಿಸಿದ ಮೇಲೆ ಮುಸ್ಲಿಮ ನೇಕಾರರು ನಿರುದ್ಯೋಗಿಗಳಾದರು. ಇತರ ಮುಸ್ಲಿಮ ಕಲಾಚತುರರು ಹೊಟ್ಟೆಗೆ ಸಾಕಾಗುವಷ್ಟನ್ನು ಸಂಪಾದಿಸುವುದೂ ಕಷ್ಟವಾಯಿತು. ಅವರ ಚೇತನ ಉಡುಗಿಹೋಯಿತು. ಆದ್ದರಿಂದ ನಮ್ಮ ಪೂರ್ವಜರು ಬ್ರಿಟಿಷರ ವಿರುದ್ಧ ಚಳುವಳಿ ಹೂಡಿದಾಗ ಬಹುಮಂದಿ ಮುಸ್ಲಿಮರು ಅದರಲ್ಲಿ ಭಾಗವಹಿಸಲಿಲ್ಲ. ಅವರು ಚಳುವಳಿಗೆ ಸೇರದಂತೆ ಬ್ರಿಟಿಷರು ತಮ್ಮ 'ವಿಭಜಿಸಿ ಆಳುವ ನೀತಿ'ಯಿಂದ ತಡೆಗಟ್ಟಿದರು.

## ಭಾರತ ರಾಷ್ಟ್ರ ಸಭೆ

ನಮ್ಮ ಜನರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ೧೮೮೫ರಲ್ಲಿ ಭಾರತ ರಾಷ್ಟ್ರಸಭೆ (ಇಂಡಿಯನ್ ನ್ಯಾಷನಲ್ ಕಾಂಗ್ರೆಸ್) ಸ್ಥಾಪಿತವಾಯಿತು. ಮೊದಲು ಮೊದಲು ನಮ್ಮ ನಾಯಕರು ವಿಕ್ಟೋರಿಯಾ

ರಾಣಿಗೆ ಅಥವಾ ವೈಸ್‌ರಾಯ್‌ಗೆ ಅರ್ಜಿಗಳನ್ನು ಸಲ್ಲಿಸಿ ತೃಪ್ತರಾಗುತ್ತಿದ್ದರು. ಇದು ಕೂಡ ಬಡಾಸಾಹೇಬರಿಗೆ ಪ್ರಿಯವಾಗಲಿಲ್ಲ. ಅವರು ನಮ್ಮ ನಾಯಕರನ್ನು 'ಚಳುವಳಿಗಾರರು' ಎಂದು ಕರೆಯುತ್ತಿದ್ದರು. ಗೊಣಗಾಟ ಹೆಚ್ಚುತ್ತ ಹೋಯಿತು. ತಿಳಿದವರು ಅನಾನುಕೂಲ ಪ್ರಶ್ನೆಗಳನ್ನು ಕೇಳತೊಡಗಿದರು.

ಭಾರತದ ಪಿತಾಮಹನೆಂದು ಹೆಸರಾಗಿದ್ದ ದಾದಾಭಾಯ್ ನವರೋಜಿಯವರಂಥ ನಾಯಕರು ಆ ಕಾಲದಲ್ಲಿದ್ದರು. ಅವರನ್ನು ಬ್ರಿಟಿಷ್ ಪಾರ್ಲಿಮೆಂಟಿಗೆ ಚುನಾಯಿಸಲಾಯಿತು. ಅಲ್ಲಿ ದಾದಾಭಾಯಿಯವರು ಭಾರತದ ಬಗ್ಗೆ ಮಾತನಾಡಿದರು. ಸ್ವರಾಜ್ಯ-ಸ್ವಾತಂತ್ರ್ಯ ಬೇಕೆಂದು ಮೊಟ್ಟಮೊದಲಿಗೆ ಕೇಳಿದವರೇ ದಾದಾಭಾಯ್ ನವರೋಜಿಯವರು.

ಲೋಕಮಾನ್ಯ ತಿಲಕರು ಬಲಿಷ್ಠರಾದ ನಾಯಕರು. ಅವರು ಉಜ್ಜ್ವಲ ದೇಶಾಭಿಮಾನಿಗಳು, ವಿದ್ವಾಂಸರು, ವಕ್ತೃಗಳು. 'ಸೌಮ್ಯ' ಗೋಖಲೆ ಇನ್ನೊಬ್ಬ ನಾಯಕರು. ಇವರಲ್ಲದೆ ದೇಶಭಕ್ತರಾದ ಇತರರೂ ಇದ್ದರು.

ರಾಷ್ಟ್ರ ಸಭೆ ಹಿಂದೂಸ್ಥಾನದ ವಿವಿಧ ಭಾಗಗಳಲ್ಲಿ ಸಭೆ ಸೇರಿಸಿತು. ದಿನದಿನಕ್ಕೆ ಅದರ ಪ್ರಭಾವ ಹೆಚ್ಚುತ್ತ ಬಂತು.

ಆರಂಭದಲ್ಲಿ ಸಭೆಯ ಕಾರ್ಯಕಲಾಪಗಳಿಗೆ ಬ್ರಿಟಿಷರು ಅಡ್ಡಿಬರಲಿಲ್ಲ. ರಾಷ್ಟ್ರಸಭೆ ಪ್ರಬಲವಾಗಿ, ಜನತೆಯ ವಾಣಿಯಾಗಿ, ಸ್ವಾತಂತ್ರ್ಯವನ್ನು ಕೇಳಲಾರಂಭಿಸಿದೊಡನೆಯೇ ಅದನ್ನು ತುಳಿದು ಬಿಡಲೆತ್ನಿಸಿದರು.

# ಲಾರ್ಡ್ ಮಿಂಟೋ ಮತ್ತು ಮಿ. ಮಾರ್ಲೆ

ಹಿಂದೂಸ್ಥಾನಕ್ಕೇನಾದರೂ ಕೊಡಬೇಕೆಂದು ೧೯೦೬ರಲ್ಲಿ ಬ್ರಿಟಿಷರು ತಿಳಿದರು. ಆಗ ಮಿಂಟೋ-ಮಾರ್ಲೆ ಸುಧಾರಣೆಗಳನ್ನು ಜಾರಿಗೆ ತಂದರು. ಲಾರ್ಡ್ ಮಿಂಟೋ ಆಗ ಹಿಂದೂಸ್ಥಾನದ ವೈಸರಾಯ್ ಆಗಿದ್ದ. ಮಿ. ಮಾರ್ಲೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತ ಕಾರ್ಯದರ್ಶಿಯಾಗಿದ್ದ.

ಮೃದು ಮಾತುಗಾರರಾದ ಸೌಮ್ಯವಾದಿಗಳ ನೆರವು ಮಾರ್ಲೀಗೆ ಬೇಕಾಗಿತ್ತು. ಬ್ರಿಟಿಷರು ಹಿಂದೂಸ್ಥಾನದಲ್ಲಿಯೇ ಉಳಿದು ತಮ್ಮನ್ನು ಚೆನ್ನಾಗಿ ಕಾಣಬೇಕೆಂದು ಸೌಮ್ಯವಾದಿಗಳ ಮತವಾಗಿತ್ತು. ಮಾರ್ಲಿಗೆ ಅವರನ್ನು ಕಂಡರೆ ಪರಮ ವಿಶ್ವಾಸ, ಉಗ್ರವಾದಿಗಳನ್ನು ಕಂಡರೆ ಕಡು ವಿರೋಧ. ಇಂಗ್ಲಿಷರು ಹಿಂದೂಸ್ಥಾನ ಬಿಟ್ಟು ತೊಲಗಬೇಕೆಂದು ಉಗ್ರವಾದಿಗಳು ಹೇಳುತ್ತಿದ್ದರು. ಭಾರತೀಯರು ಒಂದುಗೂಡದಂತೆ ಮಿಂಟೋ ಸರ್ವಸಾಹಸ ಮಾಡಿದ. ಮುಸ್ಲಿಮರನ್ನು ಹಿಂದುಗಳ ಮೇಲೆ ಎತ್ತಿ ಕಟ್ಟುವುದಕ್ಕೆ ಅವನು ಆರಂಭಿಸಿದ.

'ವಿಭಜಿಸಿ, ಆಳುವ ನೀತಿ' ಮುಂದುವರಿಯಿತು. ಹಿಂದೂ ಮುಸ್ಲಿಮರಲ್ಲಿ ಕಲಹ ತಂದಿಟ್ಟರೆ ತಮ್ಮ ಬುಡ ಭದ್ರವಾಗುವುದೆಂದು ಬ್ರಿಟಿಷರಿಗೆ ಗೊತ್ತಿತ್ತು.

# ಮುಸ್ಲಿಮರಲ್ಲಿ ಜಾಗೃತಿ

ಈ ಕಾಲಕ್ಕೆ ಮುಸ್ಲಿಮ್ ಲೀಗ್ ಆರಂಭವಾಯಿತು. ಎಲ್ಲ ಹಿಂದುಗಳೂ ಮುಸ್ಲಿಮರ ವಿಷಯದಲ್ಲಿ ಚೆನ್ನಾಗಿ ವರ್ತಿಸುತ್ತಿರಲಿಲ್ಲ. ಅವರೊಂದಿಗೆ ಊಟ ಉಪಚಾರಗಳನ್ನು ಮಾಡುತ್ತಿರಲಿಲ್ಲ. ಮುಸ್ಲಿಮರಿಗೆ ಅವರ ಬಗ್ಗೆ ಅಸಂತೋಷ ಮೂಡಿತ್ತು. ಅವರ ಬಡತನ, ನಿರಕ್ಷರತೆ ಯಥಾ ಸ್ಥಿತಿಯಲ್ಲಿತ್ತು. ಕವಿ ಹಾಲಿ ಅವರ ದಾರುಣ ವೇದನೆಯನ್ನು ವರ್ಣಿಸಿ ಜಾಗ್ರತರಾಗಬೇಕೆಂದು ಮುಸ್ಲಿಮರನ್ನು ಎಚ್ಚರಿಸಿದ.

ಮುಸ್ಲಿಮರ ಮಹಾನಾಯಕ ಸಯ್ಯದ್ ಅಹಮದ್ ಖಾನ್ ಅಲಿಘಡದಲ್ಲಿ ಒಂದು ಮುಸ್ಲಿಂ ಕಾಲೇಜನ್ನು ಸ್ಥಾಪಿಸಿದ. ಮುಸ್ಲಿಮರು ಒಂದುಗೂಡಬೇಕೆಂದು ಆತ ಉಪದೇಶ ಮಾಡಿದ.

ಬ್ರಿಟಿಷರು ಕಣ್ಣುಮುಚ್ಚಿ ಕುಳಿತಿರಲಿಲ್ಲ. ಯಾವ ರೀತಿಯಲ್ಲಾದರೂ ಹಿಂದೂಸ್ಥಾನವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರಬೇಕೆಂಬುದು ಅವರ ಆಕಾಂಕ್ಷೆಯಾಗಿತ್ತು. ಲಾರ್ಡ್ ಮಿಂಟೋ ಹಿಂದೂಗಳ ವಿರುದ್ಧ ಮುಸ್ಲಿಮರನ್ನು ಎತ್ತಿಕಟ್ಟಿ ಅವರು ಹಿಂದುಗಳಿಗೆ ಭಯಪಡುವಂತೆ ಮಾಡಿದ. ಹಿಂದೂ ಮುಸ್ಲಿಮ್ ಸಮಸ್ಯೆಯ ಅಂಕುರಾರ್ಪಣವಾಯಿತು. ಸಾಮಾನ್ಯ ಹಿಂದೂ-ಮುಸ್ಲಿಮರು ನೆರೆಹೊರೆಯವರಾಗಿ ನೆಮ್ಮದಿಯಿಂದ ಬಾಳುವೆ ಮಾಡಿಕೊಂಡಿದ್ದರು. ಕೆಲಸಕಾರ್ಯ ಬೇಕಾಗಿದ್ದ ವಿದ್ಯಾವಂತರು ಮಾತ್ರ ಬ್ರಿಟಿಷರ ಬೋಧನೆಗೆ ಕಿವಿ ಕೊಡುತ್ತಿದ್ದರು.

## ಮೊದಲನೆಯ ಜಗತ್ತಿನ ಸಮರ (ಕ್ರಿ. ಶ. ೧೯೧೪-೧೯೧೮)

ಜರ್ಮನ್ನರ ಮೇಲೆ ಬ್ರಿಟಿಷರು ಯುದ್ಧಕ್ಕೆ ಹೋದಾಗ ಅವರಿಗೆ ಭಾರತೀಯರ ಸಹಾಯ ಬೇಕಾಗಿತ್ತು. ನಮ್ಮ ಸಿಪಾಯಿಗಳು ತಮ್ಮ ಪಕ್ಷದಲ್ಲಿ ಕಾದಿದರೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ವಾಗ್ದಾನ ಮಾಡಿದರು. ನಮ್ಮ ಹಣವೂ ಅವರಿಗೆ ಬೇಕಾಗಿತ್ತು.

ನಾವು ಹಣ ಒದಗಿಸಿದ್ದೂ ಆಯಿತು. ನಮ್ಮ ಸಿಪಾಯಿಗಳು ಜೀವದ ಮೇಲಣ ಹಂಗು ತೊರೆದು ಬ್ರಿಟಿಷರ ಪಕ್ಷದಲ್ಲಿ ನಿಂತು ಕಾದಿದ್ದೂ ಆಯಿತು. ಯುದ್ಧ ಮುಗಿದ ಮೇಲೆ ಬ್ರಿಟಿಷರು ವಚನಭ್ರಷ್ಟರಾದರು. ಸ್ವಾತಂತ್ರ್ಯದ ಬದಲು ರೌಲತ್‌ಬಿಲ್ ಎಂಬ ಕರಾಳಶಾಸನವನ್ನು ನಮಗೆ ಉಡುಗೊರೆಯಾಗಿ ಕೊಟ್ಟರು. ಈ ಶಾಸನ ಜಾರಿಗೆ ಬಂದ ಮೇಲೆ ಜನ ಒಟ್ಟುಕೂಡಿ ಮಾತನಾಡಲು ಸಾಧ್ಯವಿಲ್ಲ. ಹಾಗೆ ಸೇರಿದವರನ್ನು ಪೋಲೀಸಿನವರು ಬಂಧಿಸುತ್ತಿದ್ದರು.

## ಮಹಾತ್ಮಾ ಗಾಂಧಿ


ಈ ಕರಾಳ ಶಾಸನವನ್ನು ಮೋಹನದಾಸ ಕರಮಚಂದ ಗಾಂಧಿ ಎದುರಿಸಿದರು. ಅವರು ಕಾಠೇವಾಡದ ಒಂದು ಗೌರವಸ್ಥ ವಂಶಕ್ಕೆ ಸೇರಿದವರು. ಇಂಗ್ಲೆಂಡಿಗೆ ಹೋಗಿ ಲಾಯರಾಗಿ ಬಂದಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಕೆಲವುಕಾಲ ವಾಸಮಾಡಿದ್ದರು. ಅಲ್ಲಿ ದೇಶೀಯರ ಬಗ್ಗೆ ಇಂಗ್ಲಿಷರು ತೋರುತ್ತಿದ್ದ ದಬ್ಬಾಳಿಕೆಯನ್ನು ವಿರೋಧಿಸಿ ಒಂದೆರಡು ಸಾರಿ ಜೈಲು ವಾಸವನ್ನು ಅನುಭವಿಸಿದ್ದರು.

ಆಳರಸರಿಗೆ ಸಹಾಯಮಾಡಕೂಡದೆಂದು ಗಾಂಧೀಜಿ ಹೇಳಿದರು. ಇದನ್ನೇ ಅವರು 'ಅಸಹಕಾರ' ಎಂದು ಕರೆದುದು. ಯಾರೂ ಹಿಂಸೆಯನ್ನಾಚರಿಸಕೂಡದೆಂದೂ, ಪ್ರತೀಕಾರಕ್ಕೆ ಮನಸ್ಸು ಕೊಡಕೂಡದೆಂದೂ ಅವರು ತಿಳಿಸಿದರು. ಇದನ್ನೇ ಅವರು 'ಅಹಿಂಸೆ' ಎಂದು ಕರೆದುದು. ಅಹಿಂಸೆಯ ಸಿದ್ಧಾಂತದಂತೆ ನೀವು ಯಾರನ್ನೂ ಹಿಂಸೆಮಾಡಕೂಡದು. ನಿಮ್ಮ ಶತ್ರುಗಳನ್ನು ಕೂಡ ಹಿಂಸೆಪಡಿಸಬಾರದು. ಪ್ರತಿಯೊಬ್ಬರೂ ಸತ್ಯವನ್ನೇ ಹೇಳಬೇಕು. ಗಾಂಧೀಜಿಯವರನ್ನು ಜನ 'ಮಹಾತ್ಮಾ' ಎಂದು ಕರೆಯಲಾರಂಭಿಸಿದರು.

ಗಾಂಧೀಜಿ ಹಿಂದೂಸ್ಥಾನದ ನಾಯಕ ಮಣಿಗಳಾದರು. ನಾವಿರುವ ಕಾಲವನ್ನು 'ಗಾಂಧೀಯುಗ' ಎಂದು ಕರೆಯುವ ವಾಡಿಕೆ ಬಂತು.

ಗಾಂಧೀಜಿಯವರ ಅಹಿಂಸಾತ್ಮಕ ಅಸಹಕಾರ ಜಗತ್ತಿನಲ್ಲೆಲ್ಲಾ ಚರ್ಚೆಯಾಗಿದೆ. ನಾವೆಲ್ಲಾ ನಮ್ಮ ದೇಶವನ್ನು ಪ್ರೀತಿಸುವುದನ್ನು ಕಲಿತುದು ಈ ಮಹಾನುಭಾವನಿಂದಲೇ. ಅವರು ನಮಗೆ ಸರಳ ಜೀವನ ನಡೆಸುವುದು, ಚರ್ಖಾ ಉಪಯೋಗಿಸುವುದು, ಖಾದಿ ಧರಿಸುವುದು, ರೈಲಿನಲ್ಲಿ ಮೂರನೆಯ ತರಗತಿಯಲ್ಲಿಯೇ ಪ್ರಯಾಣ ಮಾಡುವುದು ಇವುಗಳನ್ನು ಹೇಳಿಕೊಟ್ಟುದಲ್ಲದೆ ಬಡವರನ್ನು ಪ್ರೀತಿಸುವುದನ್ನೂ ಕಲಿಸಿಕೊಟ್ಟರು. ಉತ್ತಮ ಜಾತಿಯ ಹಿಂದುಗಳು ಹರಿಜನರನ್ನು ಕಾಣುತ್ತಿದ್ದ ರೀತಿ



ಅವರಿಗೆ ಕೋಪಬರಿಸುತ್ತಿತ್ತು. ನಮ್ಮ ದೇಶದ ಕೋಟ್ಯಾಂತರ ಹರಿಜನರ ಉದ್ಧಾರಕ್ಕಾಗಿ ಅವರು ಉಪವಾಸವಾಚರಿಸಿ ಅಹರ್ನಿಶಿ ಹೋರಾಡಿದರು.

ಯುದ್ಧದಲ್ಲಿ ಬ್ರಿಟಿಷರಿಗೆ ಮಹಾತ್ಮಾ ಗಾಂಧಿಯವರು ಸಹಾಯ ಮಾಡಿದ್ದರು. ಜನ ಒಟ್ಟಿಗೆ ಸೇರಿ ಮಾತುಕತೆ ನಡೆಸುವುದು ರೌಲತ್‌ಬಿಲ್ಲಿನ ಪರಿಣಾಮದಿಂದ ಅಸಾಧ್ಯವಾದಾಗ ಗಾಂಧೀಜಿ ೧೯೧೯ನೆಯ ಇಸವಿ ಏಪ್ರಿಲ್ ೬ನೆಯ ತಾರೀಕು ಎಲ್ಲರೂ ಹರತಾಳವನ್ನಾಚರಿಸಬೇಕೆಂದು ಸೂಚಿಸಿದರು. ಗಾಂಧೀಜಿ ಪಂಜಾಬಿಗೆ ಹೊರಟದ್ದರು. ಆಗ ಪೋಲೀಸಿನವರು ಬಂದು ಅವರನ್ನು ಸೆರೆಹಿಡಿದರು. ಇದು ಜನಗಳ ಕೋಪವನ್ನು ಕೆರಳಿಸಿತು.

## ಜಲಿಯನ್‌ವಾಲಾ ಬಾಗ್

ಅಮೃತಸರದಲ್ಲಿ ಜಲಿಯನ್‌ವಾಲಾ ಬಾಗೆಂಬ ಒಂದು ಸಣ್ಣ ತೋಟವಿದೆ. ಅದರ ಸುತ್ತಮುತ್ತ ಗೋಡೆಗಳಿವೆ. ಅದಕ್ಕೆ ಒಂದೇ ಒಂದು ಕಿರುಬಾಗಿಲು. ಇಲ್ಲಿ ತಮ್ಮ ನಾಯಕರ ಉಪದೇಶ ಕೇಳಲು ಜನ ಸೇರಿದ್ದರು. ಗುಂಪಿನಲ್ಲಿ ಮುದುಕರು, ಮುದುಕಿಯರು, ಹುಡುಗರು, ಹೆಂಗಸರು, ಮಕ್ಕಳು ಎಲ್ಲರೂ ಇದ್ದರು. ಬ್ರಿಟಿಷ್‌ಸೈನ್ಯಾಧಿಕಾರಿ ಜನರಲ್ ಡಯ್ಯರ್ ಸೈನ್ಯ ಸಮೇತ ಒಂದು ಮೆಷಿನ್ ಗನ್ ತಂದು ತೋಟದ ಬಾಗಿಲ ಮುಂದೆ ನಿಲ್ಲಿಸಿದ. ಜನರು ಸ್ಥಳ ಬಿಟ್ಟು ಕದಲುವುದಕ್ಕೂ ಅವಕಾಶ ಕೊಡದೆ ಅವರ ಮೇಲೆ ಮದ್ದಿನ ಮಳೆಗರೆದ. ಮುನ್ನೂರು ಜನ ಅದೇ ಸ್ಥಳದಲ್ಲಿ ಸತ್ತರು, ಸಾವಿರಾರು ಜನಕ್ಕೆ

ಗಾಯವಾಯಿತು. ಡಯ್ಯರ್ ಹೊರಟುಹೋದ. ಗಾಯಗೊಂಡವರಿಗೆ ಚಿಕಿತ್ಸೆ ಮಾಡುವುದಕ್ಕೆ ಯಾರನ್ನೂ ಬಿಡಲಿಲ್ಲ. ಅವರು ಸತ್ತವರ ಮಧ್ಯೆ ರಾತ್ರಿಯೆಲ್ಲಾ ಬಿದ್ದುಕೊಂಡು ನೀರಿಗಾಗಿ ಹಾತೊರೆಯುತ್ತಾ ಪ್ರತ್ಯಕ್ಷ ನರಕವೇದನೆಯನ್ನನುಭವಿಸಿದರು.

ಇದು ಆದ ಮೇಲೂ ಸರ್ಕಾರ ದಬ್ಬಾಳಿಕೆ ನಡೆಸಿತು. ಹಾಜರಿಗಾಗಿ ವಿದ್ಯಾರ್ಥಿಗಳು ಅನೇಕ ಮೈಲಿಗಳು ನಡೆಯುವಂತೆ ಮಾಡಿತು. ಕೆಲವು ಬಜಾರುಗಳಲ್ಲಿ ಜನ ತಮ್ಮ ಹೊಟ್ಟೆಯ ಮೇಲೆ ತೆವಳಿಕೊಂಡು ಹೋಗಬೇಕಾಯಿತು.

ಈ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ದೇಶ ದಿಗ್ಭ್ರಾಂತವಾಯಿತು. ಸರ್ಕಾರ ತಮಗೆ ದಯಪಾಲಿಸಿದ 'ಸರ್' ಬಿರುದನ್ನು ಕವಿ ರವೀಂದ್ರನಾಥ ಠಾಕೂರರು ಹಿಂದಿರುಗಿಸಿದರು. ಬ್ರಿಟಿಷ್ ಸರ್ಕಾರ ಕೊಟ್ಟಿದ್ದ 'ಸರ್ ಬಿರುದು, ಅಪಮಾನ ಚಿನ್ಹೆ'ಯೆಂದು ರವೀಂದ್ರರು ಭಾವಿಸಿದರು.

## ಹಿಂದೂ-ಮುಸಲ್ಮಾನರಿಗೆ ಜಯವಾಗಲಿ

ಜಲಿಯನ್‌ವಾಲಾ ಬಾಗಿನ ದುರಂತ ಘಟನೆಯಾದ ಮೇಲೆ ಹಿಂದೂ-ಮುಸ್ಲಿಮರು ಸಮೀಪಗತರಾದರು. ಗಾಂಧೀಜಿ ಹೇಳಿದರು 'ಹಿಂದೂ-ಮುಸಲ್ಮಾನ ಕೀ ಜೈ ಎಂಬ ಘೋಷಣೆಯನ್ನು ಮರೆಯಲು ಸಾಧ್ಯವಿಲ್ಲ'ವೆಂದು. ರಾಷ್ಟ್ರೀಯ ಮಹಾಸಭೆ ಪ್ರಚಂಡ ಸಂಸ್ಥೆಯಾಯಿತು.

ನಮ್ಮ ಸ್ವಾತಂತ್ರ್ಯಸಂಗ್ರಾಮದ ನಾಯಕತ್ವವನ್ನು ಕೆಲವು ಮಹಾನುಭಾವರು ವಹಿಸಿದರು. ಮಹಾತ್ಮಾ ಗಾಂಧಿಯವರು ಎಲ್ಲರಿಗೂ ಮಾರ್ಗದರ್ಶಕರಾಗಿ ಧೃವನಕ್ಷತ್ರದಂತಿದ್ದರು. ಅವರ ಜತೆ ಇದ್ದವರು: ಪಂಡಿತ ಮೋತಿಲಾಲ ನೆಹ್ರೂ, ದೇಶಬಂಧು ಚಿತ್ತರಂಜನದಾಸ್, ವಿಠಲಭಾಯಿ, ವಲ್ಲಭಭಾಯಿ ಸೋದರರು, ಸರೋಜನಿ ನಾಯ್ಡು, ಮೌಲಾನಾ ಮಹಮದ್ ಅಲ್ಲಿ, ಡಾಕ್ಟರ್ ಅನ್ಸಾರಿ, ಹಕೀಂ ಅಜ್ಮಲ್‌ಖಾನ್, ಚಕ್ರವರ್ತಿ ರಾಜಗೋಪಾಲಾಚಾರಿ, ಲಾಲಾ ಲಜಪತಿರಾಯ್ ಮತ್ತು ಮೌಲಾನಾ ಅಬುಲ್ ಕಲಂ ಆಜಾದ್. ವೈಸರಾಯರಾದ ಚೆಲ್ಮ್ಸ್‌ಫರ್ಡರೂ, ಭಾರತ ಕಾರ್ಯದರ್ಶಿ ಮಾಂಟೆಗ್ಯೂ ಅವರೂ ನಮಗೆ ಕೊಡಲೆತ್ನಿಸುತ್ತಿದ್ದ ನಕಲಿ ಪಾರ್ಲಿಮೆಂಟುಗಳಲ್ಲಿ ಏನೂ ಸಾರ್ಥಕವಿಲ್ಲ ವೆಂದು ಈ ಮಹಾನಾಯಕರು ಕಂಡುಕೊಂಡರು.

ಗಾಂಧೀಜಿ ಹನ್ನೆರಡು ವರ್ಷ ಅನೇಕ ಅಸಹಕಾರ ಚಳುವಳಿಗಳನ್ನು ಹುಟ್ಟುಹಾಕಿ ಸ್ವಾತಂತ್ರ್ಯ ದೊರಕಿಸಲು ಜನಗಳನ್ನು ಹೊಡೆದೆಬ್ಬಿಸಿದರು. ಪಂಡಿತ ಜವಾಹರಲಾಲ ನೆಹ್ರೂ, ಸುಭಾಸ್ ಚಂದ್ರ ಬೋಸರಂಥ ಹೊಸ ನಾಯಕರೂ ಹುಟ್ಟಿಕೊಂಡರು.

## ಟ್ರೇಡ್ ಯೂನಿಯನ್‌ಗಳು

ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ಬಡ ಕೂಲಿಗಾರರೂ ಈ ಕಾಲಕ್ಕೆ ಹೋರಾಟ ಆರಂಭಿಸಿದರು. ಅವರ ಪಾಡು ದೇವರಿಗೇ ಪ್ರೀತಿ. ಭೂಮಿ ಕಳೆದುಕೊಂಡು ಅವರು ಹಳ್ಳಿಗಳನ್ನು ಬಿಟ್ಟು ಪಟ್ಟಣ

ಸೇರಿದ್ದರು. ಪ್ರಾಣಿಗಳ ವಾಸಕ್ಕೂ ಅನರ್ಹವಾದ ಕಗ್ಗತ್ತಲು ಜೋಪಡಿಗಳಲ್ಲಿ ಅವರು ವಾಸಮಾಡುತ್ತಿದ್ದರು. ಅವರಿಗೆ ಬರುತ್ತಿದ್ದ ಕೂಲಿ ಏತಕ್ಕೂ ಸಾಲದು. ದುಡಿಮೆಗಂತೂ ಇತಿಮಿತಿಯೇ ಇಲ್ಲ. ಕಾರ್ಖಾನೆಯ ಮೊದಲಾಳು ಮತ್ತು ಬಡ್ಡಿಗೆ ಹಣಕೊಡುತ್ತಿದ್ದ ಸಾವುಕಾರರು ಅವರನ್ನು ಬೆದರಿಸಿ ಗೋಳು ಹುಯ್ದುಕೊಳ್ಳುತ್ತಿದ್ದರು.

ಅವರನ್ನು ಟ್ರೇಡ್ ಯೂನಿಯನ್ ಸಂಘಗಳಲ್ಲಿ ಸಂಘಟಿಸಲು ಕೆಲವು ತರುಣ ನಾಯಕರು ಯತ್ನಿಸಿದರು. ಕೆಲಸಗಾರರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದು ಈ ಯೂನಿಯನ್‌ಗಳ ಕರ್ತವ್ಯವಾಗಿತ್ತು. ಪ್ರತಿಯೊಂದು ಐರೋಪ್ಯ ದೇಶದಲ್ಲಿಯೂ ಇಂಥ ಯೂನಿಯನ್‌ಗಳು ನೂರಾರು ಇವೆ. ರಷ್ಯಾದೇಶ ೧೯೧೭ರ ಅಕ್ಟೋಬರ್ ತಿಂಗಳಲ್ಲಿ ಮಹಾನಾಯಕ ಲೆನಿನ್ನನ ನಾಯಕತ್ವದಲ್ಲಿ ದುಡಿಮೆಗಾರರ ರಾಜ್ಯವನ್ನೇ ದೊರಕಿಸಿಕೊಂಡಿತ್ತು.

ಭಾರತೀಯ ದುಡಿಮೆಗಾರರು ಯೂನಿಯನ್‌ಗಳನ್ನು ಕಟ್ಟುವುದು ಬ್ರಿಟಿಷ್ ಸರ್ಕಾರಕ್ಕೆ ಪ್ರಿಯವಾಗಲಿಲ್ಲ. 'ದೊರೆಯೊಂದಿಗೆ ಕದನಕ್ಕೆ ಹೊರಟಿದ್ದಾರೆ' ಎಂಬ ಆಪಾದನೆಮಾಡಿ ಯೂನಿಯನ್ ನಾಯಕರನ್ನು ಸರ್ಕಾರ ಬಂಧಿಸಿತು. ಐದು ವರ್ಷಕಾಲ ಹದಿನೆಂಟು ಜನ ನಾಯಕರನ್ನು ಸೆರೆಮನೆಯಲ್ಲಿ ಹಾಕಿತು. ಅವರ ವಿಚಾರಣೆ ಮೀರತ್ತಿನಲ್ಲಿ ನಡೆದು, ಬಹು ಮಂದಿಗೆ ದೀರ್ಘ ಕಾಲದ ಶಿಕ್ಷೆ ವಿಧಾಯಕವಾಯಿತು. ಜಗತ್ತಿನ ಎಲ್ಲಾ ಭಾಗಗಳ ದುಡಿಮೆಗಾರರೂ ಅವರ ಬಗ್ಗೆ ಸಹಾನುಭೂತಿ ವ್ಯಕ್ತಮಾಡಿದರು. ಸೆರೆಯಾಳುಗಳನ್ನು ಬಂಧನದಿಂದ ಬಿಡಲಾಯಿತು. ಯೂನಿಯನ್ ಕಟ್ಟುವ ಹಕ್ಕು ದುಡಿಮೆಗಾರರಿಗೆ ಲಭಿಸಿತು.

# ಭಗತ್ ಸಿಂಗ್

ತರುಣರ ಸಹನೆ ಮೇರೆ ಮೀರುತ್ತ ಬಂತು. ಬ್ರಿಟಿಷರೊಂದಿಗೆ ಅಸಹಕಾರದಿಂದಲ್ಲ, ಬಾಂಬುಗಳು, ಬಂದೂಕಗಳೊಂದಿಗೆ ಹೋರಾಡಬೇಕೆಂದು ಅವರ ಆತುರ. ದೇಶಕ್ಕಾಗಿ ಪ್ರಾಣ ಒಪ್ಪಿಸಿದ ಅನೇಕ ವೀರ ತರುಣರು ಬಂಗಾಳ, ಮಹಾರಾಷ್ಟ್ರ ದೇಶಗಳಲ್ಲಿ ಆಗಿಹೋಗಿದ್ದರು.



ಪಂಜಾಬಿನ ವೀರ ತರುಣ ಭಗತ್ ಸಿಂಗ್ ಅದೇ ಮೇಲ್ಪಂಕ್ತಿಯನ್ನನುಸರಿಸಿದ. ಲಾಲಾ ಲಜಪತಿರಾಯರನ್ನು ನಿಷ್ಕರುಣೆಯಿಂದ ಹೊಡೆದ ಪೋಲೀಸಿನವರ ಮೇಲೆ ಪ್ರತೀಕಾರ ಕೈಗೊಳ್ಳಬೇಕೆಂದು ಅವನು ನಿರ್ಧರಿಸಿದ. ಒಂದು ಸಂಚುಹೂಡಿ ಕೆಲವು ಪೋಲೀಸ್ ಅಧಿಕಾರಿಗಳನ್ನೆದುರಿಸಿದ.

ಭಗತ್‌ಸಿಂಗ್ ಲಾಹೋರಿನಲ್ಲಿದ್ದಾನೆಂದು ಪೋಲೀಸಿನವರಿಗೆ ಸುದ್ದಿ ಬಂತು. ಅವರು ಊರನ್ನು ಬಳಸಿದರು. ನೂರಾರು ಜನ ಸಿ. ಐ. ಡಿ. ಗಳು ರೈಲ್ವೆ ನಿಲ್ದಾಣವನ್ನು ಸರ್ಪಕಾವಲು ಕಾದರು. ಭಗತ್‌ಸಿಂಗ್ ಸೈನ್ಯಾಧಿಪತಿಯ

ಸಮವಸ್ತ್ರ ಧರಿಸಿ, ಒಬ್ಬ ಇಂಗ್ಲಿಷ್ ಮಹಿಳೆಯೊಂದಿಗೆ ಸ್ಟೇಷನ್ನಿಗೆ ಬಂದು ಫಸ್ಟ್‌ಕ್ಲಾಸ್ ಟಿಕೆಟು ಗಳನ್ನು ಕೊಂಡ. ಸಿ. ಐ. ಡಿ.ಗಳಿಗೆ ಅವನ ಗುರುತು ಹತ್ತಲಿಲ್ಲ. ಸೀಟಿಯಾಯಿತು. ರೈಲು ಹೊರಟೇ ಬಿಟ್ಟಿತು. ಭಗತ್ ಸಿಂಗ್ ಪೋಲೀಸಿನವರ ಕೈಯಿಂದ ಪಾರಾಗಿದ್ದ.

ಬಂಗಾಳದಲ್ಲಿ ವೀರಬಾಲಿಕೆಯರು ಭಾರತೀಯರನ್ನು ಪೀಡಿಸುತ್ತಿದ್ದ ಬ್ರಿಟಿಷ್ ಅಧಿಕಾರಿಗಳ ಮೇಲೆ ಬಾಂಬುಗಳನ್ನೆಸೆದರು. ಈ ಕಿರಿಯರಿಗೆ ಹಿಂದೂಸ್ಥಾನವೆಂದರೆ ಪಂಚಪ್ರಾಣ. ಆದರೆ ಹಿಂಸಾಮಾರ್ಗ ಗಳಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸುತ್ತದೆಯೆಂಬ ತಪ್ಪು ಭಾವನೆ ಅವರಲ್ಲಿ ಮೂಡಿಬಿಟ್ಟಿತ್ತು. ಗಾಂಧೀಜಿ ಅವರ ಧೈರ್ಯ ಪರಾಕ್ರಮಗಳನ್ನು ಮೆಚ್ಚುತ್ತಿದ್ದರು. ಆದರೆ ಯಾವಾಗಲೂ ಅಹಿಂಸಾಮಾರ್ಗವನ್ನೇ ಅನುಸರಿಸಿ ಎಂದು ಹೇಳುತ್ತಿದ್ದರು. ಭಗತ್ ಸಿಂಗನನ್ನು ಕ್ಷಮಿಸಬೇಕೆಂದು ವೈಸರಾಯ್‌ರಲ್ಲಿ ಗಾಂಧೀಜಿ ಮೊರೆಯಿಟ್ಟರು. ಭಗತ್ ಸಿಂಗನನ್ನು ಕೊನೆಗೂ ಆಳರಸರು ಹಿಡಿದು, ಗಲ್ಲಿಗೇರಿಸಬೇಕೆಂದು ನಿರ್ಧರಿಸಿಬಿಟ್ಟರು.

ಭಗತ್ ಸಿಂಗನ ಬಲಿದಾನವಾದಮೇಲೆ ಜವಾಹರಲಾಲರು ಹೇಳಿದರು: 'ನಮ್ಮ ಮತ್ತು ಬ್ರಿಟಿಷ್ ಸರ್ಕಾರದ ಮಧ್ಯೆ ಭಗತ್ ಸಿಂಗರ ನೆನಪು ಸದಾ ನಿಂತಿರುತ್ತದೆ' ಎಂದು.

# ಅಸಹಕಾರ ಸಮರಗಳು

ಗಾಂಧೀಜಿ ತಮ್ಮ ಮಾರ್ಗದಲ್ಲಿ ಮುಂದಿನ ಹನ್ನೆರಡು ವರ್ಷ ಬ್ರಿಟಿಷ್ ಸರ್ಕಾರದೊಂದಿಗೆ ಹೋರಾಡಿದರು. ಇಂಥ ಒಂದು ಹೋರಾಟದ ಕಥೆ ಗಾಂಧೀಜಿಯವರ ವಿಚಿತ್ರಮಾರ್ಗವನ್ನು ನಿರ್ದೇಶಿಸುತ್ತದೆ.

ಊಟಕ್ಕೆ ರುಚಿಕೊಡುವುದು ಉಪ್ಪೆಂದು ಎಲ್ಲರೂ ಬಲ್ಲರು. ತನ್ನ ಊಟವನ್ನು ರುಚಿಗೊಳಿಸಲು ಬಡಭಾರತೀಯನಿಗೆ ಉಪ್ಪು ಬಿಟ್ಟು ಬೇರೆ ಪದಾರ್ಥವೇ ಇಲ್ಲ. ಸರ್ಕಾರ ಉಪ್ಪಿನ ಮೇಲೆ ವಿಪರೀತ ಕರ ವಿಧಿಸಿತು. ಇದು ಅನ್ಯಾಯದ ಕರವೆಂದು ಗಾಂಧೀಜಿ ಭಾವಿಸಿದರು. ತಮ್ಮ ಕೈಯಿಂದಲೇ ಉಪ್ಪು ತಯಾರಿಸುವುದಾಗಿ ಗಾಂಧೀಜಿ ಹೇಳಿದರು. ಹೀಗೆ ಮಾಡುವುದು ಕಾನೂನಿಗೆ ವಿರುದ್ಧವಾಗಿತ್ತು. ಸರ್ಕಾರವನ್ನೆದುರಿಸಲು ಇದು ಗಾಂಧೀಜಿಯ ಮಾರ್ಗ. ಸಮುದ್ರದ ಬಳಿಯಿಂದ ದಂಡಿಗೆ ಸರೋಜಿನಿ ದೇವಿ ಮತ್ತು ಇತರ ಅನುಯಾಯಿಗಳೊಂದಿಗೆ ಗಾಂಧೀಜಿ ಹೊರಟರು. ಅಲ್ಲಿ ಸಮುದ್ರದ ನೀರಿನಿಂದ ಉಪ್ಪು ತಯಾರಿಸಿದರು. ಸರ್ಕಾರ ಅವರನ್ನು ಬಂಧಿಸಿತು. ಮಾರನೆಯ ದಿನ ದೇಶಾದ್ಯಂತ ಯಾರೂ ತಮ್ಮ ಕೆಲಸಗಳಿಗೆ ಹೋಗಲಿಲ್ಲ. ಸಾವಿರಾರು ಜನ ಗಾಂಧೀಜಿ ಮಾರ್ಗವನ್ನನುಸರಿಸಿ ಸೆರೆಮನೆ ಸೇರಿದರು.

ಗಾಂಧೀಜಿಯವರನ್ನು ತಮ್ಮ ಕಡೆ ಮಾಡಿಕೊಳ್ಳಬೇಕೆಂದು ಸರ್ಕಾರ ನಿಶ್ಚಯಿಸಿತು. ವೈಸರಾಯ್ ಲಾರ್ಡ್ ಅರ್ವಿನ್ನರೊಂದಿಗೆ ಮಾತುಕತೆ ನಡೆಸಲು ಗಾಂಧೀಜಿ ಒಪ್ಪಿದರು. ಲಂಡನ್ನಿಗೂ ಹೋಗಿ

ಬಂದರು. ಬ್ರಿಟಿಷರು ಆಡುತ್ತಿದ್ದುದೊಂದು, ಮಾಡುತ್ತಿದ್ದುದೊಂದು. ಜನರನ್ನು ಹಿಂಸಿಸುವುದನ್ನು ಅವರು ಬಿಡಲೇ ಇಲ್ಲ.

ಲಂಡನ್ನಿನಿಂದ ಹಿಂದಿರುಗಿದ ಮೇಲೆ ೧೯೩೨ನೆಯ ಇಸವಿಯಲ್ಲಿ ಗಾಂಧೀಜಿ ಮತ್ತೊಂದು ಅಹಿಂಸಾ ಸಂಗ್ರಾಮವನ್ನಾರಂಭಿಸಿದರು. ಸಾವಿರಾರು ಜನ ಸೆರೆಮನೆ ಸೇರಿದರು. ಪೋಲೀಸಿನವರು ಹೆಣ್ಣು ಮಕ್ಕಳನ್ನು ಲಾಠಿಗಳಿಂದ ಬಡಿದರು. ಜವಾಹರಲಾಲರ ವೃದ್ಧತಾಯಿಯನ್ನೂ ಬಡಿದರು. ಹಿಂದುಗಳ ವಿರುದ್ಧ ಮುಸ್ಲಿಮರನ್ನೆತ್ತಿಕಟ್ಟಲು ಸರ್ಕಾರ ಪ್ರಯತ್ನಿಸಿತು.

'ಹಿಂದೂ ಮುಸಲ್ಮಾನರಿಗೆ ಜಯವಾಗಲಿ' ಎಂಬ ಜಯಘೋಷ ಜನಕ್ಕೆ ಮರೆತುಹೋಗಿತ್ತು. ಕೆಲವು ಉಗ್ರ ಕಟುಧರ್ಮಿಗಳಾದ ಮುಸ್ಲಿಮ ನಾಯಕರು ಹಿಂದುಗಳ ವಿರುದ್ಧ ಬಡ ನಿರುದ್ಯೋಗಿ ಮುಸ್ಲಿಮರ ಹೃದಯದಲ್ಲಿ ವಿಷ ತುಂಬಿದರು. ಕಟುಧರ್ಮಿಗಳಾದ ಹಿಂದೂಗಳ ಸಂಸ್ಥೆ ಹಿಂದೂ ಮಹಾಸಭೆ ಅದೇ ರೀತಿಯಲ್ಲಿ ಮುಸ್ಲಿಮರ ಬಗ್ಗೆ ದ್ವೇಷ ಹಬ್ಬಿಸಿತು. ರಾಷ್ಟ್ರಸಭೆ ಧರ್ಮಸಂಸ್ಥೆ ಯಾಗಿರಲಿಲ್ಲ. ಕೆಲವು ಹಿಂದೂ ಮಹಾಸಭೆಯ ಮನೋಭಾವವುಳ್ಳವರು ರಾಷ್ಟ್ರಸಭೆಯನ್ನು ಸೇರಿ ಅದರ ಮೇಲೆ ವರ್ಚಸ್ಸು ಬೀರಲೆತ್ನಿಸಿದರು. ಸ್ವಮತಭ್ರಾಂತರಾದ ಕೆಲವು ಮುಸ್ಲಿಮ ನಾಯಕರು ರಾಷ್ಟ್ರಸಭೆ ಮುಸ್ಲಿಮರ ಹಿತರಕ್ಷಣೆ ಮಾಡಲಾರದೆಂದು ಪ್ರಚಾರ ಮಾಡಲಾರಂಭಿಸಿದರು. ಹಳ್ಳಿಗಳಲ್ಲಿ, ಕಾರ್ಖಾನೆಗಳಲ್ಲಿ ಹಿಂದೂ ಮುಸ್ಲಿಮರು ಸೌಹಾರ್ದದಿಂದಲೇ ಇರುತ್ತಿದ್ದರು. ಸಾಮಾನ್ಯ ಜನ ಹಿಂದೂ-ಮುಸ್ಲಿಮರೆಂಬ ಭೇದವಿಲ್ಲದೆ ಎಲ್ಲೆಲ್ಲಿಯೂ ಬ್ರಿಟಿಷ್‌ಶಾಹಿಯ ವಿರುದ್ಧ ಹೋರಾಡುತ್ತಿದ್ದರು.

ಬಾರ್ಡೋಲಿಯ ಸಮರ ನಮ್ಮ ಜನರ ವೀರತನದ ಕುರುಹಾಗಿದೆ. ಬ್ರಿಟಿಷರು ಗಾಬರಿಯಾಗಿ ಸುಧಾರಣೆಗಳ ಮಾತುತೆಗೆದರು. ಪ್ರಧಾನಮಂತ್ರಿ ಬಾಲ್ಡ್‌ವಿನ್ ಹೇಳಿದರು: 'ಭಾರತೀಯರಿಗೆ ನಾವು ಕೊಡುವ ಅಧಿಕಾರ, ನಮ್ಮ ಉದ್ದೇಶಕ್ಕನುಗುಣವಾಗಿಯೇ ಉಪಯೋಗಿಸಲ್ಪಡಬೇಕು.'

೧೯೩೭ರ ಚುನಾವಣೆಗಳಲ್ಲಿ ರಾಷ್ಟ್ರಸಭೆ ಭಾಗವಹಿಸಿತು. ಹನ್ನೊಂದು ಪ್ರಾಂತ್ಯಗಳ ಒಂಭತ್ತು ಪಾರ್ಲಿಮೆಂಟುಗಳಲ್ಲಿ ರಾಷ್ಟ್ರಸಭೆಯ ಪ್ರತಿನಿಧಿಗಳು ಆಯ್ಕೆಯಾಗಿ ಮಂತ್ರಿತ್ವ ವಹಿಸಿದರು. ದೆಹಲಿಯ ಕೇಂದ್ರಸರ್ಕಾರದಲ್ಲಿ ಸೇರಲು ನಮ್ಮ ಮಹಾನಾಯಕರು ಸಮ್ಮತಿಸಲಿಲ್ಲ. ಜನರ ಪ್ರತಿನಿಧಿಗಳೊಂದಿಗೆ ಕೂಡಲು ತಮಗೆ ಬೇಕಾದವರನ್ನು ಕಳುಹಿಸುವ ಹಕ್ಕು ರಾಜರಿಗೆ ಕೊಡಲ್ಪಟ್ಟಿತ್ತು. ಇದು ಪ್ರಜಾಸರ್ಕಾರದ ನಿಯಮಕ್ಕೆ ವಿರುದ್ಧವಾಗಿತ್ತು. ದೆಹಲಿಯಲ್ಲಿ ನೈಜ ಪ್ರಜಾಸರ್ಕಾರ ರೂಪಗೊಳ್ಳಲೇ ಇಲ್ಲ.

## ಜವಾಹರಲಾಲ ನೆಹರೂ

ಮಹಾತ್ಮಾ ಗಾಂಧಿಯವರ ತರುವಾಯ ಜವಾಹರಲಾಲ ನೆಹರೂ ನಮ್ಮ ಮಹಾನಾಯಕರಾದರು. ತರುಣ ಹೋರಾಟಗಾರರಾಗಿದ್ದಾಗಲೇ ಇವರು ತಮ್ಮ ಸರ್ವಸ್ವವನ್ನೂ ದೇಶಕ್ಕೆ ಧಾರೆಯೆರೆದಿದ್ದರು. ಅವರಿಗೆ ಹಿಂದೂಸ್ಥಾನದ ಮೇಲೆ ಮಾತ್ರ ಪ್ರೇಮವಲ್ಲ; ಸ್ವತಂತ್ರ ವ್ಯಕ್ತಿಗಳೆಲ್ಲರ ಮೇಲೂ ನಿಕಟ ಪ್ರೇಮ. ಬೇರೆ ಬೇರೆ ದೇಶದ ಜನರು ನಡೆಸಿದ ಸ್ವಾತಂತ್ರ್ಯ ಸಂಗ್ರಾಮದ ಸ್ವರೂಪವನ್ನರಿಯುವುದಕ್ಕೆ ಅವರು ಜಗತ್ತನ್ನೆಲ್ಲಾ ಸುತ್ತಿಬಂದರು. ಅವರ ಮುಂದಾಳುತನದಲ್ಲಿ ಸ್ವಾತಂತ್ರ್ಯಬೇಡಿಕೆ



ತೀಕ್ಷ್ಣವಾಗುತ್ತ ಬಂದಿತು. ರಾಷ್ಟ್ರಸಭೆ ಪ್ರಬಲ ಸಂಸ್ಥೆಯಾಯಿತು. ತಮ್ಮ ತರುಣ ನಾಯಕರ ಜತೆಗೆ ಅನೇಕ ರೈತರು, ಕಾರ್ಮಿಕರು ರಾಷ್ಟ್ರಸಭೆ ಸೇರಿದರು.

## 'ಧರ್ಮಕ್ಕೆ ಅಪಾಯ'

ನಮ್ಮ ದೇಶದ ಕೆಲವು ಶ್ರೀಮಂತ ಹಿಂದೂ ಮುಸ್ಲಿಮರಿಗೆ ತರುಣರಲ್ಲಿದ್ದ ಐಕಮತ್ಯ ಸರಿಬೀಳಲಿಲ್ಲ. ಅವರು 'ಧರ್ಮಕ್ಕೆ ಅಪಾಯ' ಒದಗಿದೆ ಎಂದು ಬೊಬ್ಬೆ ಹಾಕಿದರು. ಬೇರೆ ಬೇರೆ ಜಾತಿ, ಮತ, ಪಂಥ, ಕೋಮುಗಳಲ್ಲಿ ವಿಷಬೀಜ ಬಿತ್ತಲು ಅವರು ಬ್ರಿಟಿಷರಿಗೂ ಸ್ವಮತಭ್ರಾಂತ, ಹಿಂದೂ-ಮುಸ್ಲಿಮರಿಗೂ ನೆರವಾದರು. ಹಿಂದೂ-ಮುಸ್ಲಿಮರಿಬ್ಬರೂ ಹಸಿವಿನ ಬಾಧೆಯಿಂದ ತೊಳಲಾಡುತ್ತಿದ್ದರು. ಹಸಿವಿಗೆ ಜಾತಿ ಮತವಿದೆಯೇ? ಆದರೆ ಹಸಿದವರಿಗೆ ಬುದ್ಧಿ ಸ್ವಾಧೀನದಲ್ಲಿರುವುದಿಲ್ಲ. ಅವರನ್ನು ಸುಲಭವಾಗಿ ದಾರಿತಪ್ಪಿಸಿ ಪರಸ್ಪರ ಭಯ, ವಿರೋಧಗಳಲ್ಲಿ ಮಗ್ನರಾಗುವಂತೆ ಈ ಕುಟಿಲರು ಮಾಡಿದರು.

## ಮಹಮದ್ ಆಲಿ ಜಿನ್ನಾ

ಒಂದು ಕಾಲದಲ್ಲಿ ಮಹಮದ್ ಆಲಿ ಜಿನ್ನಾ ರಾಷ್ಟ್ರಸಭೆಯಲ್ಲಿದ್ದು ಉತ್ತಮ ಕೆಲಸ ಮಾಡಿದರು. ಕೆಲಕಾಲಾನಂತರ ಅವರು ರಾಷ್ಟ್ರಸಭೆ ಬಿಟ್ಟು ಮುಸ್ಲಿಮ್ ಲೀಗಿನ ನಾಯಕರಾದರು. ಮುಸ್ಲಿಮರ ಹಕ್ಕು ಬಾಧ್ಯತೆಗಳ ಅಂಗೀಕಾರದ ಬಗ್ಗೆ ಅವರಿಗೆ ಪೂರ್ಣ ಭರವಸೆಯಿತ್ತು. ಕೆಲವು ಹಿಂದುಗಳು

ಮುಸ್ಲಿಮರ ಬಗ್ಗೆ ಸರಿಯಾದ ರೀತಿಯಲ್ಲಿ ವರ್ತಿಸಲಿಲ್ಲವಾದ್ದರಿಂದ ಹಿಂದುಗಳೆಲ್ಲಾ ಕೆಟ್ಟವರೆಂದು ಅವರು ಸಾರಿದರು. ಅನ್ನಕ್ಕಿಂತ ಧರ್ಮ ಮುಖ್ಯವೆಂದು ಅವರು ಬಡ ಮುಸ್ಲಿಮರಿಗೆ ಬೋಧಿಸಿದರು. ತಾವು ಪ್ರತ್ಯೇಕ ರಾಷ್ಟ್ರವೆಂದೂ ಹಿಂದುಗಳಿಗೂ ತಮಗೂ ಯಾವ ಸಂಬಂಧವಿಲ್ಲವೆಂದೂ ಆದ್ದರಿಂದ ಪಾಕಿಸ್ಥಾನವನ್ನು ಗಳಿಸಬೇಕೆಂದು ಅವರು ಹೇಳಿದರು.

## ಎರಡನೆಯ ಜಗತ್ತಿನ ಸಮರ (೧೯೩೯-೪೫)

ಜರ್ಮನಿಯಲ್ಲಿ ಹಿಟ್ಲರನೆಂಬ ಸರ್ವಾಧಿಕಾರಿಯ ಉದಯವಾಗಿತ್ತು. ಇಟಲಿಯಲ್ಲಿ ಸರ್ವಾಧಿಕಾರಿ ಮುಸೊಲೀನಿಯ ಉದಯವಾಗಿತ್ತು. ಜಪಾನಿನಲ್ಲಿ ಶ್ರೀಮಂತರೂ, ಸೈನ್ಯಾಧಿಕಾರಿಗಳೂ ಒಂದಾಗಿದ್ದರು. ಈ ಮೂರು ಪ್ರಬಲ ರಾಷ್ಟ್ರಗಳು ಜಗತ್ತನ್ನು ಜಯಿಸಲು ಹವಣಿಸಿದವು.

ಬ್ರಿಟನ್ನಿನ ಮತ್ತು ಈ ಮೂರು ದೇಶಗಳ ಶ್ರೀಮಂತರಿಗೆ ಸಖ್ಯವಿದ್ದುದರಿಂದ ಇವರಿಗೆ ಸಹಾಯ ಮಾಡಲು ಬ್ರಿಟನ್ನು ಮೊದಲು ಮುಂದುವರಿಯಿತು. ಅವರು ಪರಸ್ಪರ ವ್ಯಾಪಾರಮಾಡಿ ಅಪಾರ ಹಣ ಗಳಿಸಿದರು. ಅಮೇರಿಕೆಯ ಶ್ರೀಮಂತರೂ ಇವರಿಗೆ ನೆರವಾದರು. ಆದರೆ ಜಗತ್ತಿನ ಎಲ್ಲಾ ಭಾಗಗಳ ಯೋಗ್ಯರು ಇವರ ವಿರುದ್ಧವಿದ್ದರು. ಸಾಮಾನ್ಯ ಜನಗಳ ಕೈಯಲ್ಲಿ ದೇಶದಾಡಳಿತ ಉಳಿದು ನಿಜವಾದ ಪ್ರಜಾಸರ್ಕಾರ ಏರ್ಪಡಬೇಕೆಂದು ಬಹು ಜನರ ಮತವಾಗಿತ್ತು. ಆದರೆ ಪ್ರಜಾಸರ್ಕಾರ ಬೇಡಿದ ಎಲ್ಲರನ್ನೂ ಅವರವರ ಆಳರಸರು ತುಳಿದರು.

ಹಿಟ್ಲರ್ ಒಂದಾಗುತ್ತಲೊಂದು ದೇಶವನ್ನು ನುಂಗುತ್ತ ಬಂದ. ಜರ್ಮನಿಯ ನೆರೆಹೊರೆಯವರನ್ನು ಬೆದರಿಸಿದ. ಆತ್ಮರಕ್ಷಣೆಗಾಗಿ ಬ್ರಿಟನ್ ಕೊನೆಗೆ ಹಿಟ್ಲರ್ ಮೇಲೆ ಯುದ್ಧ ಸಾರಬೇಕಾಯಿತು. ಬ್ರಿಟನ್ನಿನ ಯೋಗ್ಯರು ಯಾವಾಗಲೂ ಪ್ರಜಾಸರ್ಕಾರ ಪ್ರಿಯರು. ಆಳರಸರು ಅವರ ಮಾತಿಗೆ ಕಿವಿ ಕೊಡುತ್ತಿರಲಿಲ್ಲ. ಕೊನೆಗೆ ವಿವೇಕ ಬಂತು. ಎರಡನೆಯ ಮಹಾಯುದ್ಧ ಮೊದಲಾಯಿತು.

ಹಿಂದೂಸ್ಥಾನದ ಅಭಿಪ್ರಾಯ ಕೇಳದೆ ಬ್ರಿಟನ್ ಅದನ್ನು ಯುದ್ಧಕ್ಕೆ ಸೆಳೆಯಿತು. ಸ್ವಾತಂತ್ರ್ಯ, ಪ್ರಜಾಸರ್ಕಾರಗಳಿಗೆ ಹೋರಾಡಲು ಭಾರತವನ್ನು ಬ್ರಿಟನ್ ಬಂಧವಿಮುಕ್ತ ಮಾಡಲಿಲ್ಲ.

ನಮ್ಮ ನಾಯಕರು ಹಿಟ್ಲರ್, ಮುಸೊಲೀನಿ, ಜಪಾನಿನ ರಾಕ್ಷಸ ದಳಪತಿಗಳೆಂದರೆ ಕಿಡಿಕಿಡಿಯಾಗುತ್ತಿದ್ದರು. ಹಿಂದೂಸ್ಥಾನ ಯುದ್ಧದಲ್ಲಿ ಭಾಗವಹಿಸಬೇಕಾದರೆ ಅದಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಜವಾಹರಲಾಲ ನೆಹರೂ ಬ್ರಿಟಿಷರಿಗೆ ಹೇಳಿದರು. ಬ್ರಿಟಿಷರು ಅವರ ಕರಾರಿಗೆ ಒಪ್ಪಿಕೊಳ್ಳಲಿಲ್ಲ.

ಮಹಾತ್ಮಾ ಗಾಂಧಿಯವರು ಮತ್ತೆ ಅಹಿಂಸಾ ಸಮರ ಹೂಡಬೇಕಾಗಿ ಬಂತು.

ಬ್ರಿಟಿಷ್ ಸರ್ಕಾರ ಇಂಥ ಪರಿಸ್ಥಿತಿಯಲ್ಲಿಯೂ ಹಿಂದೂಸ್ಥಾನದ ಆಸೆ ಆಕಾಂಕ್ಷೆಗಳನ್ನು ಗೌರವಿಸಲಿಲ್ಲ. ಹಿಟ್ಲರನಿಂದ ಮತ್ತು ಜಪಾನಿಗಳಿಂದ ಅವರಿಗೆ ಎಲ್ಲೆಲ್ಲೂ ಸೋಲುಗಳಾಗುತ್ತಿದ್ದವು. ಅವರು ಸ್ವಾತಂತ್ರ್ಯ, ಪ್ರಜಾಸರ್ಕಾರಕ್ಕಾಗಿ ಯುದ್ಧಮಾಡುತ್ತಿರುವುದಾಗಿ ಹೇಳುತ್ತಿದ್ದರು. ಆದರೆ ಅವುಗಳನ್ನೇ ಹಿಂದೂಸ್ಥಾನಕ್ಕೆ ಕೊಡಲೊಪ್ಪಲಿಲ್ಲ.

ಹಿಟ್ಲರ್ ಸೋವಿಯಟ್ ಯೂನಿಯನಿಗೆ ಮುತ್ತಿಗೆ ಹಾಕಿದ. ಭಾರತಕ್ಕೆ ಸ್ವಾತಂತ್ರ್ಯಕೊಟ್ಟರೆ ತಾವು ನೆರವು ನೀಡುವುದಾಗಿ ಮತ್ತೆ ಜವಾಹರಲಾಲ್ ನೆಹರೂ ತಿಳಿಸಿದರು.

ಒಂಭತ್ತು ವರ್ಷಗಳಿಂದ ಜಪಾನಿಗಳು ಚೀಣಿಯರೊಂದಿಗೆ ಕಾದುತ್ತಿದ್ದರು. ಜಪಾನಿಗಳು ಪರ್ಲ್ ಬಂದರದಲ್ಲಿದ್ದ ಅಮೇರಿಕೆಯನ್ನರನ್ನು ಎದುರಿಸಿದರು. ಬ್ರಿಟಿಷರಿಗೆ ಸೇರಿದ್ದ ಹಾಂಗ್‌ಕಾಂಗ್, ಮಲಯಾ, ಬರ್ಮಾ, ಡಚ್ಚರಿಗೆ ಸೇರಿದ್ದ ಇಂಡೋನೇಷ್ಯ ಅವರ ಕೈವಶವಾದವು.

ಎಲ್ಲರೀತಿಯಲ್ಲಿಯೂ ಯುದ್ಧ ಜಗತ್ತನ್ನೇ ವ್ಯಾಪಿಸಿ ಜಗತ್ತಿನ ಸಮರವಾಗುತ್ತ ಬಂತು.

## ೫೧. ಚರ್ಚಿಲ್

ಈಗ ಬ್ರಿಟಿಷ್ ಸರ್ಕಾರ ಕಣ್ಣು ಬಿಟ್ಟಿತು. ಹಿಂದೂಸ್ಥಾನದ ಕಡು ವಿರೋಧಿಯೆಂದರೆ ಬ್ರಿಟನ್ನಿನ ಪ್ರಧಾನ ಮಂತ್ರಿ ಚರ್ಚಿಲ್. ಅವರೂ ಈಗ ಸ್ವಲ್ಪ ಬಾಗಬೇಕಾಯಿತು. ನಮ್ಮ ನಾಯಕರೊಂದಿಗೆ ಮಾತುಕತೆ ನಡೆಸಲು ಸರ್ ಸ್ಟ್ಯಾಫರ್ಡ್ ಕ್ರಿಪ್ಸ್‌ನನ್ನು ಕಳುಹಿಸಿಕೊಟ್ಟರು. ನಿಜವಾದ ಅಧಿಕಾರ ಭಾರತೀಯರಿಗೆ ಕೊಡಲು ಕ್ರಿಪ್ಸ್‌ಗೆ ಮನಸ್ಸಿಲ್ಲ. ಅಧಿಕಾರ ಇನ್ನೂ ವೈಸರಾಯರ ಕೈಯಲ್ಲೇ ಇತ್ತು. ಕ್ರಿಪ್ಸ್ ಸಂಧಾನ ಮುರಿದು ಬಿತ್ತು.

## ಭಾರತ ಬಿಟ್ಟು ತೊಲಗಿ

ಭಾರತ ಬಿಟ್ಟು ತೊಲಗಿ ಹೋಗಿರೆಂದು ಮಹಾತ್ಮ ಗಾಂಧಿಯವರು ಬ್ರಿಟಿಷರಿಗೆ ಹೇಳಿದರು.

೧೯೪೨ನೆಯ ಇಸವಿ ೯ನೆಯ ಆಗಸ್ಟ್ ಸರ್ಕಾರ ಹಿಂದೂಸ್ಥಾನದ ನಾಯಕರನ್ನೆಲ್ಲಾ ಬಂಧಿಸಿತು. ಜನ ಕೆರಳಿ ದಂಗೆಯೆದ್ದರು. ಜನರು ಸರ್ಕಾರದೊಂದಿಗೆ ಎಲ್ಲ ಕಡೆಗಳಲ್ಲಿಯೂ ಹೋರಾಟಕ್ಕೆ ನಿಂತರು.

ಸರ್ಕಾರದ ಉಪೇಕ್ಷೆಯಿಂದ ಬಂಗಾಳದಲ್ಲಿ ಘೋರ ಕ್ಷಾಮ ತಲೆದೋರಿತು. ಅರ್ಧ ಕೋಟಿ ಜನ ಹಸಿವಿನಿಂದ ಸತ್ತರು. ದೇಶ ದುಃಖದಿಂದ ಕಣ್ಣೀರ್ಗರೆಯಿತು.

## ಸುಭಾಷ್ ಬೋಸರೂ, ಐ. ಎನ್. ಎ.

ಯುದ್ಧಾರಂಭವಾದ ಕೂಡಲೇ ಬಂಗಾಳದ ನಾಯಕರಾದ ಸುಭಾಷ್‌ಚಂದ್ರ ಬೋಸರ ಮೇಲೆ ಸರ್ಕಾರ ಸರ್ಪಕಾವಲು ಹಾಕಿತು. ಬೋಸರ ಧೈರ್ಯ, ದೇಶಪ್ರೇಮದ ಮುಂದೆ ಯಾವ ಅಡ್ಡಿಯೂ ನಿಲ್ಲಲಾಗಲಿಲ್ಲ. ಅವರು ವೇಷ ಮರೆಸಿ ತಪ್ಪಿಸಿಕೊಂಡು ಹಿಂದೂಸ್ಥಾನಕ್ಕೆ ಸಹಾಯ ದೊರಕಿಸಲು ಪ್ರಪಂಚ ಪರ್ಯಟನ ಮಾಡಿದರು. ಬೇರೆ ದೇಶಗಳಲ್ಲಿದ್ದ ಭಾರತೀಯರು ಅವರಿಗೆ ನೆರವಾದರು. ಅವರು ಬೋಸರಿಗೆ ಹಣ ಒದಗಿಸಿಕೊಟ್ಟು ಅವರ ಸೈನ್ಯಕ್ಕೆ ಸೇರಿದರು. ಈ ಸೈನ್ಯವನ್ನು ಅವರು

ಹಿಂದೂಸ್ಥಾನದ ರಾಷ್ಟ್ರಸೈನ್ಯ ಎಂದು ಕರೆದರು. ಅವರು ಸಿಯಾಮಿನ ಬಾಂಗ್‌ಕೋಕ್‌ನಲ್ಲಿದ್ದರು. ಅಲ್ಲಿಂದ ಅವರ ಸೈನ್ಯಗಳು ಹಿಂದೂಸ್ಥಾನದತ್ತ ಸಾಗಿದವು.

## ಯುದ್ಧದ ಪರಿಸಮಾಪ್ತಿ

ಜರ್ಮನರನ್ನು ಸಾವಿರಾರು ಮೈಲಿಯಾಚೆ ಹೊಡೆದಟ್ಟಿ ಸೋವಿಯಟ್ ಸೈನ್ಯ ಬರ್ಲಿನ್ ನಗರವನ್ನು ಪ್ರವೇಶಿಸಿತು. ಫ್ರಾನ್ಸ್, ಇಟಲಿ ದೇಶಗಳಲ್ಲಿದ್ದ ಅಮೇರಿಕೆಯ, ಇಂಗ್ಲೆಂಡಿನ ಸೈನ್ಯಗಳೂ ಜರ್ಮನಿಗೆ ಬಂದು ಸೋವಿಯಟ್ ಸೈನ್ಯದೊಂದಿಗೆ ಕೂಡಿಕೊಂಡವು.

ಹಿಟ್ಲರ್, ಮುಸೊಲೀನಿಯರಿಗೆ ಸೋಲಾಯಿತು.

ಕೂಡಲೆ ಏಕಪಕ್ಷೀಯರಾದ ಸೋವಿಯಟ್ ಯೂನಿಯನ್ನಿನವರು, ಇಂಗ್ಲಿಷರು, ಅಮೇರಿಕನ್ನರು ಜಪಾನಿನ ಮೇಲೆ ತಿರುಗಿಬಿದ್ದರು. ಅಮೇರಿಕೆಯ ವಿಜ್ಞಾನಿಗಳು ಯೂರೋಪಿನ ವಿಜ್ಞಾನಿಗಳ ನೆರವಿನಿಂದ ಪ್ರಬಲ ಆಯುಧ—ಆಟಂ ಬಾಂಬನ್ನು ಕಂಡುಹಿಡಿದಿದ್ದರು. ಅಮೇರಿಕನ್ನರು ಗೋಪ್ಯವಾಗಿ ಆಟಂ ಬಾಂಬುಗಳನ್ನು ಮಾಡಿ ಎರಡನ್ನು ಜಪಾನಿನ ಮೇಲೆ ಒಗೆದರು. ಸಾಧಾರಣ ಬಾಂಬುಗಳಿಗಿಂತ ಇವು ನೂರುಪಾಲು ಭಯಂಕರ. ಜಪಾನಿನಲ್ಲಿ ಸಾವಿರಾರು ಜನ ಮರಣಹೊಂದಿದರು. ಸಾವಿರಾರು ಜನಕ್ಕೆ ಘಾಯ ಗಳಾದವು. ಮಿತ್ರಪಕ್ಷದ ಸೇನೆಗಳೂ ಜಪಾನಿನ ಕಡೆಗೆ ಧಾವಿಸುತ್ತಿದ್ದವು. ಜಪಾನ್ ಶರಣಾಗತವಾಯಿತು.

ಎರಡನೆಯ ಮಹಾಯುದ್ಧ ಇಲ್ಲಿಗೆ ಪರಿಸಮಾಪ್ತಿ ಹೊಂದಿತು.

# ಜನತೆಯ ಮನೋಭಾವ

ನಮ್ಮ ಜನತೆಗೆ ಸುಖ ದಕ್ಕಲಿಲ್ಲ. ಅವರ ಕೋಪ ಉಕ್ಕೇರುತ್ತಿತ್ತು. ಮನಸ್ಸು ಕಷಾಯವಾಯಿತು. ಆದರೂ ಚರ್ಚಿಲ್ ಲಕ್ಷಿಸಲಿಲ್ಲ.

ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿನ ಹೊಸ ಚುನಾವಣೆಗಳಾದವು. ಚರ್ಚಿಲ್ಲನಿಗೂ ಅವನ ಶ್ರೀಮಂತರ ಪಕ್ಷಕ್ಕೂ ಪರಾಜಯವಾಗಿ ಬ್ರಿಟಿಷ್ ಕಾರ್ಮಿಕ ಪಕ್ಷದವರು ಅಧಿಕಾರಕ್ಕೆ ಬಂದರು. ಆದರೆ ಹಿಂದೂ ಸ್ಥಾನದಲ್ಲಿದ್ದ ಸರ್ಕಾರ ಹಳೆಯ ಜಾಡಿನಲ್ಲೇ ಹೋಗುತ್ತಿತ್ತು. ಭಾರತ ರಾಷ್ಟ್ರಸೈನ್ಯದ ಜನರನ್ನು ಹಿಡಿದು ವಿಚಾರಣೆಗೆ ಒಳಪಡಿಸಿತು. ಸುಭಾಷ್ ಬೋಸರು ಜಪಾನಿಗೆ ಹೋಗುತ್ತಿರುವಾಗ ಅವರ ವಿಮಾನಕ್ಕೆ ಧಕ್ಕೆ ತಗುಲಿ ಸತ್ತರೆಂದು ಸುದ್ದಿ ಹಬ್ಬಿತು.

ಕಾಂಗ್ರೆಸ್ ಮತ್ತು ಪಂಡಿತ ನೆಹ್ರೂ ಐ. ಎನ್. ಎ. ದಳದವರ ರಕ್ಷಣೆಗೆ ನಿಂತರು. ಕಾಂಗ್ರೆಸ್ ನಾಯಕರಾದ ಭೂಲಾಭಾಯ್ ದೇಶಾಯರೆಂಬ ಪ್ರಸಿದ್ಧ ನ್ಯಾಯವಾದಿಗಳು ವಕಾಲತ್ತು ವಹಿಸಿದರು. ಐ. ಎನ್. ಎ. ಪ್ರಕರಣದಿಂದ ದೇಶ ಕಿಡಿಕಿಡಿಯಾಯಿತು. ಸೈನ್ಯದಲ್ಲಿದ್ದ ಸಿಪಾಯಿಗಳು ಅಶಾಂತ ರಾದರು. ನೌಕಾದಳದಲ್ಲಿದ್ದ ಜನ ತಮಗೆ ಕೊಡುತ್ತಿದ್ದ ಆಹಾರ, ಕಾಣುತ್ತಿದ್ದ ರೀತಿಯ ಬಗ್ಗೆ ವಿರೋಧ ಪ್ರದರ್ಶನ ಮಾಡಿದರು. ಇಂಗ್ಲಿಷ್ ನಾವಿಕರಿಗೇಕೆ ಎಲ್ಲ ಸೌಲಭ್ಯಗಳೂ ಇರಬೇಕು? ತಮ ಗೇಕಿರಬಾರದು ಎಂದು ಕೇಳಿದರು. ಹೆಚ್ಚು ಸಂಬಳ ಬೇಕೆಂದು ಪೋಲೀಸಿನವರೂ ಮುಷ್ಕರ ಹಿಡಿದರು.

ಒಂದು ದಿನ ನೌಕಾದಳದ ವೀರಪುರುಷರು ಮುಂಬಯಿ, ಕರಾಚಿ ಬಂದರುಗಳಲ್ಲಿದ್ದ ಹಡಗುಗಳನ್ನು ಕೈವಶ ಮಾಡಿಕೊಂಡರು. ಜನರು ಅವರ ಬಗ್ಗೆ ಸಹಾನುಭೂತಿ ವ್ಯಕ್ತಮಾಡಲು ದಂಗೆಯೆದ್ದರು.

ಇನ್ನು ಹಿಂದೂಸ್ಥಾನವನ್ನು ಹಿಡಿದಿರುವುದು ಸಾಧ್ಯವಿಲ್ಲವೆಂದು ಬ್ರಿಟಿಷ್ ಸರ್ಕಾರಕ್ಕೆ ಗೊತ್ತಾಯಿತು.

ಜಿನ್ನಾ ಸಾಹೇಬರಿಗೆ ಪಾಕಿಸ್ತಾನ ಬೇಕಾಗಿತ್ತು. ಮುಸ್ಲಿಮರು 'ಉಗ್ರ ಕಾರ್ಯಕ್ರಮ' ಕೈಗೊಳ್ಳಬೇಕೆಂದು ಅವರು ಸಾರಿದರು. ಉಗ್ರ ಕಾರ್ಯಕ್ರಮ ಬ್ರಿಟಿಷರ ವಿರುದ್ಧವಾದುದೆಂದು ಅವರು ತಿಳಿಸಿದರು. ಆದರೆ ಹಿಂದೂ-ಮುಸ್ಲಿಮ ಬಾಂಧವ್ಯಕ್ಕೆ ಧಕ್ಕೆ ತಗುಲಿತು. ಗುಂಡಾಗಳು ಮನಸ್ವೀ ಆಚರಿಸಿ ಗಲಭೆ ಮಾಡುವುದಕ್ಕೆ ಇದು ಸದವಕಾಶ ಕಲ್ಪಿಸಿತು.

ದೇಶಕ್ಕೆ ರಕ್ತಸ್ನಾನವಾಯಿತು. ಕಲ್ಕತ್ತೆಯಲ್ಲಿ ಭಯಂಕರ ದೊಂಬಿಯಾಯಿತು. ಮುಂಬಯಿ, ಬಂಗಾಳ, ಬಿಹಾರಗಳಲ್ಲಿ ಹಿಂದೂ-ಮುಸ್ಲಿಮ ಹೊಡೆದಾಟಗಳಾದವು. ಒಬ್ಬರ ಮನೆಗೊಬ್ಬರು ಬೆಂಕಿಯಿಟ್ಟರು. ಮಕ್ಕಳುಮರಿಗಳನ್ನು ಕಡಿದು ಹಾಕಿದರು.

## ವಿಭಜನೆ

ಬ್ರಿಟಿಷರ 'ವಿಭಜಿಸಿ ಆಳುವ ನೀತಿ'ಯಂತೆ ಎಲ್ಲವೂ ಆಯಿತು.

ಹಿಂದೂಸ್ಥಾನದ ವೈಸರಾಯ್ ಲಾರ್ಡ್ ಮೌಂಟ್‌ಬ್ಯಾಟನ್ ಹಿಂದೂಸ್ಥಾನವನ್ನು ಹಂಚಲು ಒಂದು ಆಲೋಚನೆಯನ್ನು ಸಿದ್ಧಗೊಳಿಸಿದರು. ಇದರಲ್ಲಿ ಇಂಡಿಯನ್ ಯೂನಿಯನ್, ಪಾಕಿಸ್ಥಾನ

ಗಳಿಂದು ದೇಶವನ್ನು ಎರಡು ಭಾಗ ಮಾಡಲಾಗಿತ್ತು. ವಿಭಜನೆಗೆ ಒಪ್ಪಿದರೆ ದೇಶದಲ್ಲಿ ಹರಿಯುತ್ತಿದ್ದ ರಕ್ತದ ಹೊಳೆ ನಿಲ್ಲುವುದೆಂದು ಕಾಂಗ್ರೆಸ್ ನಾಯಕರು ನಂಬಿದರು. ಜನ ನಿರುತ್ಸಾಹದಿಂದ ವಿಭಜನೆಗೆ ಒಪ್ಪಿಕೊಂಡರು. ಅವರು ಒಮ್ಮತಿ ಸಮ್ಮತಿಯಿಂದ ಒಟ್ಟಿಗೆ ಬಾಳಬೇಕೆಂದಿದ್ದರು. ಪಶ್ಚಿಮ ಪಂಜಾಬು, ವಾಯುವ್ಯ ಪ್ರಾಂತ್ಯ, ಸಿಂಧ್, ಬಲೂಚಿಸ್ಥಾನ, ಪೂರ್ವ ಬಂಗಾಳ ಪಾಕಿಸ್ಥಾನವಾಯಿತು. ಉಳಿದ ಭಾಗ ಇಂಡಿಯಾ ಆಯಿತು. ಸರ್ಕಾರ ಪದ್ಧತಿಯಂತೆ ರಾಜರ ಬಗ್ಗೆ ದಯಾರ್ದ್ರತೆ ತೋರಿತು. ಅವರು ಪಾಕಿಸ್ಥಾನಕ್ಕೆ ಅಥವಾ ಇಂಡಿಯನ್ ಯೂನಿಯನ್ನಿಗೆ ಬೇಕಾದರೆ ಸೇರಬಹುದು, ಬೇಡದಿದ್ದರೆ ಬಿಡಬಹುದು ಎಂದು ಸೂಚಿಸಿತು. ಬಹಳ ಜನ ರಾಜರು ಜನಮನವನ್ನರಿತು ತಮ್ಮ ದೇಶವನ್ನೇ ಆಯ್ದುಕೊಂಡರು. ಕೆಲವರಿಗೆ ಅಷ್ಟು ವಿವೇಕವಿರಲಿಲ್ಲ. ರಾಜರು ಜನರ ಮಾತು ಕೇಳುವುದಿಲ್ಲ.

## ೧೯೪೭ ಆಗಸ್ಟ್ ೧೫

೧೯೪೭ನೆಯ ಇಸವಿ ಆಗಸ್ಟು ೧೫ ಇಂಡಿಯಾ ಪಾಕಿಸ್ಥಾನ ಬೇರೆ ಬೇರೆಯಾದವು. ಎರಡೂ ಸ್ವತಂತ್ರರಾಜ್ಯಗಳಾದವು. ಇಂಡಿಯಾದಲ್ಲಿ ಯೂನಿಯನ್ ಜಾಕಿನ ಬದಲು ತ್ರಿವರ್ಣ ಬಾವುಟ ಹಾರಿತು. ಜನ ಸಂತೋಷಭರಿತರಾದರು. ಆದರೆ ಈ ಸಂತೋಷ ಹೆಚ್ಚು ಕಾಲ ಉಳಿಯಲಿಲ್ಲ. ಸರ್ಕಾರ ಜನರನ್ನು ದೇಶವಿಭಜನೆಗೆ ಸಿದ್ಧಗೊಳಿಸಿರಲಿಲ್ಲ. ಎಲ್ಲವನ್ನೂ ಅವಸರದಲ್ಲಿ ಆಯಿತು ಎನ್ನಿಸಿಬಿಟ್ಟರು. ಇಂಡಿಯಾ, ಪಾಕಿಸ್ಥಾನಗಳ ಮೇರೆಗಳನ್ನು ನಿಷ್ಕೃಷ್ಟವಾಗಿ ನಿರ್ಣಯಿಸಲಿಲ್ಲ. ಪಂಜಾಬಿನಲ್ಲಿ

ಹತ್ಯಾಕಾಂಡ ಆರಂಭವಾಯಿತು. ಪಾಕಿಸ್ಥಾನವನ್ನು ಲಕ್ಷಾಂತರ ಹಿಂದೂ ಸಿಕ್ಖರು ಬಿಟ್ಟು ಇಂಡಿಯಕ್ಕೆ ಬಂದರು. ಅದೇ ರೀತಿ ಲಕ್ಷಾಂತರ ಮುಸ್ಲಿಮರು ಇಂಡಿಯ ಬಿಟ್ಟು ಪಾಕಿಸ್ತಾನಕ್ಕೆ ಹೋದರು. ಸಾವಿರಾರು ಜನ ಮಾರ್ಗದಲ್ಲಿಯೇ ಪ್ರಾಣ ಒಪ್ಪಿಸಿದರು. ಸ್ತ್ರೀಯರ ಅಪಹರಣವಾಯಿತು. ಮಕ್ಕಳ ವಧೆಯಾಯಿತು. ಸಿಕ್ಖರು, ಹಿಂದುಗಳು, ಮುಸ್ಲಿಮರು ಎಲ್ಲರೂ ಈ ದೋಷದಲ್ಲಿ ಭಾಗಿಗಳಾಗಿದ್ದರು.

ಜನರ ಮನಸ್ಸನ್ನು ಹಿಂಸೆ ದ್ವೇಷಗಳು ಮುತ್ತಿದವು.

ದೇಶದಲ್ಲೆಲ್ಲಾ ಅಂಧಕಾರ ವ್ಯಾಪಿಸಿತು.

## ಮಹಾತ್ಮರ ಕೊಲೆ

ಈ ಹಿಂಸೆ, ದ್ವೇಷ ಕಂಡು ಮಹಾತ್ಮರ ಮನಸ್ಸು ಬಹು ಖಿನ್ನವಾಯಿತು. ಪೂರ್ವ ಬಂಗಾಳದಲ್ಲಿ ಅವರು ಪ್ರವಾಸ ಕೈಗೊಂಡು ಹಳ್ಳಿಯಿಂದ ಹಳ್ಳಿಗೆ ಹೋಗಿ ಪರಸ್ಪರ ದ್ವೇಷವನ್ನು ತ್ಯಜಿಸಿರೆಂದು ಜನರನ್ನು ಪ್ರಾರ್ಥಿಸಿದರು.

ಕಲ್ಕತ್ತೆಯಲ್ಲಿ ಅವರು ಪವಾಡಗಳನ್ನೇ ಮಾಡಿದರು. ಮುಸ್ಲಿಮರ ಮಧ್ಯೆಯೇ ವಾಸಿಸತೊಡಗಿದರು. ಕೆಲವು ಜಾತ್ಯಂಧ ಹಿಂದುಗಳು ಅವರಲ್ಲಿಗೆ ಬಂದು ಅಗೌರವ ಸೂಚಿಸಿದರು. ಕೆಲವರು ಕಲ್ಲು ಬೀರಿದರು. ಕಲ್ಕತ್ತೆಯ ಜನಕ್ಕೆ ಈ ನಡೆವಳಿಕೆ ಅಸಹ್ಯಕರವೆನಿತು. ಕಲ್ಕತ್ತೆಯ ರಾಜಬೀದಿಗಳಲ್ಲಿ ಹಿಂದೂ

ಮುಸ್ಲಿಮರು ಒಬ್ಬರನ್ನೊಬ್ಬರು ಅಪ್ಪಿ ಮುದ್ದಿಟ್ಟುಕೊಂಡರು. ಕಳೆದು ಹೋಗಿದ್ದ ಸಖ್ಯವನ್ನು ಪುನಃ ಸ್ಥಾಪಿಸಲೆತ್ನಿಸಿದರು.

ಅಲ್ಲಿಂದ ಗಾಂಧೀಜಿ ಬಿಹಾರಕ್ಕೆ ಹೋದರು. ಅಲ್ಲಿ ಶಾಂತಿಸ್ಥಾಪನೆ ಮಾಡಿ ದೆಹಲಿಯ ಕರೆಬರಲು ಅಲ್ಲಿಗೆ ಹೋದರು. ದೆಹಲಿಗೆ ನಿರಾಶ್ರಿತರು ತಂಡೋಪತಂಡವಾಗಿ ಬಂದಿದ್ದರು. ಕೆಲವರ ಮನಸ್ಸಿನಲ್ಲಿ ದ್ವೇಷ ದಳ್ಳುರಿಯಾಗಿತ್ತು. ಅವರು ಮುಸ್ಲಿಮರನ್ನು ಕೊಲ್ಲಲಾರಂಭಿಸಿದರು. ದೆಹಲಿಯ ಜಾತ್ಯಂಧ ಸಿಕ್ಖರು ಮತ್ತು ಹಿಂದುಗಳು ಅವರಿಗೆ ಒತ್ತಾಸೆ ಕೊಟ್ಟರು.

ಇಂಡಿಯಾದ ಎಲ್ಲ ಭಾಗಗಳ ಜಾತ್ಯಂಧ ಹಿಂದುಗಳಿಗೂ ಮುಸ್ಲಿಮರು ದೇಶಬಿಟ್ಟು ತೊಲಗಿ ಹೋಗುವುದು ಬೇಕಾಗಿತ್ತು. ಅವರು ಇಂಡಿಯಾದಲ್ಲಿಯೇ ಉಳಿದು ಇತರರೊಂದಿಗೆ ಮೈತ್ರಿಯಿಂದಿರ ಬೇಕೆಂದು ಗಾಂಧೀಜಿ ಜವಾಹರಲಾಲರ ಅಭಿಮತ. ಜನ ತಮ್ಮ ಮಾತು ಕೇಳದಿರಲು ಗಾಂಧೀಜಿ ಮನಸ್ಸಿಗೆ ತುಂಬ ವ್ಯಥೆಯಾಯಿತು. ದೆಹಲಿಯಲ್ಲಿ ಮುಸ್ಲಿಮರ ವಿರುದ್ಧ ಭಾವನೆ ತಾಂಡವವಾಡುತ್ತಿತ್ತು. ಪಾಕಿಸ್ಥಾನ ತಪ್ಪು ಹಾದಿ ತುಳಿದರೂ ನಾವು ಆ ಮಾರ್ಗ ಅನುಸರಿಸಬಾರದೆಂದು ಗಾಂಧೀಜಿ ಹೇಳಿದರು. ನಮ್ಮ ಸಹನೆ, ಪ್ರೇಮ, ಗುಣಗಳು ಪರಂಪರಾಗತವಾದವು. ಅವುಗಳ ಕೀರ್ತಿ ಎಷ್ಟರದಾಗುವುದು? ನಮ್ಮ ವೈಭವಯುತ, ಪ್ರಾಚೀನ ಕಾಲದ ನೀತಿಗನುಗುಣವಾಗಿ ನಾವು ಬಾಳುವೆ ಮಾಡಬೇಕು ಎಂದು ಗಾಂಧೀಜಿ ಸಾರಿದರು. ಜನ ತಮ್ಮ ಮನಸ್ಸಿನಿಂದ ದ್ವೇಷವನ್ನು ತೊಡೆದು ಹಾಕುವವರೆಗೆ ಮತ್ತು ಮುಸ್ಲಿಮರಿಗೆ ಸಹನೆ, ಸೌಹಾರ್ದ ತೋರುವವರೆಗೆ ತಾವು ಪಾರಣೆ ಮಾಡುವುದಿಲ್ಲವೆಂದು ಶಪಥ

ಮಾಡಿ ಉಪವಾಸವನ್ನಾರಂಭಿಸಿದರು. ಅವರ ಉಪವಾಸದ ನಾಲ್ಕನೆಯ ದಿನ ದೆಹಲಿಯ ಜನ ಒಟ್ಟಾಗಿ ಬಂದು ಅವರು ಹೇಳಿದಂತೆ ಮಾಡುವುದಾಗಿ ಮಾತುಕೊಟ್ಟರು. ಗಾಂಧೀಜಿ ಉಪವಾಸ ತೊರೆದರು. ಜನ ಹಿರಿಹಿರಿ ಹಿಗ್ಗಿತು.

ದೇಶಾದ್ಯಂತ ಕೆಲವು ಉಗ್ರಗಾಮಿಗಳಾದ ಜಾತ್ಯಂಧ ಹಿಂದೂ ಸಿಕ್ಖರು ಗಾಂಧೀಜಿಯವರನ್ನು ದ್ವೇಷಿಸತೊಡಗಿದರು. ಅವರು ಸತ್ತರೆ ಸಾಕೆಂದು ಹಾರೈಸಿದರು. ಅವರನ್ನೂ, ಜವಾಹರಲಾಲರನ್ನೂ ತೀರಿಸಿಬಿಡಲು ಕೆಲವರು ಸಂಚು ಹೂಡಿದರು.

ಒಂದು ಮಧ್ಯಾಹ್ನ ಒಬ್ಬ ತರುಣ ಗಾಂಧೀಜಿಯವರ ಮೇಲೆ ಒಂದು ಬಾಂಬು ಒಗೆದ. ಆದರೆ ಬಾಂಬು ಗಾಂಧೀಜಿಯವರಿಗೆ ತಗುಲದೆ ದೂರಬಿತ್ತು. ಅಮೃತಸರದಲ್ಲಿ ಎರಡು ದಿನಗಳಾನಂತರ ಜವಾಹರಲಾಲರು ಭಾಷಣ ಮಾಡುತ್ತಿದ್ದಲ್ಲಿ ಇಬ್ಬರು ಬಾಂಬುಗಳು ಸಹಿತ ಸಿಕ್ಕಿಬಿದ್ದರು. ೧೯೪೮ ಜನವರಿ ೩೦ನೆಯ ತಾರೀಕು ಸಂಜೆ ಐದು ಗಂಟೆಗೆ ಗಾಂಧೀಜಿ ನಿತ್ಯದಂತೆ ಪ್ರಾರ್ಥನೆಯ ಮೈದಾನಕ್ಕೆ ಹೋಗುತ್ತಿದ್ದರು. ಅವರು ವೇದಿಕೆಯ ಬಳಿ ಹೋಗುತ್ತಿರುವಂತೆ ಒಬ್ಬ ತರುಣ ಅವರನ್ನು ಸಮೀಪಿಸಿದ. ಈ ಮನುಷ್ಯ—ಹಿಂದೂ—ಗಾಂಧೀಜಿಯವರ ಪಾದಗಳನ್ನು ಮುಟ್ಟಿ ನಮಸ್ಕರಿಸುವಂತೆ ನಟಿಸಿದ. ಬಗ್ಗಿದಾಗ ಒಳಗೆ ಅಡಗಿಸಿಟ್ಟುಕೊಂಡಿದ್ದ ರಿವಾಲ್ವರ್ ತೆಗೆದು ಗಾಂಧೀಜಿಯವರ ಮೇಲೆ ಪ್ರಯೋಗಿಸಿದ. ಮೂರು ಗೋಲಿಗಳು ಗಾಂಧೀಜಿಯವರ ಹೊಟ್ಟೆ ಎದೆಯನ್ನು ಪ್ರವೇಶಿಸಿದವು.

ಗಾಂಧೀಜಿ ಬಿದ್ದರು. ಅವರ ತುಟಿಗಳಿಂದ 'ಹಾ! ರಾಮ್' ಎಂದು ದೇವರ ಹೆಸರು ಹೊರ ಬಿತ್ತು. ಕೆಲವು ನಿಮಿಷಗಳಲ್ಲಿ ಬಾಪು ಕಣ್ಮುಚ್ಚಿಕೊಂಡರು.

ನಮ್ಮ ರಾಷ್ಟ್ರಪಿತ ಇಂತು ಮರಣ ಕಂಡ. ದೇಶ ದಿಗ್ಭ್ರಾಂತವಾಯಿತು. ಜನ ಗೋಳೋ ಎಂದು ಅತ್ತರು.

ಮಹಾತ್ಮರ ಸಾವು ಎಲ್ಲರನ್ನೂ ಚಕಿತರನ್ನಾಗಿಸಿತು. ಜಗತ್ತಿನ ಎಲ್ಲ ಭಾಗಗಳ ಜನರೂ ಮರುಗಿದರು. ಇಂಡಿಯಾ ಪ್ರಜೆಗಳಿಗೆ ಅವರು ಸಮಾಧಾನ ಸೂಚಿಸಿ ಪತ್ರಗಳನ್ನು ಬರೆದರು.

ದೇಶದ ಮೇಲೆ ಕತ್ತಲೆ ಕವಿಯಿತು.

ಪಂಡಿತ ನೆಹ್ರೂ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದರು. ಗಾಂಧೀಜಿಯನ್ನು ತಂದೆಯೆಂದು ಭಾವಿಸಿ ಅವರು ಪ್ರೀತಿಸುತ್ತಿದ್ದರು. ಅವರ ಧ್ವನಿ ದುಃಖದಿಂದ ಗದ್ಗದವಾಗಿತ್ತು. ನೆಹ್ರೂ ಹೇಳಿದರು:

'ನಮ್ಮ ಜೀವನದಿಂದ ಬೆಳಕು ಹೋಯಿತು. ಕತ್ತಲೆ ಎಲ್ಲೆಲ್ಲೂ ಕವಿದಿದೆ....ಬೆಳಕು ಹೋಯಿತೆಂದು, ತಪ್ಪು ಹೇಳಿದೆ. ಈ ದೇಶದಲ್ಲಿ ಬೆಳಗಿದ ಬೆಳಕು ಸಾಧಾರಣ ಬೆಳಕಲ್ಲ. ಇದುವರೆಗೆ ಈ ದೇಶವನ್ನು ಬೆಳಗಿಸಿದ ಬೆಳಕು ಇನ್ನುಮುಂದೂ ಬೆಳಗಿಸುತ್ತದೆ. ಸಾವಿರ ವರ್ಷಗಳಾದ ಮೇಲೂ ಆ ಬೆಳಕು ಕಂಗೊಳಿಸುತ್ತದೆ. ಜಗತ್ತು ಅದನ್ನು ನೋಡುತ್ತದೆ. ಅದು ಅಸಂಖ್ಯಾತ ಹೃದಯಗಳಿಗೆ ಶಾಂತಿ ಸಮಾಧಾನವನ್ನು ಕೊಡುತ್ತದೆ. ಆ ಬೆಳಕು ಜೀವಂತ ಸತ್ಯದ—ಅನಂತ ಸತ್ಯಗಳ ಪ್ರತೀಕವಾಗಿತ್ತು.

ಆ ಬೆಳಕು ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಯಿಸಿ, ತಪ್ಪಿನಿಂದ ನಮ್ಮನ್ನು ಪಾರು ಮಾಡಿ, ಈ ಪುರಾತನ ದೇಶವನ್ನು ಸ್ವಾತಂತ್ರ್ಯಕ್ಕೆ ಒಯ್ದಿತು.'



| ಕ್ರಿ. ಶ. | | |
|---|---|---|
| ೧೨೦೦-೧೫೫೫ | ಉತ್ತರದ ಪಠಾಣ ರಾಜ್ಯಗಳು ದಾಸ, ಖಿಲ್ಜಿ, ತುಘಲಕ್, ಸೈಯದ್, ಲೋಡಿ, ಸೂರಿವಂಶಗಳು | ಉತ್ತರ ಹಿಂದೂಸ್ಥಾನದ ಮೇಲೆ ಮುಸ್ಲಿಮರ ಆಕ್ರಮಣ. ಇಬನ್ ಬಟೂಟನ ಆಗಮನ. ಕವಿ ಅಮೀರ್ ಖುಸ್ರೊ. |
| ೧೪/೧೬ ಶತಮಾನಗಳು | ವಿಜಯ ನಗರ ಸಾಮ್ರಾಜ್ಯ ಪಾಂಡ್ಯ, ಚೋಳ ವಂಶಗಳ ಅವನತಿ | |
| ೧೫/೧೬ ಶತಮಾನಗಳು | ಮಹಾಪುರುಷರು— ರಾಮಾನುಜ, ರಮಾನಂದ, ತುಲಸೀದಾಸ, ವಲ್ಲಭ, ಮೀರಾಬಾಯಿ, ತುಕಾರಾಂ, ಚೈತನ್ಯ, ಕಬೀರ್, | ವೈಷ್ಣವ, ಶೈವ ಮತ್ತು ಶಕ್ತಿಧರ್ಮಗಳ ಬೆಳವಣಿಗೆ. |
| | ನಾನಕ್ | ಸಿಖ್ ಧರ್ಮ ಸ್ಥಾಪನೆ |
| | ಮುಘಲ ಸಾಮ್ರಾಜ್ಯ | |
| ೧೫೨೬-೧೫೩೦ | ಬಾಬರ್ | **ಬಾಬರ್‌ನಾಮಾ** |
| ೧೫೩೦-೧೫೪೦ | ಹುಮಾಯೂನ್ | |
| ೧೫೫೬-೧೬೦೫ | ಅಕಬರ್ | ಹಿಂದೂ-ಮುಸ್ಲಿಮ ಐಕ್ಯ. ಫತೇಪೂರ್ ಸಿಕ್ರಿ. ಮುಘಲ, ರಜಪೂತ ಚಿತ್ರಕಲೆ. ಯೂರೋಪಿನ ವರ್ತಕರು ಮತ್ತು ಜೆಸ್ಯೂಟರ ಆಗಮನ. **ಅಕಬರನಾಮಾ** |
| ೧೬೦೫-೧೬೨೭ | ಜಹಾಂಗೀರ್ ಮತ್ತು ನೂರ್‌ಜಹಾನ್ ಚಕ್ರವರ್ತಿನಿ | ಈಸ್ಟ್ ಇಂಡಿಯಾ ಕಂಪೆನಿಯ ಸ್ಥಾಪನೆ. |

| | | |
|---|---|---|
| ಕ್ರಿ.ಶ. | | |
| ೧೬೨೭-೧೬೫೮ | ಷಹಜಹಾನ್ | ತಾಜಮಹಾಲ್, ಹಳೆಯಕೋಟೆ, ಜುಮ್ಮಾ ಮಸೀದಿ. |
| ೧೬೫೮-೧೭೦೭ | ಆವರಂಗಜೀಬ | ಶಿವಾಜಿ, ಗುರು ಗೋವಿಂದ ಸಿಂಗ್. |
| ೧೭೩೯ | ನಾದಿರ್‌ಷಹ ದೆಹಲಿಯನ್ನು ಮುತ್ತುತ್ತಾನೆ | |
| ೧೭೫೭-೧೭೮೫ | ಕ್ಲೈವ್ ಮತ್ತು ಹೇಸ್ಟಿಂಗ್ಸ್ | ದೇಶದ ನಾಶ. |
| ೧೮೫೭ | ಸ್ವಾತಂತ್ರ್ಯ ಸಮರ | ಚಕ್ರವರ್ತಿ ಬಹದೂರ್ ಷಹ. ಝಾನ್ಸಿ ರಾಣಿ. |
| ೧೮೬೯ | ಮಹಾತ್ಮಾ ಗಾಂಧಿಯವರ ಜನನ | |
| ೧೮೮೫ | ಭಾರತ ರಾಷ್ಟ್ರಸಭೆಯ ಸ್ಥಾಪನೆ | |
| ೧೯೦೯ | ಮಿಂಟೋ-ಮಾರ್ಲೆ ಸುಧಾರಣೆಗಳು | |
| ೧೯೧೯ | ಜಲಿಯನ್‌ವಾಲಾ ಬಾಗ್ | |
| | ಮಹಾತ್ಮರ ಅಹಿಂಸಾತ್ಮಕ ಸಮರ | ‘ಹಿಂದೂ-ಮುಸಲ್ಮಾನರಿಗೆ ಜಯವಾಗಲಿ’ |
| ೧೯೪೦ | ಮುಸ್ಲಿಂ ಲೀಗಿನ ‘ಪಾಕಿಸ್ತಾನ’ ಬೇಡಿಕೆ | |
| ೧೯೪೨ | ‘ಭಾರತ ಬಿಟ್ಟು ತೊಲಗಿ’ | |
| ೧೯೪೭ ಆಗಸ್ಟ್ ೧೫ | ಸ್ವಾತಂತ್ರ್ಯ ಘೋಷಣೆ ಇಂಡಿಯಾ, ಪಾಕಿಸ್ತಾನಗಳ ವಿಭ | |
| ೧೯೪೮ ಜನವರಿ ೩೦ | ಮಹಾತ್ಮಾಗಾಂಧಿಯ [illegible] | |